ಕಂಠೀರವ

ಆರ್ದಾಣೆ

ESTD. 1919 ಸ್ಥಾಪನೆ.

ವಾರಕ್ಕೆರಡಾವರ್ತಿ ಪ್ರಕಟವಾಗುವ ಶ್ರೇಷ್ಠವರ್ಗದ ಕನ್ನಡ ವಾರ್ತಾಪತ್ರಿಕೆ.

KANTEERAVA, MANGALORE

The only Nationalist Kanarese BI-WEEKLY with the largest circulation.

ಸಂಪುಟ ೧೪ VOL. XVIII | ಮಂಗಳೂರು, ೧೯೩೬ನೇ ಇಸವಿ ನವಂಬರ ತಾರೀಕು ೨೦ನೇ ಶುಕ್ರವಾರ MANGALORE, FRIDAY, NOVEMBER 20, 1936 | ಸಂಚಿಕೆ ೬೬ NO. 66

BANK with the

UDIPI BANK Ltd.

(KALSANK, ═══ UDIPI ═══ S. KANARA)

and thereby **DEFEND** your own interest.

ALL KINDS OF BANKING BUSINESS TRANSACTED.

ESTD: 1925

The Canara Banking Corporation, Udipi, Ltd.

(Incorporated in British India)

Statement of affairs as at 31st October 1936:—

Capital & Liabilities:—

1.	Paid up capital	Rs.	2,88,925—0—0
2.	Reserve & other Funds	Rs.	3,72,349-15-11
3.	DEPOSITS	Rs.	36,19,400—1—9
4.	Due to Bankers	Rs.	5,252—3—8
5.	Bills per contra	Rs.	27,035-10—7
6.	Suspense	Rs.	5,215-14—0
7.	Sundries	Rs.	1,48,228 - 4—2
	TOTAL	Rs.	44,66,407—2—1

Property & Assets:—

1.	Landed property, premises etc.	Rs.	3,18,625—1—5
2.	Authorised Investments	Rs.	22,50,371—9—6
3.	Govt. Securities etc. at cost	Rs.	11,19,762-14—0
4.	Deposits with other Banks	Rs.	2,56,000—0—0
5.	Bills for collection	Rs.	27,035-10—7
6.	Sundries	Rs.	51,614—4—2
7.	Cash on hand & with Bankers at call	Rs.	4,42,997-10—5
	TOTAL	Rs.	44,66,407—2—1

ಪೊಪ್ಯುಲರ್

- ಬ್ರಿಟಿಷ್ ಕರ್ನಾಟಕದ ಪ್ರಥಮ ವಿಮಾಸಂಸ್ಥೆ—ದಕ್ಷಿಣ ಕನ್ನಡದ ಆದರ್ಶ ವಿಮಾಸಂಸ್ಥೆ.
- ಪ್ರಥಮ ವರ್ಷದಿಂದಲೇ ವಿಮಾನಿಧಿ ಸ್ಥಾಪಿತವಾಗಿದ್ದು ಇದು ವರ್ಷಂಪ್ರತಿ ಬೆಳೆಯುತ್ತಾ ಇದೆ.
- ಪ್ರಥಮ ಮೌಲ್ಯವೇತನದಲ್ಲಿಯೇ ಬೋನಸ್—ಅಖಿಲ ಕರ್ನಾಟಕದಲ್ಲಿ ಪ್ರಥಮ ಬಾರಿಯೇ ಬೋನಸನ್ನು ಹಂಚಿದ ಸಂಸ್ಥೆಯೆಂದರೆ ಇದೊಂದೇ.

ವಿಮೆಯನ್ನು ಮಾಡಲೂ, ಮಾಡಿಸಲೂ ಇದೀಗ ನಿಮ್ಮ ಸಂಸ್ಥೆ.
ಸುಲಭವಾದ ವಿಮಾಕಂತುಗಳು—ಸರ್ವರಿಗೂ ಅನುಕೂಲವಾದ ಅತ್ಯಾಧುನಿಕ ಶಾಸ್ತ್ರೀಯ ವಿಮಾಪದ್ಧತಿಗಳು—ಅಡಳಿತೆಯು ಸುವ್ಯವಸ್ಥಿತ—ಭದ್ರತೆಯು ವಿಶ್ವಾಸಾರ್ಹ.

ಯೋಗ್ಯ ವಿಜಂಟಿರುಗಳಿಗೆ ಧಾರಾಳ ಕಮಿಶನ್.

ಮಾಹಿತಿಪತ್ರ ಇತ್ಯಾದಿ ಹೆಚ್ಚಿನ ವಿವರಗಳಿಗೆ ಮಂಗಳೂರಿನ ಮುಖ್ಯ ಕಾರ್ಯಾಲಯಕ್ಕೆ ಬರೆಯಿರಿ.

Asiatic Government Security
LIFE ASSURANCE CO., LTD.,

Established 1913. **Life Branch 1922.**

The Pioneer Insurance Institution in Mysore State transacting business throughout India. Varied plans of Assurances for both male and female lives at competitive rates. Attractive Policies with liberal privileges including Disability Benefits. Substantial Bonus. Profitable Agency Connections.

For Prospectus and Agency terms apply to:

Head Office: "Asiatic Buildings" Bangalore City,

OR

to any of the Company's undernoted Branches:

Madras Branch: 187, Mount Road.
Bombay Branch: Hornby Road, Fort.
Calcutta Branch: 15, Clive Street.

V. RANGASWAMI, B. A., B. L.,
General Manager.

Complete Service

We are here to serve your banking requirements, and to place at your command the practical cooperation of our resources and banking facilities. Whether your needs are local, provincial or world-wide this bank through its experience, connections and organisations is eminently qualified to serve you.

THE PALAI CENTRAL BANK, LIMITED,

(INCORPORATED IN TRAVANCORE.)

Bunder Road, **MANGALORE.**

London Agents: LLOYDS BANK, LIMITED.

New York ,, : NATIONAL CITY BANK OF NEW YORK.

ನೋಸಹೋಗಬೇಡಿ!

ಶ್ರೀ ಅಂಬಾಳ್ ಮದರಾಸು ನಶ್ಯವು ಅನೇಕ ವರ್ಷಗಳಿಂದ ಅಸಮಾನವಾದ ಮತ್ತು ಶಾಶ್ವತವಾದ ಕೀರ್ತಿಯನ್ನು ಹೊಂದಿ ಜಗತ್ಪ್ರಸಿದ್ಧವಾಗಿರುವುದನ್ನು ಅರಿತು ಕೆಲವರು ಹಣಆಸೆಯುಳ್ಳವರಾಗಿ ಕಿರಿದು ಹೊಗೆಸೊಪ್ಪನ್ನು ತರಿಸಿ ಅವುಗಳಲ್ಲಿರುವ ಮಣ್ಣು ದುಂಬು, ಮಸಿಗಳನ್ನು ತೆಗೆಯದೆ ಬೆರಕೆ ತುಪ್ಪವನ್ನು ಸೇರಿಸಿ ನಶ್ಯವನ್ನು ತಯಾರಿಸಿ ವ್ಯಾಪಾರಸ್ಥರಲ್ಲಿ ಹೋಗಿ ಕಡಿಮೆ ಬೆಲೆಗೆ ಸಾಲವಾಗಿ ಕೊಟ್ಟು ಬರುವರು. ಕೆಲವು ವ್ಯಾಪಾರಸ್ಥರು ಸರಸವಾಗಿಯೂ ಸಾಲವಾಗಿಯೂ ಸಿಗುವುದರಿಂದ ಮೇಲ್ಕಂಡ ಹಲ್ಕಾ ನಶ್ಯವನ್ನು ತರಿಸಿ ಇದೇ ಹಸನಾದ ಮದರಾಸು ನಶ್ಯವೆಂದು ಬೆಕರಿ ಮಾಡಿ ಬರುತ್ತಿರುವರು. ಸಹೋದರರೇ! ಮೋಸಹೋಗಬೇಡಿ. ಇಂಥಾ ಪೋಲಿ ನಶ್ಯವನ್ನು ಉಪಯೋಗಿಸಿದರೆ ಮೇಲ್ಕಂಡ ನಶ್ಯದಲ್ಲಿರುವ ಮಣ್ಣು, ಹುಸಿ ಮೊದಲಾದವುಗಳು ಮೂಗಿನ ಮೂಲಕ ಮೆದುಳಿಗೆ ಹೋಗಿ ಜೊಮ್ಮಸಿಸ್ಸು ಬಲೆಯೋಪಾತಿಯಲ್ಲಿ ಮುಚ್ಚಿಕೊಂಡು ಆಜ್ಞಾನವನ್ನುಂಟುಮಾಡುವುದು, ನಾನಿಕದ್ವಾರವನ್ನು ಬಂಧಿಸುವುದು. ಮೂಗಿನಲ್ಲಿ ವ್ರಣವನ್ನುಂಟುಮಾಡುವುದಲ್ಲದೆ ಪಂಚೇಂದ್ರಿಯಗಳ ಶಕ್ತಿಯನ್ನು ಕುಂಠಿಸುವದು. ಆದುದರಿಂದ ಅಪ್ರತಿಮ, ಅನೇಕ ವರ್ಷಗಳಿಂದ ಅನೇಕ ಡಾಕ್ಟರುಗಳಿಂದಲೂ, ಜಡ್ಜಿಗಳಿಂದಲೂ, ಇನ್ನೂ ಅನೇಕ ಶ್ರೀಮಂತರಿಂದಲೂ ಶ್ಲಾಘಿಸಲ್ಪಟ್ಟಿರುವ ಶ್ರೀ ಅಂಬಾಳ್ ಅಂಡ್ ಕಂಪೆನಿ, ಪೋಸ್ಟ್ ಬಾಕ್ಸ್ ನಂ. ೩, ಮದರಾಸು, ಇವರ ಮದರಾಸು ನಶ್ಯ, ಸುಗಂಧ ನಶ್ಯವನ್ನೇ ಉಪಯೋಗಿಸಿ ಆನಂದಪಡಿರಿ. ಎಲ್ಲಾ ವ್ಯಾಪಾರಸ್ಥರಲ್ಲಿಯೂ ಸಿಗುವುದು.

ಸೂತಿಕಾವಾಯು ಅಪಸ್ಮಾರ 10 ನಿಮಿಷಗಳಲ್ಲಿ ನಿಲ್ಲಿಸಲ್ಪಡುವದು, "ವಾಯುಮುಕ್ತಾ"

ಈ ಔಷಧವು ದೇಶೀಯ ಮೂಲಿಕೆಗಳಿಂದ ತಯಾರಿಸಲ್ಪಡುತ್ತದೆ. ಕಳೆದ 30 ವರ್ಷಗಳಿಂದ ಮಾನವರ ಸೇವೆಯನ್ನು ಮಾಡುತ್ತಿದೆ. ಅನಾರೋಗ್ಯದಲ್ಲಿರುವ ಅಥವಾ ಗರ್ಭಿಣಿಯರಾಗಿರುವ ಸಾವಿರಾರು ಸ್ತ್ರೀಯರ ಈ ಭಯಂಕರ ವ್ಯಾಧಿಯಿಂದ ಮುಕ್ತರಾಗಿದ್ದಾರೆ. ಹಿಸ್ಟೀರಿಯಾವನ್ನು ಭೂತ ಯಾ ಪ್ರೇತಬಾಧೆಯೆಂದು ತಿಳಿಯತಕ್ಕುದಲ್ಲ. ಅದು ಇತರ ರೋಗಗಳಂತೆಯೇ ದೇಹಸಂಬಂಧವಾದ ರೋಗವಾಗಿರುತ್ತದೆ. ಬಡ ಬಡಿಕೆ, ಕೂಗು, ಹೊರಳಾಟ, ಬಲಹೀನತೆ, ತಲೆ ತಿರುಗುವಿಕೆ, ಶೀತ, ಎಡೆಬಿಡದ ಅಪಸ್ಮಾರ, ಹುಚ್ಚು ತನ ಮೊದಲಾದ ಪೇಚಾಟಗಳು 24 ತಾಸುಗಳಲ್ಲಿ ನಿಲ್ಲುವುವು. ಸ್ಮೃತಿಯಿಲ್ಲದಿರುವಿಕೆ, ಅಪಸ್ಮಾರ, ಒಡ್ಡಾಟ 10 ನಿಮಿಷಗಳಲ್ಲಿ ಮಾಯವಾಗುತ್ತವೆ. ಮತ್ತು ರೋಗಿಯು ಶಾಂತಿಯನ್ನೂ, ತೃಪ್ತಿಯನ್ನೂ ಪಡೆಯುತ್ತಾನೆ. 10 ದಿನಗಳ ಔಷಧಿಗೆ ರೂ. 2/- ಮತ್ತು 30 ದಿನಗಳ ಔಷಧಕ್ಕೆ ರೂ. 5/-. ಪೋಸ್ಟೇಜು ಅಲಾಯಿದಾ.

C. L. Namawala,
Palace Road, BARODA.

12, 25-9.

ಅಪೂರ್ವ ಗ್ರಂಥಗಳು.

ಪುರಂದರ ದಾಸರ ಕೀರ್ತನೆಗಳು 5 ಭಾಗಗಳು ಪೂರ್ತಿ 3—7—0. ಋಗ್ವೇದ ಅಥವಾ ಯಜುರ್ವೇದ ವೈಷ್ಣವ ಅಹ್ನಿಕ ಮಂಜರಿ ಕಿತ್ತಾ ನಾರು ಬೈಂಡು 2—8—0. ಪಂಚದಶೀ ತತ್ವಾರ್ಥ (ಚಿದಂಬರಯ್ಯ) 2—0—0. ಭಗವದ್ಗೀತಾ ಸಾರ ವಿಚಾರ (ಚಿದಂಬರಯ್ಯ) 1—8—0. ಶ್ರೀವೇದಾಂತ ಪಂಚದಶೀ 5—0—0. ಸವನಾಥ ಭಕ್ತಿಸಾರ 2—8—0.

ಟಪಾಲು ಖರ್ಚು ಪ್ರತ್ಯೇಕ.

ಅಡ್ವಾನ್ಸಿಲ್ಲದ ಆರ್ಡರ್‌ಗಳಿಗೆ ಗಮನ ಕೊಡಲಾಗುವುದಿಲ್ಲ.

ಇಂಗ್ಲಿಷ್ ಕನ್ನಡ ಕೆಟಲಾಗು ಅಪೇಕ್ಷಿಸುವವರಿಗೆ ಮುಫತ್ತಾಗಿ ರವಾನಿಸಲಾಗುವುದು.

ಎಚ್. ಎನ್. ರಾವ್ ಬ್ರದರ್ಸ್,
ಪುಸ್ತಕ ವ್ಯಾಪಾರಿಗಳು,
ಚಿಕ್ಕಪೇಟೆ, ಬೆಂಗಳೂರು ಸಿಟಿ.

For your Diamonds
enquire at
Sowcar
SRINIVAS RANGA PAI,
Sowcar Mahal,
Car Street,
MANGALORE.

ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ದಿವಾನ್ ಸಾಹೇಬರ ಭಾಷಣ.

(ಮುಂದುವರಿದುದು)

ಸಹಕಾರ ಸಂಘಗಳು.

ಸಹಕಾರ ಸಂಘಗಳ ಆಡಳಿತವನ್ನು ಉತ್ತಮಪಡಿಸುವ ವಿಚಾರದಲ್ಲಿ ಸಲಹೆಗಳನ್ನು ಕೊಡಲು, ಹಿಂದೆ ಮುಖ್ಯ ನ್ಯಾಯಾಧೀಶರಾಗಿದ್ದು ಆ ಹುದ್ದೆಯಿಂದ ನಿವೃತ್ತರಾಗಿರುವ ರಾಜಧರ್ಮ ಪ್ರವೀಣ ದಿವಾನ್ ಬಹದ್ದೂರ್ ಕೆ ಎಸ್. ಚಂದ್ರಶೇಖರ ಐಯ್ಯರ್ ಅವರ ಅಧ್ಯಕ್ಷತೆಯಲ್ಲಿ ನೇಮಕವಾಗಿದ್ದ ಸಮಿತಿಯವರ ವರದಿಯು ಬಂದುದೇ ಸಹಕಾರದ ಬಾಬಿನಲ್ಲಿ ಈ ಸಾರಿ ನಡೆದ ಅತ್ಯಂತ ಮುಖ್ಯವಾದ ದೊಡ್ಡ ಕೆಲಸ. ಅವರ ವರದಿಯನ್ನು ಪ್ರಕಟಿಸಿ, ಅವರ ನಾನಾ ಸಲಹೆಗಳ ಮೇಲೂ ಮಹಾಜನರು ಅಭಿಪ್ರಾಯಗಳನ್ನು ಕಳುಹಿಸುವಂತೆ ಕೇಳಲಾಗಿದೆ. ಈ ಸಮಿತಿಯವರ ಸಹಾಯದ ಪರಿಣಾಮವಾಗಿ ಸರಕಾರದವರು ಸಹಕಾರ ಸಂಘಗಳಲ್ಲಿ ನಾನಾ ಸುಧಾರಣೆಗಳನ್ನು ಆಚರಣೆಗೆ ತರುವವರಾಗಿದ್ದಾರೆ. ಮುಖ್ಯವಾಗಿ, ಪರಸ್ಪರ ಸಹಾಯ ಸಂಘಗಳಿಗೆ ಸಾಲಗಳನ್ನು ಕೊಟ್ಟು ಹಣವನ್ನು ಒದಗಿಸತಕ್ಕ ಪ್ರಧಾನ ಬ್ಯಾಂಕುಗಳ ಸಂಬಂಧವಾಗಿ ಸುಧಾರಣೆಗಳು ನಡೆಯಬೇಕಾದುದು ಅಗತ್ಯವಾಗಿದೆ. ಸಾಲಗಳ ಮೊಬಲಗುಗಳ ವಸೂಲಿಯು ಬಹಳ ಕಡಮೆಯಾಗಿದೆ. ಏಪೆಕ್ಸ್ ಬ್ಯಾಂಕಿಗೂ ಜವಿೂನು ಅಡಮಾನದ ಬ್ಯಾಂಕಿಗೂ ಬರಬೇಕಾದ ಬಾಕಿಗಳು ೧೨ ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟು ಹೆಚ್ಚಿವೆ. ಹೀಗಾಗಿರುವುದಕ್ಕೆ ಈಗ ಒದಗಿರುವ ಹಣದ ಮುಗ್ಗಟ್ಟೇ ಮುಖ್ಯ ಕಾರಣವೆನ್ನಲು ಸಂದೇಹವಿಲ್ಲ. ಈ ಮುಗ್ಗಟ್ಟಿನ ಸ್ಥಿತಿಯಲ್ಲಿ ಏಪೆಕ್ಸ್ ಬ್ಯಾಂಕಿನವರು ಉದಾರವಾಗಿ ಜನರಿಗೆ ಸಹಾಯ ಮಾಡಿದ್ದಾರೆ. ಅವರು ಸುಸ್ತಿ ಬಾಕಿಗಳ ಮೇಲೆ ಬಡ್ಡಿಯನ್ನು ಬಿಟ್ಟುಕೊಟ್ಟಿದ್ದಾರೆ; ಸಾಮಾನ್ಯ ಬಡ್ಡಿಯ ದರವನ್ನು ಕಡಮೆ ಮಾಡಿದ್ದಾರೆ; ಅಲ್ಲದೆ (ಏಪೆಕ್ಸ್ ಬ್ಯಾಂಕಿನವರ) ಸಾಲಗಳನ್ನು ತೀರಿಸಲು ಪ್ರಾಮಾಣಿಕತೆಯಿಂದ ಪ್ರಯತ್ನ ಮಾಡಿದ ಸಂಘಗಳಿಗೆ ಸಾಲ ತೀರ್ವೆಯ ಅವಧಿಯನ್ನೂ ಸಹ, ಆ ಬ್ಯಾಂಕಿನವರು ಹೆಚ್ಚಿಸಿಕೊಟ್ಟು ಸಹಾಯ ಮಾಡಿದ್ದಾರೆ. ಜನರ ಕೋರಿಕೆಯನ್ನು ನೆರವೇರಿಸಿ ಕೊಡಲು ಸರಕಾರದವರು ನಡೆಯಿಸಿರುವ ಮತ್ತೊಂದು ಪ್ರಯತ್ನವೆಂದರೆ, ಜವಿೂನು ಅಡಮಾನದ ಬ್ಯಾಂಕಿನ ವ್ಯವಹಾರಗಳು ಇತರ ತಾಲ್ಲೂಕುಗಳಲ್ಲಿ ಕೂಡ ನಡೆಯುವಂತೆ ಅದರ ಕಾರ್ಯಕ್ಷೇತ್ರವನ್ನು ಹೆಚ್ಚಿಸಿಕೊಟ್ಟಿರುವುದು. ಮೊದಲೇ ಇದ್ದ ಜವಿೂನು ಅಡಮಾನದ ಸಹಕಾರ ಸಂಘಗಳ ಜೊತೆಗೆ ಮತ್ತೆ ನಾಲ್ಕು ಸ್ಥಾಪಿತವಾದುವು. ಅವುಗಳ ಒಟ್ಟು ಸಂಖ್ಯೆಯು ಇಪ್ಪತ್ತಮೂರಕ್ಕೆ ಹೆಚ್ಚಿತು. ಇನ್ನೂ ಹನ್ನೊಂದು ತಾಲ್ಲೂಕುಗಳಲ್ಲಿ ಈ ಜವಿೂನು ಅಡಮಾನದ ಶಿಸ್ತನ್ನು ಆಚರಣೆಗೆ ತರಬೇಕೆಂಬ ವಿಚಾರವು ಪರ್ಯಾಲೋಚನೆಯಲ್ಲಿದೆ.

ಕೋರ್ಟುಗಳು ಮತ್ತು ಪ್ರಜಾ ನೆಮ್ಮದಿ ರಕ್ಷಣೆ.

ಕೋರ್ಟುಗಳು ಮತ್ತು ಪ್ರಜಾನೆಮ್ಮದಿ ರಕ್ಷಣೆಯ ಬಾಬಿನ ವಿಚಾರ. ಅಪಾದಿತರನ್ನು ವಾರಂಟ್ಟಿಲ್ಲದೆಯೇ ಹಿಡಿಯಬಹುದಾದ ತಕ್ಸೀರುಗಳ ಸಂಖ್ಯೆಯು ಹೆಚ್ಚಿತು. ಪೋಲೀಸಿನವರು ತನಿಖೆಕ್ರಮ ಜರುಗಿಸಿದ ಇಂಥ ಮೊಕದ್ದಮೆಗಳ ಸಂಖ್ಯೆಯು ಶೇಕಡ ೧೬ರಷ್ಟು ಹೆಚ್ಚಿತು. ಎಂದರೆ ಇಂಥ ತಕ್ಸೀರುಗಳ ಸಂಖ್ಯೆಯು ೧೪,೨೧೭ರಿಂದ ೧೬,೫೨೬ಕ್ಕೆ ಹೆಚ್ಚಿತು. ತಪ್ಪು ಸಾಬೀತಾಗಿ ಶಿಕ್ಷೆಯಾದವುಗಳ ಸಂಖ್ಯೆಯು ಪ್ರತಿ ಸಾವಿರಕ್ಕೆ ೧೪೯ರಂತೆ ಹೆಚ್ಚಿತು. ತಕ್ಸೀರು ನಡೆದುದನ್ನು ಗ್ರಾಮನೌಕರರು ವರದಿ ಮಾಡುವುದೂ, ಪೋಲೀಸಿನವರು ತಕ್ಸೀರು ಸಂಬಂಧದ ತನಿಖೆಗಳನ್ನು ನಡೆಯಿಸುವುದೂ ಸರ್ವ ಪ್ರಕಾರಗಳಿಂದಲೂ ಉತ್ತಮಪಟ್ಟಿರುವಂತೆ ತಿಳಿದುಬಂದಿದೆ. ಮಳೆ ಬೆಳೆಗಳು ಯಥಾಪ್ರಕಾರ ನಡೆದು ಸುಭಿಕ್ಷವುಂಟಾಗಿ ಜನಗಳ ಬಡತನವು ಸ್ವಲ್ಪ ಕಡಮೆಯಾದರೆ, ತಕ್ಸೀರುಗಳು ನಡೆಯುವುದು ಕಡಮೆಯಾದೀತೆಂದು ಹಾರೈಸಬಹುದಾಗಿದೆ.

ಸಿವಿಲ್ ಕೋರ್ಟುಗಳಲ್ಲಿ ಮೊಕದ್ದಮೆಗಳು ಇತ್ಯರ್ಥವಾಗುವುದರಲ್ಲಿ ಸ್ವಲ್ಪಮಟ್ಟಿನ ಮೇಲ್ಪಾಟು ಕಂಡುಬಂದಿತು. ಆದಾಗ್ಯೂ ಇತ್ಯರ್ಥವಾಗಬೇಕಾದ ಹಳೆಯ ಮೊಕದ್ದಮೆಗಳು ಇನ್ನೂ ಅನೇಕವಾಗಿವೆ. ಮೊಕದ್ದಮೆಗಳು ಬೇಗಬೇಗ ಇತ್ಯರ್ಥವಾದುದಕ್ಕೆ ಒಬ್ಬರು ಆಡಿಷನಲ್ ಸಬ್‌ಜಡ್ಜಿಯವರನ್ನೂ ಮೂವರು ಹಂಗಾಮಿ ಮುನ್‌ಸೀಫರನ್ನೂ ನೇಮಕಮಾಡಿ ಸ್ಮಾಲ್‌ಕಾಜು ಕೋರ್ಟುಗಳ ಅಧಿಕಾರ ವ್ಯಾಪ್ತಿಯನ್ನು ಹೆಚ್ಚಿಸಿದುದೂ, ಅಡಿಷನಲ್ ಸೆಷನ್ಸ್ ಜಡ್ಜಿಗಳಿಗೆ ಅಸಲು ದಾವೆಗಳ ವಿಚಾರಣೆ ಅಧಿಕಾರವನ್ನು ಕೊಟ್ಟುದೂ ಕಾರಣ. ಸಿವಿಲ್ ಕೋರ್ಟುಗಳಿಗೆ ೨,೪೨೯ ದಾವೆಗಳು ಹೆಚ್ಚಾಗಿ ದಾಖಲಾದುವು. ಅದರ ಪರಿಣಾಮವಾಗಿ ಸಾಲಾಖ್ಯೆರಿನಲ್ಲಿ ತೀರ್ಮಾನವಾಗದೆ ಉಳಿದಿದ್ದ ದಾವೆಗಳ ಸಂಖ್ಯೆಯು ಹೆಚ್ಚುವುದಕ್ಕೆ ಬದಲಾಗಿ ಅವುಗಳ ಸಂಖ್ಯೆಯಲ್ಲಿ ೨,೪೨೨ ಕಡಮೆಯಾದುದು ಸಂತೋಷಕರವಾದ ಅಂಶ. ಮೈಸೂರಿನಲ್ಲಿ ಎರಡನೆಯ ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟನ್ನು ಸ್ಥಾಪಿಸಲಾಯಿತು.

ಚಿಕ್ಕ ವಯಸ್ಸಿನ ಅಪರಾಧಿಗಳನ್ನು ತಿದ್ದಿ ಸನ್ಮಾರ್ಗಕ್ಕೆ ತರಲನುಕೂಲಿಸುವಂತೆ ಅವರಿಗೆ ಶಿಕ್ಷಣಕೊಡುವುದಕ್ಕಾಗಿ ಬಾರ್ಸ್ಟಲ್ ಸ್ಕೂಲನ್ನು ಏರ್ಪಡಿಸುವ ವಿಚಾರವನ್ನು ಪರಿಶೀಲಿಸಿ ಸಲಹೆ ಹೇಳಲು ಒಂದು ಸಮಿತಿಯು ನೇಮಕವಾಯಿತು. ಅಸ್ಪರ ಹೊರತು, ಬಂದೀಖಾನೆಗಳ ಇಲಾಖೆಯಲ್ಲಿ ಮತ್ತಾವ ಮುಖ್ಯ ಕಾರ್ಯವೂ ನಡೆಯಲಿಲ್ಲ.

ವಿದ್ಯಾಭ್ಯಾಸ.

ವಿದ್ಯಾಭ್ಯಾಸ ವಿಚಾರಗಳಲ್ಲಿ ಗಣ್ಯವಾದ ಕೆಲವು ತೀರ್ಮಾನಗಳು ಸಲಹೆಯಾಗಿರುವುದು ಈ ವರ್ಷದಲ್ಲಿ ನಡೆದ ವಿಶೇಷ ಸಂಗತಿ. ಚಿಕ್ಕ ಮಕ್ಕಳ ಶಿಕ್ಷಣಕ್ಕಾಗಿ ವಿಶೇಷವಿಧದ ವಿಹಾರ ಶಾಲೆಗಳನ್ನು ಏರ್ಪಡಿಸಿ ಆಡಳಿತ ನಡೆಯಿಸುವ ವಿಚಾರದಲ್ಲಿ ವಿ॥ ಸುಲ್ತಾನ್ ಮೊಹಿಯುದ್ದೀನ್ ಅವರ ಅಧ್ಯಕ್ಷತೆಯಲ್ಲಿ ನೇಮಕವಾಗಿದ್ದ ಸಮಿತಿಯವರು ಬಹಳ ಸ್ವಾರಸ್ಯವಾದ ವರದಿಯೊಂದನ್ನು ಒಪ್ಪಿಸಿದ್ದಾರೆ. ಮಕ್ಕಳ ಶಿಕ್ಷಣದ ಇಂಥ ವಿಹಾರ ಶಾಲೆಗಳಿಗಾಗಿ ಗ್ರಾಂಟು ಮೊಬಲಗುಗಳನ್ನು ಕೊಡಲು ಸರ್ಕಾರದವರು ಏರ್ಪಾಡು ಮಾಡಿದ್ದಾರೆ. ಕಸಬುದಾರಿ ಶಿಕ್ಷಣಕ್ಕೂ, ಸಾಹಿತ್ಯ ಮುಂತಾದುವು ಪ್ರಧಾನವಾದ ಇತರ ಸಾಮಾನ್ಯ ಶಿಕ್ಷಣಕ್ಕೂ ಇರಬೇಕಾದ ಪರಸ್ಪರ ಸಂಬಂಧಗಳನ್ನು ಕುರಿತು ಪರ್ಯಾಲೋಚಿಸಿ ವರದಿಯನ್ನೊಪ್ಪಿಸುವುದಕ್ಕಾಗಿ ವಿ॥ ಎನ್. ಎಸ್. ಸುಬ್ಬರಾಯರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯು ನೇಮಕವಾಗಿದ್ದಿತು. ತಮ್ಮ ಪರ್ಯಾಲೋಚನೆಗೆ ವಹಿಸಿದ್ದ ವಿಚಾರವನ್ನು ಆ ಸಮಿತಿಯವರು ಕೂಲಂಕಷವಾಗಿ ಪರಿಶೀಲಿಸಿ ವರದಿಯನ್ನೊಪ್ಪಿಸಿದ್ದಾರೆ. ಅವರ ಸಲಹೆಗಳು ಸರ್ಕಾರದವರ ಪರ್ಯಾಲೋಚನೆಯಲ್ಲಿವೆ. ಆ ಸಲಹೆಗಳ ವಿಚಾರದಲ್ಲಿ ವಿಶೇಷ ಶ್ಲಾಘನೆಯು ದೊರೆತಿದೆ. ವಿಶ್ವವಿದ್ಯಾನಿಲಯಕ್ಕೆ ಸೇರಿದ ಕಾಲೇಜುಗಳ ಕರ್ತವ್ಯಗಳು ಮತ್ತಷ್ಟು ನಿಗದಿಯಾಗಿ ಸಮರ್ಪಕವಾಗಿರುವಂತೆ ಏರ್ಪಾಡು ಮಾಡುವ ವಿಚಾರವು ವಿಶ್ವವಿದ್ಯಾನಿಲಯದವರ ಪರ್ಯಾಲೋಚನೆಯಲ್ಲಿದ್ದಿತು. ಆ ಸಂಬಂಧವಾಗಿ ವೈಸ್ ಛಾನ್ಸೆಲರವರ ಮುಖ್ಯವಾದ ತೀರ್ಮಾನವನ್ನು ತಾವುಗಳು ಪರಾಂಬರಿಸಬೇಕೆಂದು ಸೂಚಿಸಲಿಚ್ಛಿಸುವೆನು.

೧೯೩೫—೩೬ನೆಯ ಸಾಲಿನಲ್ಲಿ ಐದು ಮಿಡ್ಲ್ ಸ್ಕೂಲುಗಳನ್ನು ಏರ್ಪಡಿಸಲಾಯಿತ್ತು. ವ್ಯಾಸಂಗ ಮಾಡುವವರ ಸಂಖ್ಯೆಯು ೪೫,೫೭೮ರಿಂದ ೪೫,೭೪೬ಕ್ಕೆ ಹೆಚ್ಚಲು ಅದರಿಂದ ಸಹಾಯವಾಯಿತು. ವಿಶ್ವವಿದ್ಯಾನಿಲಯಕ್ಕೆ ಸೇರಿದ ಕಾಲೇಜುಗಳಲ್ಲಿ ವ್ಯಾಸಂಗಮಾಡುತ್ತಿರುವವರ ಸಂಖ್ಯೆಯು ಹೆಚ್ಚುತ್ತ ಬಂದಿದೆ; ಅದು ೨,೪೧೨ಕ್ಕೆ ಹೆಚ್ಚಿತು. ಇಪ್ಪತ್ತು ಮಂದಿ ಮಹಿಳೆಯರು ನಾನಾ ಡಿಗ್ರಿಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದರು. ಮೂವತ್ತೇಳು ಮಂದಿ ಹುಡುಗಿಯರು ಇಂಟರ್ಮೀಡಿಯೆಟ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು.

(ಇನೇ ಪುಟಕ್ಕೆ ಮುಂದುವರಿಸಿದೆ.)

ಇಂಡಿಯಾದ ಪ್ರಮುಖ ಟಾನಿಕ್

ಆತಂಕನಿಗ್ರಹ

ಮಾತ್ರೆಗಳು.

ಮಲಬದ್ಧತೆ, ಮನೋದೌರ್ಬಲ್ಯ, ನರಗಳ ಬಲಹೀನತೆ ಇವನ್ನು ಗುಣಪಡಿಸಿ, ಆರೋಗ್ಯಕಾರಿಯಾದ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತದೆ.

ಉಚಿತವಾಗಿ ಕೊಡುವ
"ಜೀವದ ವೃಕ್ಷಮೂಲ"

ಒಂದು ಡಬ್ಬಿ ಉಪಯೋಗಿಸಿ ನೋಡಿ. ಮೂವತ್ತೆರಡು ಮಾತ್ರೆಗಳ ಡಬ್ಬಿ ೧ಕ್ಕೆ ಒಂದು ರೂಪಾಯಿ ಮಾತ್ರ.

ಕ್ಯಾಟಲಾಗಿಗೆ ಬರೆಯಿರಿ:—

ಆತಂಕನಿಗ್ರಹ ಫಾರ್ಮೆಸಿ,
ಚಿಕ್ಕಪೇಟೆ, ಬೆಂಗಳೂರು ಸಿಟಿ.
ಏಜಂಟರು—
ಹರ್ಲ್ ಎಂಡ್ ಸನ್ಸ್, ಮಂಗಳೂರು.

ನರಸಿಂಹ ಲೇಹಂ

(ಸ್ವರ್ಣ ಸಹಿತ) ನಿಶ್ಯಕ್ತರಿಗೊಂದು ವರಪ್ರದಾನ.

ರಕ್ತ, ಶಕ್ತಿ, ಚೈತನ್ಯ, ತ್ರಾಣ ಮತ್ತು ಮನುಷ್ಯತ್ವವನ್ನು ವೃದ್ಧಿಗೊಳಿಸುತ್ತದೆ. ಉಷ್ಣ ಮತ್ತು ಬಹುಮೂತ್ರವನ್ನು ಗುಣಪಡಿಸುತ್ತದೆ. 2 ಕರಡಿಗೆಗಳು ಸಾಕು.

20 ತೊಲೆಗಳ ಕರಡಿಗೆಯೊಂದರ ರೂ. 2—8—0

ವಿ. ಪಿ. ಪ್ರತ್ಯೇಕ.

P. C. A. & Co., Ayurvedic Samaj,
Peridepi, Nellore Dt.

ಮೈಸೂರು ಅಗರಬತ್ತಿ

ನಮೂನೆ	ಶೇರಿಗೆ ಕಿಮ್ಮತ್ತು
ಅಂಬರ ಬತ್ತಿ	೨ ರೂ.
ಜವ್ವಾಜಿ ಬತ್ತಿ	೪ ರೂ.
ಕಸ್ತೂರಿ ಬತ್ತಿ	೪ ರೂ.
ಸುಗಂಧ ಧೂಪ	೨ ರೂ.

ಆಂಗ್ಲೋ-ಇಂಡಿಯನ್ ಟ್ರೇಡಿಂಗ ಕಂಪೆನಿ,
12, 30-10. ಮಲ್ಲೇಶ್ವರಮ್, ಬೆಂಗಳೂರು.

THE DECCAN CO.,

Cantonment, :: MANGALORE,
Agents for
"Mohini Coffee Powder"
and
"Kelagur Tea"

ಡೆಕ್ಕಾನ್ ಕಂಪೆನಿ

ಕೆಂಟೋನ್‌ಮೆಂಟ್—ಮಂಗಳೂರು.

ಕಾಫಿ ತೋಟಗಳಿಗೂ, ತೆಂಗು ಇತ್ಯಾದಿ ಫಲವಸ್ತುಗಳ ಮರಗಳಿಗೂ, ಅಡಕೆ ತೋಟಗಳಿಗೂ ಬೇಕಾಗುವ ಗೊಬ್ಬರಗಳು ಇವರಲ್ಲಿ ಯಾವಾಗಲೂ ದೊರೆಯುತ್ತವೆ.

ಪ್ರಸಿದ್ಧ "ಮೋಹಿನಿ ಕಾಫಿ ಹುಡಿ" ಮತ್ತು "ಕೆಳಗೂರ್ ಟೀ" ಇದರ ಏಜಂಟರು.

ಶ್ರೀ ಶೇಷಾಚಲ ಗ್ರಂಥಮಾಲೆಯ
ಹೊಸ ಪುಸ್ತಕಗಳು.

೧. **ಊರ್ಮಿಳೆ**
ಉಜ್ವಲವಾದ ಐತಿಹಾಸಿಕ ಕಥೆ.
ಬೆಲೆ ೧೦ ಆಣೆ.

೨. **ತುಬ್ಬುಗಾರ ಸುಬ್ಬಣ್ಣ**
ಹೃದಯವಿದಾರಕವಾದ ಪತ್ತೇದಾರಿ ಕಾದಂಬರಿ.
ಬೆಲೆ ರೂ. ೧—೪—೦.

ಕಾಯಂ ಗ್ರಾಹಕರಿಗೆ ಅಂಚೆ ವೆಚ್ಚ ಇಲ್ಲ. ೨ ರೂ. ಮ. ಆ. ಕಳುಹಿಸಿ ಬರೆಯಿರಿ.

ವಿಳಾಸ:—
ಶ್ರೀ ಶೇಷಾಚಲ ಪ್ರೆಸ್ಸ್,
ಪೋಸ್ಟ್ ಆನಂದವನ,
ಜಿ. ಧಾರವಾಡ.

(೨ನೇ ಪುಟದಿಂದ)

ಸಮಾಜ ಸೇವೆಯಲ್ಲಿ ವಿದ್ಯಾರ್ಥಿಗಳಿಗೆ ತುಂಬ ಆಸಕ್ತಿಯು ಹುಟ್ಟಿದೆ. ಇದಕ್ಕಾಗಿ ನಾವು ವಿಶೇಷವಾಗಿ ಹರ್ಷಿಸುತ್ತೇನೆ. ವಿದ್ಯಾರ್ಥಿಗಳಿಗೆ ಆ ರೀತಿ ಆಸಕ್ತಿಯುಂಟಾದುದರಿಂದ ನಡೆದಿರುವ ಒಂದು ಕಾರ್ಯವನ್ನು ಇಲ್ಲಿ ಸೂಚಿಸಬಹುದಾಗಿದೆ. ಮೈಸೂರು ನಗರದಲ್ಲಿ ಮನೆ ಮಾರುಗಳಿಲ್ಲದೆ ಅಲೆದಾಡುವ ನಿರ್ಗತಿಕರೂ ಭಿಕ್ಷುಕರೂ ಎಷ್ಟು ಮಂದಿಗಳಿದ್ದಾರೆಂಬ ಗಣತಿಯೊಂದನ್ನು ವಿದ್ಯಾರ್ಥಿಗಳು ನಡೆಯಿಸಿದರು. ಅದು ಬಹುಜನರ ಗಮನವನ್ನು ಸೆಳೆಯಿತು. ಓದುಬರಹಗಳು ಬಾರದ ದೊಡ್ಡವರಿಗೆ ಅವುಗಳನ್ನು ಕಲಿಸಲು ರಾತ್ರಿಯ ವೇಳೆ ಪಾಠಶಾಲೆಗಳನ್ನು ವಿದ್ಯಾರ್ಥಿಗಳು ನಡೆಯಿಸುವ ಕೆಲಸಕ್ಕಾಗಿ ಸರಕಾರದವರು ೫,೦೦೦ ರೂಪಾಯಿಗಳ ಮೊಬಲಗನ್ನು ಮಂಜೂರು ಮಾಡಿದ್ದಾರೆ.

ಸ್ಥಳೀಯ್ಯ ಪ್ರಜಾಧಿಕಾರ ಸಂಸ್ಥೆಗಳು: ಗ್ರಾಮಪಂಚಾಯಿತಿಗಳು.

ಇನ್ನು, ಸ್ಥಳೀಯ ಪ್ರಜಾಧಿಕಾರ ಸಂಸ್ಥೆಗಳ ವಿಚಾರ. ಅವುಗಳೆಲ್ಲಕ್ಕೂ ತಳಹದಿಯಂತಿರುವ ಸಂಸ್ಥೆಗಳಾದ ಗ್ರಾಮಪಂಚಾಯಿತಿಗಳ ವಿಷಯವನ್ನು ಮೊದಲು ಪ್ರಸ್ತಾವಿಸುವೆನು. ೧೯೩೫—೩೬ನೆಯ ಸಾಲಿನಲ್ಲಿ ಗ್ರಾಮಪಂಚಾಯಿತಿಗಳ ಸಂಖ್ಯೆಯು ೧೧,೪೯೦ರಿಂದ ೧೧,೪೩೭ಕ್ಕೆ ತಗ್ಗಿತು. ತಮ್ಮ ಅಧ್ಯಕ್ಷರನ್ನು ತಾವುಗಳೇ ಚುನಾಯಿಸಿಕೊಳ್ಳುವ ಗ್ರಾಮಪಂಚಾಯಿತಿಗಳು ೧೬೫ಕ್ಕೆ ಹೆಚ್ಚಿದುವು. ಐಚ್ಛಿಕ ತೆರಿಗೆಗಳನ್ನು ವಿಧಾಯಕ ಮಾಡಿರತಕ್ಕ ಗ್ರಾಮಪಂಚಾಯಿತಿಗಳು ಮತ್ತೆರಡು ಹೆಚ್ಚಿದುವು. ಮುಖ್ಯ ಮುಖ್ಯವಾದ ಹಲವು ಕಾಮುಗಾರಿಗಳು ನಡೆದುವು. ಸಾತನೂರು ಮತ್ತು ತುರುವನೂರು ಗ್ರಾಮಗಳ ನೀರು ಸರಬರಾಯಿ ಕಾಮಗಾರಿಗಳೂ ಅವುಗಳಲ್ಲಿ ಸೇರಿರುತ್ತವೆ. ಬೆಂಗಳೂರು ಡಿಸ್ಟ್ರಿಕ್ಟಿನ ಐದು ಗ್ರಾಮಗಳಿಗೆ ವಿದ್ಯುಚ್ಛಕ್ತಿ ದೀಪಗಳನ್ನು ಹಾಕಿಸಲಾಯಿತು. ಅನೇಕ ಸ್ಥಳಗಳಲ್ಲಿ ಹೆರಿಗೆ ಶಾಲೆಗಳು ಏರ್ಪಟ್ಟವು. ಒಟ್ಟು ೫,೯೫,೦೨೫ ರೂಪಾಯಿಗಳು ಸಾರ್ವಜನಿಕ ಸ್ವಭಾವದ ಕಾಮಗಾರಿಗಳಿಗಾಗಿ ವೆಚ್ಚವಾಗಿರುವುದಾಗಿ ವರದಿಯಾಗಿದೆ. ಇದಲ್ಲದೆ, ಗ್ರಾಮ ಸ್ಥರೇ ವಾರಕ್ಕೊಂದು ದಿನ ಉಚಿತವಾಗಿ ಕೆಲಸ ಮಾಡುವ ಕಾಮುಗಾರಿಗಳೂ ಅನೇಕವಾಗಿ ನಡೆದಿವೆ. ಕೂಲಿಯನ್ನು ಕೊಟ್ಟು ಅವುಗಳನ್ನು ಮಾಡಿಸಿದ್ದರೆ ೫೮,೯೪೨ ರೂಪಾಯಿಗಳು ವೆಚ್ಚವಾಗುತ್ತಿದ್ದುವು. ಬಾವಿಗಳಿಗಾಗಿಯೇ ೧,೮೬೫,೨೧೨ ರೂಪಾಯಿಗಳು ವೆಚ್ಚವಾಗಿವೆ. ಗ್ರಾಮಪಂಚಾಯಿತಿಗಳ ಆಡಳಿತದಲ್ಲಿ ಒಂದು ಕುಂದು ಮಾತ್ರ ಇದ್ದೇ ಇದೆ. ತೆರಿಗೆಗಳನ್ನು ವಸೂಲು ಮಾಡುವುದು ಗ್ರಾಮಪಂಚಾಯಿತಿಗಳಿಗೆ ಕಷ್ಟವಾಗಿರುವುದೇ ಆ ಕುಂದು. ೧೯೩೫—೩೬ನೆಯ ಸಾಲಿನ ಕೊನೆಯಲ್ಲಿ ವಸೂಲಾಗದೆ ಬಾಕಿ ನಿಂತಿದ್ದ ಗ್ರಾಮಪಂಚಾಯಿತಿ ತೆರಿಗೆಗಳ ಮೊಬಲಗು ೪೨,೯೭,೬೧೫ ರೂಪಾಯಿಗಳು. ಹೀಗೆ ಬಾಕಿ ಬಿದ್ದಿರುವ ಮೊಬಲಗುಗಳ ವಸೂಲಿಗಾಗಿ ಡೆಪ್ಯುಟಿ ಕಮಿಷನರುಗಳು ಅವಶ್ಯಕಂಡ ಸಂದರ್ಭಗಳಲ್ಲೆಲ್ಲ ವಿಶೇಷ ಸಿಬ್ಬಂದಿಗಳನ್ನು ನೇಮಕಮಾಡಿಕೊಂಡು ಕೆಲಸ ನಡೆಯಿಸಬಹುದೆಂದು ಸರ್ಕಾರದವರು ಅನುಜ್ಞೆಗಳನ್ನು ಸಾದರುಮಾಡಿದ್ದಾರೆ. ಅಲ್ಲದೆ, ಸಬ್ ಡಿವಿಜನ್ ಆಫೀಸರುಗಳು ಜಮಾಬಂದಿಯ ಕಾಲದಲ್ಲಿ ಮತ್ತು ತಮ್ಮ ತನಿಖೆ ಸಂಚಾರಕಾಲಗಳಲ್ಲಿ, ಗ್ರಾಮಪಂಚಾಯಿತಿಗಳ ಲೆಕ್ಕಗಳನ್ನು ನೋಡಿ ತಕ್ಕ ಕ್ರಮ ಜರುಗಿಸಬೇಕೆಂದೂ ಸರ್ಕಾರದವರು ಅಪ್ಪಣೆ ಮಾಡಿದ್ದಾರೆ. ಎಂದರೆ, ಗ್ರಾಮಪಂಚಾಯಿತಿಗಳಲ್ಲಿ ವಸೂಲಾಗಬೇಕಾಗಿದ್ದ ಮೊಬಲಗೆಷ್ಟು, ವಸೂಲಾದ ಮೊಬಲಗೆಷ್ಟು, ಬಾಕಿ ಉಳಿದಿರುವ ಮೊಬಲಗೆಷ್ಟು—ಎಂಬ ವಿವರಗಳನ್ನು ಸಬ್‌ಡಿವಿಜನ್ ಆಫೀಸರುಗಳು ಪರಿಶೀಲಿಸಿ ಬಾಕಿಗಳು ವಸೂಲಾಗುವಂತೆ ಕ್ರಮ ಜರುಗಿಸಬೇಕೆಂದೂ, ವಸೂಲಾಗಲಾರದ ಕರಡು ಬಾಕಿಗಳನ್ನು ಲೆಕ್ಕಗಳಿಂದ ವಜಾ ಮಾಡಬೇಕೆಂದೂ ಸಹ, ಸರ್ಕಾರದವರು ಅಪ್ಪಣೆಮಾಡಿದ್ದಾರೆ.

ಡಿಸ್ಟ್ರಿಕ್ಟ್ ಬೋರ್ಡುಗಳು.

ಬೆಂಗಳೂರು, ಮೈಸೂರು ಡಿಸ್ಟ್ರಿಕ್ಟುಗಳು ಹೊರತು ಉಳಿದ ಆರು ಡಿಸ್ಟ್ರಿಕ್ಟುಗಳ ಡಿಸ್ಟ್ರಿಕ್ಟ್ ಬೋರ್ಡುಗಳೂ ೧೯೩೬ನೆಯ ಇಸವಿ ಜೂನ್ ೧ನೆಯ ತಾರೀಖಿನಿಂದ ಪುನರ್ವ್ಯವಸ್ಥಿತವಾದುವು. ಕೋಲಾರದ ಚಿನ್ನದ ಗಣಿ ಸ್ಯಾನಿಟರಿ ಬೋರ್ಡು ಅದಕ್ಕೆ ಮೊದಲೇ ೧೯೩೫ನೆಯ ಇಸವಿ ಡಿಸೆಂಬರ್ ೧ನೆಯ ತಾರೀಖಿನಿಂದಲೇ ಪುನರ್ವ್ಯವಸ್ಥೆಯಾಗಿದ್ದಿತು. ರಸ್ತೆ ಸಂಚಾರದ ಮತ್ತು ರಸ್ತೆ ತೆರಿಗೆಗಳ ರಿಗ್ಯುಲೇಷನ್ನನ್ನು ಜಾರಿಗೆ ತಂದು ಸುಂಕದ ವಸೂಲಿಯನ್ನು ಡಿಸ್ಟ್ರಿಕ್ಟು ಬೋರ್ಡುಗಳಿಗೆ ತಪ್ಪಿಸಿ ಸರ್ಕಾರದವರು ವಹಿಸಿಕೊಂಡುದು ಸರಿಯಷ್ಟೆ. ಅದರ ಫಲಿತಾಂಶವಾಗಿ ಡಿಸ್ಟ್ರಿಕ್ಟು ಬೋರ್ಡುಗಳ ಒಟ್ಟು ಹುಟ್ಟುವಳಿಯು ೧೮೮,೬೫,೬೧೭ ರೂಪಾಯಿಗಳಿಂದ ೧೫,೭೬,೦೧೫ ರೂಪಾಯಿಗಳಿಗೆ ತಗ್ಗಿತು. ಸ್ಥಾವರ್ಜನಿಕ (ಪಬ್ಲಿಕ್ ವರ್ಕ್ಸ್) ಕಾಮುಗಾರಿಗಳನ್ನು ನಡೆಯಿಸಲು ಹಣವನ್ನು ಒದಗಿಸಿಕೊಳ್ಳುವುದಕ್ಕಾಗಿ ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿನವರು ವರ್ಷಕ್ಕೆ ಸೇಕಡ ೪॥ ರೂಪಾಯಿ ಬಡ್ಡಿಯ ಮೇಲೆ ೭ ಲಕ್ಷ ರೂಪಾಯಿಗಳ ಸಾಲವನ್ನು ತೆಗೆದಿದ್ದಾರೆ. ರಾಮನಾಥಪುರದ ಬಳಿಯಲ್ಲಿ ಕಾವೇರೀ ನದಿಗೆ ಸೇತುವೆಯನ್ನು ಕಟ್ಟಿಸುವುದಕ್ಕಾಗಿ ಹಾಸನದ ಡಿಸ್ಟ್ರಿಕ್ಟ್ ಬೋರ್ಡಿನವರು ೧,೨೦,೦೦೦ ರೂಪಾಯಿಗಳನ್ನು ಸಾಲಮಾಡಿದ್ದಾರೆ. ಕಾನಕಾಹಳ್ಳಿಯ ಬಳಿಯಲ್ಲಿ ಅರ್ಕಾವತಿ ನದಿಗೂ, ಹಲಗೂರಿನ ಬಳಿಯಲ್ಲಿ ಷಿಂಷಾ ನದಿಗೂ ಸೇತುವೆಗಳನ್ನು ಕಟ್ಟುವ ಏರ್ಪಾಡುಗಳೂ, ಬಿಳಿಜೋಡಿನ ಬಳಿಯಲ್ಲಿ ಹಗರೀ ನದಿಗೆ ತಾಂಡವಾಳದ ತೊಲೆಸೇತುವೆಯನ್ನು ಕಟ್ಟುವ ಏರ್ಪಾಡೂ ಪರ್ಯಾಲೋಚನೆಯಲ್ಲಿವೆ.

ಮುನಿಸಿಪಾಲಿಟಿಗಳು.

ಅನೇಕ ಟವನು ಮತ್ತು ಮೈನರ್ ಮುನಿಸಿಪಾಲಿಟಿಗಳಲ್ಲಿ ಕಟ್ಟಡಗಳ ಮತ್ತು ಜವಿನುಗಳ ಈಗಿನ ಬೆಲೆಗಳನ್ನು ಅಂದಾಜು ಮಾಡಿ ಅವುಗಳು ಹೆಚ್ಚುಕಡಮೆಯಾಗಿರುವುದಕ್ಕನುಗುಣವಾಗಿ ಕಂದಾಯ ಬದಲಾವಣೆಮಾಡುವ ಕೆಲಸವನ್ನು ಕೈಕೊಳ್ಳಲಾಯಿತು. ಕೊಣನೂರು, ಚಿತ್ರದುರ್ಗ ಮತ್ತು ದಾವಣಗೆರೆ—ಈ ಮೂರು ಸ್ಥಳಗಳ ನೀರು ಸರಬರಾಯಿ ಕಾಮಗಾರಿಗಳೂ ಪೂರೈಸಿದುವು. ಮಂಡ್ಯ, ಗಂಜಾಂ, ಕುಣಿಗಲು, ಕ್ಲೋಸ್‌ಪೇಟೆ ಮತ್ತು ಅರಸೀಕೆರೆ—ಈ ಊರುಗಳ ನೀರು ಸರಬರಾಯಿ ಕಾಮುಗಾರಿಗಳನ್ನು ಉತ್ತಮಪಡಿಸಿ ನೀರಿನ ವಸತಿಯನ್ನು ಹೆಚ್ಚಿಸುವ ಏರ್ಪಾಡುಗಳು ಮಂಜೂರಾದುವು. ಸಕಲೇಶಪುರ, ಚಿಕ್ಕಮಗಳೂರು, ನಾಗಮಂಗಲ ಮತ್ತು ಸಿಕಾರಿಪುರ—ಈ ಊರುಗಳ ನೀರಿನ ವಸತಿಯನ್ನು ಹೆಚ್ಚಿಸುವ ಏರ್ಪಾಡುಗಳು ಸರ್ಕಾರದವರ ಪರ್ಯಾಲೋಚನೆಯಲ್ಲಿವೆ. ಹಾಸನದಲ್ಲಿ ಭೂಮಿಯೊಳಗೆ ಚರಂಡಿಗಳನ್ನು ಮಾಡಿಸುವ ಒಂದು ಏರ್ಪಾಡೂ ಪರ್ಯಾಲೋಚನೆಯಲ್ಲಿದೆ. ಚಿಕ್ಕನಾಯಕನಹಳ್ಳಿ, ಕಾನಕಾನಹಳ್ಳಿ, ದೊಡ್ಡಬಳ್ಳಾಪುರ ಮತ್ತು ನೆಲಮಂಗಲ—ಈ ಊರುಗಳಲ್ಲಿ ಹೆರಿಗೆ ವಾರ್ಡುಗಳನ್ನು ಕಟ್ಟುವ ಕೆಲಸವು ಪೂರೈಸಿತು. ಚಿತ್ರದುರ್ಗ, ದಾವಣಗೆರೆ ಮತ್ತು ಚಿಕ್ಕಬಳ್ಳಾಪುರ—ಈ ಮೂರು ಊರುಗಳಲ್ಲಿಯೂ ಶಿಶುಗಳ ಯೋಗಕ್ಷೇಮವನ್ನು ನೋಡಿಕೊಳ್ಳುವ ಶಿಶುಸಂರಕ್ಷಣ ಸಂಸ್ಥೆಗಳನ್ನು ಏರ್ಪಡಿಸುವ ಕೆಲಸವು ನಡೆಯುತ್ತಿದೆ.

ಚೆನ್ನಪಟ್ಟಣ, ಮೂಗೂರು ಮತ್ತು ಹೊನ್ನಾಳಿ—ಈ ಮೂರು ಊರುಗಳ ಮುನಿಸಿಪಾಲಿಟಿಗಳ ಆಡಳಿತವು ತೃಪ್ತಿಕರವಾಗಿರಲಿಲ್ಲ. ಆದ ಕಾರಣ, ಅಲ್ಲಿಯ ಮುನಿಸಿಪಾಲಿಟಿಗಳು ಎರಡು ವರ್ಷಗಳ ಕಾಲ ಪೌರಕಾರ್ಯಗಳನ್ನು ನೆರವೇರಿಸತಕ್ಕುದಲ್ಲವೆಂದು ಗೊತ್ತುಮಾಡಿ, ಅವುಗಳ ಅಧಿಕಾರಗಳನ್ನು ಆ ಅವಧಿಯಲ್ಲಿ ಸರ್ಕಾರದ ಅಧಿಕಾರಿಗಳೇ ಚಲಾಯಿಸಿ ಪೌರಕಾರ್ಯಗಳನ್ನೆಲ್ಲ ನೆರವೇರಿಸತಕ್ಕುದೆಂದು ಅಪ್ಪಣೆ ಮಾಡಲಾಯಿತು.

ಮೈಸೂರು ಸಿಟಿ ಮುನಿಸಿಪಾಲಿಟಿಯವರು ಕಟ್ಟಡಗಳೇ ಮುಂತಾದುವುಗಳ ಈಗಿನ ಬೆಲೆಗಳನ್ನು ಅಂದಾಜುಮಾಡಿ ಅವುಗಳು ಹೆಚ್ಚುಕಡಿಮೆಯಾಗಿರುವುದಕ್ಕನುಗುಣವಾಗಿ ಕಂದಾಯ ಬದಲಾವಣೆ ಮಾಡುವ ಕಾರ್ಯವನ್ನು ಕೈಕೊಂಡರು. ನಗರಾಭಿವೃದ್ಧಿ ಕಾಮುಗಾರಿಗಳಿಗಾಗಿ ಹಣವನ್ನೊದಗಿಸಿಕೊಳ್ಳುವುದಕ್ಕಾಗಿ ಅವರು ಹತ್ತು ಲಕ್ಷ ರೂಪಾಯಿಗಳ ಒಂದು ಸಾಲವನ್ನು ಏರ್ಪಡಿಸಿದ್ದಾರೆ. ಜನಗಳ ವಾಸದ ಮನೆಗಳ ಸ್ಥಿತಿಗತಿಗಳು ಹೇಗಿವೆ ಎಂಬುದರ 'ಸರ್ವೆ' ಪರಿಶೀಲನೆಯೊಂದು ನಡೆಯು

(೪ನೇ ಪುಟಕ್ಕೆ ಮುಂದುವರಿಸಿಯದೆ)

ದಿ ಎವರ್ ರೆಡಿ ಕಂಪೆನಿ
(ಇಂಡಿಯಾ) ಲಿಮಿಟೆಡ್

ಪ್ರಸಿದ್ಧ ಮಾಡುವ ಹೊಸ
ಮುಖ್ಯವಾಗಿ
ವೃದ್ಧಿಮಾಡಿ ನಿರ್ಮಿಸಿರುವ
ಹೊಸ ನಮೂನೆ
"ಬೆರೆಕ್" ಬೇಟರಿ
ಹೆಚ್ಚಿನ ಬೆಲೆಯಿಲ್ಲದ್ದೂ ಆಗಿರುವ



ಡಿಸ್ಟ್ರಿಬ್ಯೂಟರ್ಸ್
ದಿ ಬೊಂಬೇ ಕಂಪೆನಿ ಲಿಮಿಟೆಡ್
ಮದ್ರಾಸ್, ಅಲಪ್ಪಿ, ಕೊಚ್ಚಿ,
ಕಲಿಕೂಟ, ಕ್ವಿಲೋನ್

ಡಬ್ಲ್ಯು. ಹ್ಯೂರ್
"ಡೆಪಿಲೆಟರಿ ರೋಮನಾಶಿನಿ ಪೌಡರ್"

ಆಧುನಿಕ ಮಹಿಳೆಯರಿಗೆ ಅತ್ಯಾವಶ್ಯವಾದುದು. ಉರಿ, ಇಲ್ಲವೆ ಕಲೆ ಇಲ್ಲದೆ ನಿಮಿಷಮಾತ್ರದಲ್ಲಿ, ಗೋಚರವಾಗದೆ ರೀತಿಯಿಂದ ರೋಮಗಳನ್ನು ಸಂಪೂರ್ಣವಾಗಿ ತೊಲಗಿಸಿ, ಚರ್ಮದ ಮೃದುತ್ವವನ್ನು ಕಾಪಾಡುವುದು.

ಮಹಿಳೆಯರ ಅತಿ ಕೋಮಲ ಸೌಂದರ್ಯ ಸೊಂಪನ್ನು ಹೆಚ್ಚಿಸುವದು.

ನಿಮ್ಮ ಕೆಮಿಸ್ಟರಿಂದ ಇಂದಿನ ರಾತ್ರೆಯೇ ಪಡೆಯಿರಿ.

ಕ್ರಯ: ಬಾಟ್ಲಿಯೊಂದಕ್ಕೆ ರೂ. 1—0—0, ಅಂಚೆ ಹಾಸಲು ಪ್ರತ್ಯೇಕ.

ಸೋಲ್ ಏಜೆಂಟರು:—ಲಕ್ಷ್ಮೀದಾಸ್ ದಯಾಭಾಯಿ ಮತ್ತು ಕಂಪೆನಿ,
ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್,
6, ಫ್ರಿನ್ಸೆಸ್ ಸ್ಟ್ರೀಟ್, ಮುಂಬಾಯಿ.

ಪ್ರತಿ ತಿಂಗಳು ಕೊಟ್ಟ ರೂ. ೧ ಐದು ನೂರು ರೂಪ್ಯಾಗಳನ್ನು ತಂದಿತು

ದಿ ಸ್ವರಾಜ್ಯ ಬ್ಯಾಂಕಿಂಗ್ ಮತ್ತು ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,

ಧಾರವಾಡ ಇವರಿಗೆ.

ಸ್ವಾಮಿ,

ಪ್ರೇಮಪೂರ್ವಕ ವಂದನೆಗಳು. ಅಚ್ಚ ಕನ್ನಡಿಗರ ಸಂಸ್ಥೆಯಾದ ನಿಮ್ಮ ಕಂಪೆನಿಯಲ್ಲಿ ನನ್ನ ಸಹೋದರನ ಲಗ್ನದ ಸಲುವಾಗಿ ಪಾಲಿಸಿಯನ್ನು ಮಾಡಿಸಿದ್ದೆನು. ಎರಡು ವರ್ಷಗಳ ವರೆಗೆ ಸರಿಯಾಗಿ ಕಂತುಗಳನ್ನು ತುಂಬುತ್ತ ಬಂದು, ಆ ಮೇಲೆ ಅವನ ಲಗ ಮಾಡಿ ನಿಮಗೆ ನಿಯಮದಂತೆ ಎಲ್ಲ ಕಾಗದಪತ್ರಗಳನ್ನು ಸರಿಪಡಿಸಿ ಕೊಟ್ಟೆನು. ಮೊನ್ನಿನ ದಿವಸ ನಮ್ಮ ಏಜಂಟರಾದ ಶ್ರೀಯುತ ಕೆ. ಎನ್. ಶಿವಣ್ಣ ಇವರ ಮಾರ್ಪಡ. ನೀವು ಕಳಿಸಿದ **ಐದು ನೂರು ರೂಪಾಯಿ ಕ್ಲೇಮಿನ ಹಣವು** ನನ್ನ ಪಾಲಿಸಿಯ ಪ್ರತಿಫಲವಾಗಿ ಬಂದು ಮುಟ್ಟಿತು. ಇದರಲ್ಲಿ ನಾನು ನಿಮ್ಮ ಡಾಯರೆಕ್ಟರ ಸಮಿತಿಯ ದಕ್ಷತೆಯನ್ನೂ ವ್ಯವಸ್ಥಾಪಕ ಜನರ ಜಾಗರೂಕತೆಯನ್ನೂ ಮತ್ತು ಈ ಸ್ಕೀಮಿನ ವಿಶಿಷ್ಟತೆಯನ್ನೂ ಎಷ್ಟು ಹೊಗಳಿದರೂ ಸಾಲದು. ನೀವು ಮಾಡಿದ ಈ ಸಹಾಯದಿಂದ ಮದುವೆ ಮಾಡಿದ ಯಜಮಾನನಿಗೆ ಘಟಿಸತಕ್ಕ ಎಲ್ಲ ಸಂಕಟಗಳಿಂದ ನಾನು ಪಾರಾದ್ದರಿಂದ ನಿಮಗೆ ನಾನು ಯಾವಾಗಲೂ ಕೃತಜ್ಞನಾಗಿದ್ದೇನೆ. ಮತ್ತು ನನ್ನ ಆಪ್ತೇಷ್ಟರಿಗೆ ಇಂದೇ ನಿಮ್ಮ ಪಾಲಿಸಿಯ ಪಡಕೊಳ್ಳಲು ಪ್ರೋತ್ಸಾಹಿಸಿ ಅವರಿಗೂ ಸಹ ಮುಂದಿನ ಖರ್ಚಿಗಾಗಿ ಇಂದಿನಿಂದ ಸುರುವಾಗುವಂಥ ಚಿಂತೆಯಿಂದ ಪಾರಾಗಲು ಮಾರ್ಗ ಶೋಧಿಸುವೆನು ಮತ್ತು ಅವರನ್ನು ನನ್ನಂತೆ ಸುಖಿಗಳನ್ನಾಗಿ ಮಾಡುವೆನು. ನಿಮ್ಮ ಈ ಸ್ತುತ್ಯವಾದ ಜನಸೇವಾಕೆಲಸಕ್ಕೆ ದೇವರು ಸದಾ ಯಶಸ್ಸನ್ನು ಕೊಡಲೆಂದು ಬಯಸುವ,

ತುಮ್ಮೂರು, ೧—೯—೧೯೩೬. }

ತಮ್ಮ
(Sd.) ಜಿ. ಎಚ್. ಗಂಗಪ್ಪ


RHEUMATISM BACKACHE
ಈ ಡ್ಸ್ ಪ್ರಖ್ಯಾತ
ರುಮೆಟಿಕ್ ಮತ್ತು ಗೌಟ್ ಮಾತ್ರೆಗಳು.
ವಾತ, ಸಂದುಬೇನೆ, ನಡುವು ನೋವು, ಸೊಂಟ ನೋವು, ತಲೆ, ಮುಖ, ಅಂಗಗಳಲ್ಲಿ ನೋವು, ಮುಂತಾದ ಎಲ್ಲಾ ವಾತ ರೋಗಗಳಿಗೆ ಸುಪ್ರಸಿದ್ಧ ಔಷಧ.
EADE'S PILLS
GOUT

ಈ ಎಲ್ಲಾ ನೋವುಗಳಿಂದ ನರಳುವವರಿಗೆ ಈ ಔಷಧವು ಪೂರ್ವದ ಅನುಭವದಿಂದ ದಿಟವಾಗಿಯೂ ಖಂಡಿತ ಗುಣಕಾರಿಯೆಂದು ಪ್ರತ್ಯೇಕವಾಗಿ ಶಿಫಾರಸು ಮಾಡಲ್ಪಟ್ಟಿದೆ.

ಇತರ ಎಲ್ಲಾ ಒಳಗಣ ಮತ್ತು ಬಾಹ್ಯ ಔಷಧಗಳು ನಿಷ್ಪ್ರಯೋಜಕವಾದಲ್ಲಿ, ಈ ಮಾತ್ರೆಗಳು ಬಾರಿಬಾರಿಗೂ ಶಮನವನ್ನುಂಟುಮಾಡಿರುತ್ತವೆ. ಯಾವ ರೀತಿಯಲ್ಲಿಯೂ ಅವುಗಳ ಗುಣವು ಬಾಧಕರವಾಗಿರದೆ, ಸಾಮಾನ್ಯ ಆರೋಗ್ಯಕ್ಕೆ ಯಾವಾಗಲೂ ಕಳೆಗೊಳಿಸುವ ಔಷಧವಾಗಿರುತ್ತದೆ.

Madras Stockists:—Messrs. DADHA & CO.,
52, Nainiappa Naick Street, Madars.

ದೇಶಾಭಿಮಾನಿಗಳೆಲ್ಲಾ ಪ್ರೋತ್ಸಾಹಿಸಬೇಕಾದ ದೇಶೀಯ ಕೈಗಾರಿಕೆ.

ದಿ ತ್ರಿಲೋಕ ಸ್ಟೀಲ್ ಟ್ರಂಕ್ ವರ್ಕ್ಸ್, ಮದ್ರಾಸು.

ಇವರ ಉತ್ಕೃಷ್ಟ, ನಾಜೂಕಾದ ಹಾಗೂ ಬಹಳ ಬಾಳಿಕೆಯ ತ್ರಿಲೋಕ (ನಾರದ) ಮಾರ್ಕಿನ ಸ್ಟೀಲ್ ಟ್ರಂಕುಗಳು ಮತ್ತು ಸೂಟ್‌ಕೇಸುಗಳು.



ಈ ಕಾರ್ಖಾನೆಯಲ್ಲಿ ತಯಾರಾಗುವ ಪ್ರತಿ ಒಂದು ಸಾಮಾನು ಬಹುವರ್ಷಗಳಲ್ಲಿ ತರಬೇತು ಹೊಂದಿದ ಕೆಲಸಗಾರರಿಂದಲೇ ತಯಾರಾಗುತ್ತವೆ. ಆದುದರಿಂದಲೇ ಇಲ್ಲಿನ ವಸ್ತುಗಳು ಅಂದಚಂದದಲ್ಲೂ ಬಂಡೋಬಸ್ತಿನಲ್ಲೂ ಕುಂದಿಲ್ಲವೆಂಬುದು ನಿಸ್ಸಂದೇಹ. ಇಲ್ಲಿ ಬಗೆ ಬಗೆ ಅಳತೆಯ ಟ್ರಂಕುಗಳು, ಸೂಟ್‌ಕೇಸುಗಳು, ಹಣದ ಪೆಟ್ಟಿಗೆಗಳು, ಆಭರಣಗಳನ್ನಿರಿಸುವ ಕೈಪೆಟ್ಟಿಗೆಗಳು, ಟೇಬಲಿಗೆ ಫಿಕ್ಸ್ ಮಾಡುವ ಕ್ಯಾಷ್‌ಬೋಕ್ಸ್‌ಗಳು ಮುಂತಾದುವು ಸರ್ವಕಾಲವೂ ವಿಕ್ರಯಕ್ಕೆ ಸಿದ್ಧವಿರುತ್ತವೆ.

ವ್ಯಾಪಾರಸ್ಥರಿಗೆ ಸುಸಂದರ್ಭ. ನಮ್ಮ 'ಷೊ'ರೂಮಿಗೆ ಒಮ್ಮೆ ಸಂದರ್ಶಿಸಿ ಅಥವಾ ಒಂದು ಸಣ್ಣ ಆರ್ಡರು ಕೊಟ್ಟು ಇದರ ನಿಜತ್ವವನ್ನು ಪರೀಕ್ಷಿಸಿರಿ. ನಿಮಗೆ ಖಚಿತವಾಗುವುದು.

ಹೆಚ್ಚಿನ ವಿವರಕ್ಕೆ ಮತ್ತು ಕ್ರಯವಿವರ ಪಟ್ಟಿಗೆ ಈ ವಿಳಾಸಕ್ಕೆ ಬರೆಯಿರಿ.

ದಿ ತ್ರಿಲೋಕ ಸ್ಟೀಲ್ ಟ್ರಂಕ್ ವರ್ಕ್ಸ್,
ಪ್ರೊಪ್ರೈಟರ್:—ಜಿ. ಟಿ. ಮಾಣಿಕ ನಾಯಗರ್.

ಹೆಡ್ ಆಫೀಸು:—22, ಪೇಕರ್ ಸ್ಟ್ರೀಟ್, ಜಿ. ಟಿ., ಮದ್ರಾಸು.

ಬ್ರಾಂಚ್ ಆಫೀಸು:—ರೈಲ್ವೆ ಗುಡ್ಸ್‌ಶೆಡ್ ಬಳಿ., ಮಂಗಳೂರು, ದ. ಕ.

(ಸಿನೇ ಪುಟದಿಂದ)

ತ್ತಿದೆ. ಜನಸಾಂದ್ರತೆಯು ಬಹಳ ಹೆಚ್ಚಾಗಿ ಮನೆಗಳೆಲ್ಲ ತೀರ ಒತ್ತು ಒತ್ತಾಗಿಯೂ ಗಲೀಜಾಗಿಯೂ ಇರುವುದರ ಸ್ಥಿತಿಯನ್ನು ತಪ್ಪಿಸಬೇಕೆಂಬುದು ಅದರ ಉದ್ದೇಶ.

ಪರಿಸಮಾಪ್ತಿ.

ಯೂರೋಪು ಖಂಡದ ಜನಾಂಗಗಳೆಲ್ಲ ಯುದ್ಧಕ್ಕೆಗಟ್ಟುವ ಪರಿಸ್ಥಿತಿಯ ಕಡೆಗೆ ಮುಂದೆ ಮುಂದೆ ನುಗ್ಗುತ್ತಿವೆ. ಕೆಲವು ಜನಾಂಗಗಳು ಉದ್ದೇಶಪೂರ್ವಕವಾಗಿ ಹಾಗೆ ನುಗ್ಗುತ್ತಿವೆ. ಉಳಿದ ಜನಾಂಗಗಳು ಮನಸ್ಸಿಲ್ಲದಿದ್ದರೂ ಅನಿವಾರ್ಯಪಕ್ಷವಾಗಿ ಹಾಗೆ ನುಗ್ಗುತ್ತಿವೆ. ಅಂತು ಎಲ್ಲ ಜನಾಂಗಗಳೂ ಆ ರೀತಿ ಮುಂದೆ ಮುಂದೆ ನುಗ್ಗುತ್ತಿವೆ. ಅವು ಯುದ್ಧಕ್ಕೆಗಟ್ಟುವ ಪರಿಸ್ಥಿತಿಯ ಕಡೆಗೇ ನುಗ್ಗುತ್ತಿವೆಯೆಂಬುದನ್ನು ಯಾರು ಬೇಕಾದರೂ ಸುಲಭವಾಗಿ ಊಹಿಸಬಹುದು. ಭಗವತ್ಪಾರ್ಥನೆ ಮಾಡಲು ಜನರನ್ನು ಕೋರುವಲ್ಲಿ ಕ್ಯಾಂಟರ್ಬರಿಯ ಆರ್ಚ್ ಬಿಷಪ್ಪರವರು ಮಾಡಿದ ಈಚಿನ ಭಾಷಣ ಒಂದರಲ್ಲಿ ಹೇಳಿದ ಮಾತುಗಳಿವು:—'ಯೂರೋಪು ಖಂಡದಲ್ಲಿ ಈಗ ಎಲ್ಲಿ ನೋಡಿದರೂ ವ್ಯಗ್ರತೆ, ಸಂಶಯ, ಶಂಕೆ, ಆತಂಕ—ಇವುಗಳೇ ತುಂಬಿವೆ. ಫಿರಂಗಿಗಳೇ ಮುಂತಾದ ಆಯುಧಗಳು ರಾಶಿರಾಶಿಗಟ್ಟಲೆಯಾಗಿ ಅತಿ ಬೇಗ ಬೇಗ ತಯಾರಾಗುತ್ತಿವೆ. ಯುದ್ಧದ ಜಹಜುಗಳೇ ಮುಂತಾದ ಸಾಧನ ಸಲಕರಣೆಗಳ ನಿರ್ಮಾಣದ ಸ್ಪರ್ಧೆ ಗಂತು ಗೊತ್ತುಗುರಿಯೇ ಇಲ್ಲ. ಒಂದೊಂದು ಜನಾಂಗದವರೂ ತಮ್ಮ ಸ್ವಂತ ಯೋಗಕ್ಷೇಮವನ್ನು ಕಾಪಾಡಿಕೊಳ್ಳುವುದಕ್ಕಾಗಿ ಮಾಡಿಕೊಳ್ಳುತ್ತಿರುವ ಯುದ್ಧಸಾಮಗ್ರಿಗಳ ಸಿದ್ಧತೆಗಳೂ ನಡೆಯಿಸುತ್ತಿರುವ ಪ್ರಯತ್ನಗಳೂ ಇತರ ಜನಾಂಗಗಳ ಮನಸ್ಸಿನಲ್ಲಿ ಅಪಾಯದ ಶಂಕೆಯನ್ನುಂಟುಮಾಡಿ ಅವುಗಳ ತಳವಮಳವನ್ನು ಹೆಚ್ಚಿಸುತ್ತಿವೆ.' ಅವರು ಹೀಗೆಂದು ಹೇಳಿದ್ದಾರೆ. ಯೂರೋಪು ಖಂಡವೂ, ಅದರೊಡನೆ ಭರತ ಖಂಡವೂ, ಯುದ್ಧದ ವಿಷಮ ಸ್ಥಿತಿಯಿಂದ ಪಾರಾಗಲೆಂದೂ ಯುದ್ಧದ ವಿಷಮಸಂಕಟದ ಮತ್ತು ಭಯಂಕರವಾದ ವಧೆಯ ಸುಳಿಗಳಿಗೆ ಸಿಕ್ಕಿ ಸಂಕಟಪಡದೆ ಸುರಕ್ಷಿತವಾಗಿರಲೆಂದೂ ಭಗವಂತನನ್ನು ಪ್ರಾರ್ಥಿಸುವುದೊಂದೇ ನಮ್ಮ ಕೈಯಲ್ಲಿರುವ ಕೆಲಸ.

ಪ್ರಪಂಚದ ಇತಿಹಾಸದಲ್ಲೇ ಅತ್ಯಂತ ಬಿಕ್ಕಟ್ಟಿನ ಸಮಯಗಳಲ್ಲೊಂದು ಈಗ ಒದಗಿದೆಯೆಂಬುದು, ಪ್ರಪಂಚದಲ್ಲಿ ಸಮಸ್ತರಿಗೂ ತೋರಿಬರುವ ಅಂಶವಾಗಿದೆ. ಅದ್ಭುತವಾದ ಮಾರ್ಪಾಡುಗಳುಂಟಾಗುವ ಕಾಲವು ತೀರ ಸವಿಾಪಿಸಿದೆ. ಅವುಗಳಿಂದ ಉಂಟಾಗುವ ಆಗುಹೋಗುಗಳು ಇತರ ದೇಶಗಳಂತೆಯೇ ಭರತಖಂಡಕ್ಕೂ ತಟ್ಟದೆ ತಪ್ಪುವಂತಿಲ್ಲ.

ಆದಕಾರಣ ಕೋಟ್ಯಂತರ ಜನಸಂಖ್ಯೆಯುಳ್ಳುದಾಗಿ ಹಲವು ಬುಡಕಟ್ಟುಗಳವರಿಂದಲೂ ಹಲವು ಜಾತಿಮತಗಳವರಿಂದಲೂ ತುಂಬಿರುವ ದೊಡ್ಡ ದೇಶವಾದ ಭರತಖಂಡವು ಈಗಿನಂತಿರದೆ ಜನಪದ ಭಾವದ ಹೊಸರೂಪವನ್ನು ಎಷ್ಟು ಬೇಗ ತಳೆದರೆ ಅದಕ್ಕೂ ಒಟ್ಟು ಪ್ರಪಂಚಕ್ಕೂ ಅಷ್ಟೂ ಅಷ್ಟು ಅನುಕೂಲ. ಭರತಖಂಡದವರೆಲ್ಲ ಒಂದಾಗಬೇಕು; ಭರತಖಂಡದ ಯೋಗಕ್ಷೇಮ ಒಂದೇ ಉಳಿದುದೆಲ್ಲಕ್ಕಿಂತಲೂ ಮುಖ್ಯವೆಂಬ ಮನೋಧರ್ಮವು ಬಲಿಯಬೇಕು; ಭರತಖಂಡದ ಹಿತಸಾಧನೆಯೊಂದೇ ಭಾರತೀಯರೆಲ್ಲರ ಸಮಾನ ಧರ್ಮವೆಂಬ ಪವಿತ್ರವಾದ ಜನಪದ ಭಾವನೆಯು ಭಾರತೀಯರೆಲ್ಲರ ಹೃದಯವನ್ನೂ ವಿಡಿದು ಹುರಿದುಂಬಿಸಬೇಕು. ಭರತಖಂಡಕ್ಕೆ ಈ ಹೊಸ ರೂಪವು ಎಷ್ಟು ಬೇಗ ಸಿದ್ಧಿಸಿದರೆ ಅದರ ಯೋಗಕ್ಷೇಮಸಾಧನೆಗೂ ಒಟ್ಟು ಪ್ರಪಂಚದ ಯೋಗಕ್ಷೇಮಸಾಧನೆಗೂ ಅಷ್ಟೂ ಅಷ್ಟು ಅನುಕೂಲ. ಏಕೆಂದರೆ, ಪ್ರಪಂಚದಲ್ಲಿ ಸುಖಶಾಂತಿಗಳು ನೆಲೆಗೊಳ್ಳುವುದಕ್ಕೆ ಭರತಖಂಡದಿಂದ ಹೆಚ್ಚಿನ ಸಹಾಯವಾಗಬೇಕಾಗಿದೆ. ಭಾರತೀಯರೆಲ್ಲರೂ ಐಕಮತ್ಯದಿಂದ ಹುರಿಗೊಂಡು, ಭಾರತೀಯರಲ್ಲಿ ನೂತನ ಶಕ್ತಿ ಸಾಮರ್ಥ್ಯಗಳು ಕಳಕಳಿಸುವಂತಾದಲ್ಲಿ ಮಾತ್ರವೇ ಭರತಖಂಡದಿಂದ ಹಾಗೆ ಸಹಾಯವಾಗುವುದು ಸಾಧ್ಯ. ಆದ ಕಾರಣ, ಹಾಗೆ ಸಹಾಯವಾಗುವಂತೆ ಮಾಡುವುದನ್ನೇ ಗುರಿಯಾಗಿಟ್ಟುಕೊಂಡು ಭಾರತೀಯರಾದ ನಾವೆಲ್ಲರೂ ಶ್ರಮಿಸಬೇಕು. ಹೆಂಗಸರಾಗಲಿ ಗಂಡಸರಾಗಲಿ ನಮ್ಮಲ್ಲಿ ಪ್ರತಿಯೊಬ್ಬರೂ ಸಹ, ಯಾರ ಸ್ಥಿತಿಗತಿಗಳು ಎಷ್ಟೇ ಅಲ್ಪವಾಗಿದ್ದರೂ ಕೂಡ, ನಮ್ಮ ನಮ್ಮ ಕೈಯಲ್ಲಿ ಸಾಧ್ಯವಿರುವಷ್ಟು ಸೇವೆಯನ್ನೂ ಸಮರ್ಪಿಸಿ ಆ ಗುರಿಯನ್ನು ಸಾಧಿಸಲು ಸಹಾಯವನ್ನೂಡಬೇಕು. ಭರತಖಂಡದ ನಾನಾ ಪ್ರಾಂತಗಳ ಏಕೀಕರಣಕ್ಕೂ ಭರತಖಂಡದಲ್ಲಿ ಜನಪದ ಭಾವವು ರೂಢಮೂಲವಾಗಿ ನೆಲೆಗೊಳ್ಳುವುದಕ್ಕೂ ಕಾರಣವಾಗುವ ಮಹತ್ತರವಾದ ಕಾರ್ಯಕಲಾಪಗಳು ನಾಡಿನಲ್ಲೆಲ್ಲ ಬೆಳಗುವುದರಲ್ಲಿ ಸಂದೇಹವಿಲ್ಲ. ಈಗ ಅಜಾರಣೆಗೆ ಬರುವುದರಲ್ಲಿರುವ ಇಂಡಿಯಾ ಸರಕಾರದ ಹೊಸ ಕಾನೂನು ಆ ಕಾರ್ಯಕಲಾಪಗಳಿಗೆ ಸ್ವಲ್ಪನುಟ್ಟಿನ ಲಾಂಛನದಂತಿದೆ. ಮೈಸೂರು ಸಂಸ್ಥಾನವು ಭರತಖಂಡದಲ್ಲಿ ಏರ್ಪಡುವ ಸಂಯುಕ್ತ ರಾಜ್ಯಾಂಗ ವ್ಯವಸ್ಥೆಗೆ ಸೇರಲು ಮನಸ್ಸು ಮಾಡುವ ಸ್ಥಿತಿಯೊದಗಿದಲ್ಲಿ, ನಮ್ಮ ಮೈಸೂರು ಸಂಸ್ಥಾನವೂ ಸಹ ಮಹತ್ತರವಾದ ಆ ಕಾರ್ಯಕಲಾಪಗಳಲ್ಲಿ ಭಾಗವನ್ನು ವಹಿಸಿ ತನ್ನ ಸ್ಥಿತಿಗೆ ತಕ್ಕಂತೆ ಉತ್ತಮ ರೀತಿಯಲ್ಲಿ ಸಹಾಯ ಮಾಡುವುದು ಸಾಧ್ಯವೆಂಬ ಭರವಸೆಯು ನನಗಿದೆ. ತಮ್ಮೆಲ್ಲರಿಗೂ ಅದೇ ಭರವಸೆಯಿದೆಯೆಂಬ ವಿಷಯದಲ್ಲಿ ಕೂಡ ನನಗೆ ಸ್ವಲ್ಪವೂ ಸಂದೇಹವಿಲ್ಲ. ಭರತಖಂಡದಲ್ಲಿ ಏರ್ಪಡುವ ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯು ಪ್ರಪಂಚದಲ್ಲೇ ಪ್ರಾಮುಖ್ಯವಾದ ಅತ್ಯಂತ ದೊಡ್ಡ ರಾಜಕೀಯ ವ್ಯವಸ್ಥೆಯಾಗಿ ಪರಿಣಮಿಸುತ್ತದೆ. ಆದ ಕಾರಣ, ಮುಂದೆ ಏರ್ಪಡುವ ಆ ಶಿಸ್ತಿನಲ್ಲಿ ಭಾಗಿಗಳಾಗಿ ನಮ್ಮ ಸ್ಥಾನ ಮಾನಗಳಿಗೆ ತಕ್ಕಂತೆ ಶ್ರೇಷ್ಠರೀತಿಯಲ್ಲಿ ಕೆಲಸಮಾಡಲು ಶಿಷ್ಟವಾಗೋಣ. ನಾವು ಇತರ ಸಂಸ್ಥಾನಗಳ ಮತ್ತು ಇತರ ಪ್ರಾಂತಗಳ ನಮ್ಮ ದೇಶಬಾಂಧವರೊಡಗೂಡಿ ನಮ್ಮ ಮಾತೃಭೂಮಿಗಾಗಿ ಮಾತ್ರವೇ ಅಲ್ಲದೆ ಒಟ್ಟು ಮನುಷ್ಯವರ್ಗದ ಶ್ರೇಯಸ್ಸಿಗಾಗಿಯೇ ಶ್ರಮಿಸಿ ನಮ್ಮ ಸೇವೆಯನ್ನು ಸಮರ್ಪಿಸುವೆವೆಂಬ ಭಾವನೆಯಿಂದ ಉದ್ದೀಪಿತರಾಗಿ ಕಾರ್ಯಕ್ಷೇತ್ರದಲ್ಲಿ ಉತ್ಸಾಹದಿಂದ ಮುಂದುವರಿಯೋಣ.

ಮೈಸೂರು, ತೀನೆಯು ಆಕ್ಟೋಬರ್, ೧೯೩೬. } ಮಿರ್ಜಾ ಎಂ. ಇಸ್ಮಾಯಿಲ್,
ಮೈಸೂರು ಸಂಸ್ಥಾನದ ದಿವಾನ್‌ರವರು.

ಸುಸಂಧಿ! ಕಳೆದುಕೊಳ್ಳಬೇಡಿರಿ!

ಶ್ರೀ ಸರಸ್ವತೀ ಭಂಡಾರ.

ಕೆಳಗೆ ಕಂಡ ಪುಸ್ತಕಗಳ ಪೈಕಿ 3 ಪುಸ್ತಕಗಳನ್ನು ಕೊಂಡುಕೊಳ್ಳತಕ್ಕವರಿಗೆ 'ಸೌಭಾಗ್ಯ ಲಲಿತೆ' ಎಂಬ ರೂ. 0—8—0 ಬೆಲೆಯುಳ್ಳ (ಸ್ವಾರಸ್ಯವಾದ ಕಥೆ) ಪುಸ್ತಕವನ್ನು (ಪುಕ್ಕಟೆ) ಕಳುಹಿಸುತ್ತೇವೆ.

ಕಾದಂಬರಿಗಳು.

ಧರ್ಮಸಾಮ್ರಾಜ್ಯ ರೂ. 1-4-0; ಯುಗಾದಿ ಗುರಿಯ ರೂ. 0-6-0; ವಿಮಲಾದೇವಿ ರೂ. 1-12-0; ವಿವೇಕೋದಯ ರೂ. 0-12-0; ಸಂಸಾರ ಚಿತ್ರ ರೂ. 0-12-0; ಜಗನ್ಮೋಹಿನಿ ರೂ. 1—0—0; ಮಿಂಚು ರೂ. 0-12-0; ಅಂತರಂಗ ರೂ. 1-0-0; ಬ್ಯಾ. ರಾಮಚಂದ್ರನ್ ರೂ. 0-6-0; ತುಲಸೀದಾಸ ರಾಮಾಯಣ ರೂ. 2-8-0. (ನಮ್ಮ ಕ್ಯಾಟಲಾಗು ಉಚಿತ.)

ನಮ್ಮ ವಿಳಾಸ:—ಶ್ರೀ ಸರಸ್ವತೀ ಭಂಡಾರ,
ಪ್ರಸಿದ್ಧ ಪುಸ್ತಕ ವ್ಯಾಪಾರಿಗಳು ಮತ್ತು ಪ್ರಕಾಶಕರು,
ಅವಿನ್ಯೂ ರೋಡ್, ಬೆಂಗಳೂರು ಸಿಟಿ.

NOTICE

Sealed tenders will be received up to 18—12—1936 for Constructing a bridge over Madavu Stream in mile 6/1 of Ariadka Nethical-Cutta Road No. 1B, with granite masonry abutment R. C. Deck and R. S. beams (approximate value Rs. 19,000/—).

Tender documents, plans, etc., can be seen in the Engineer's Office during Office hours and can be had on payment of Rs. 5/— per set.

Alternative quotation for the same with R. C. Superstructure may also be submited.

Office of the District Board Engineer, South Kanara, Mangalore, 14—11—1936. } U. Srinivas Rao,
Dt. Board Engineer, S. Kanara.

ರಕ್ತಕುಂಡವಾದ ಸ್ಪೇನ್ ದೇಶದ ಪೂರ್ವಚರಿತ್ರೆ.

(ಬರೆದಾತ: 'D')

ಸ್ಪೇನ್ ದೇಶದಲ್ಲಿ ಈಗ ನಡಿಯುತ್ತಿರುವ ಭಯಂಕರ ಅಂತಃಕಲಹದ ಕಡೆ ಜಗತ್ತಿನ ಜನರೆಲ್ಲರ ದೃಷ್ಟಿಯು ತಿರುಗಿರುತ್ತದೆ. ಸ್ಪೇನ್ ದೇಶವು ಯೂರೋಪು ಖಂಡದ ರಾಷ್ಟ್ರಗಳಲ್ಲೊಂದೆಂಬದೂ, ಅದರ ದಕ್ಷಿಣ ದಿಕ್ಕಿಗೆ ಮಧ್ಯಸಮುದ್ರಕ್ಕೆ ಹೋಗುವ ದ್ವಾರದಲ್ಲಿ ನಮ್ಮ ಆಂಗ್ಲೇಯ ಅರಸರ ಜಿಬ್ರಾಲ್ಟರ್ ಎಂಬ ಸ್ಥಳವಿರುತ್ತದೆಂಬದೂ ಭೂಗೋಳಶಾಸ್ತ್ರವನ್ನು ಓದುತ್ತಿರುವ ನಮ್ಮ ಚಿಕ್ಕ ಬಾಲಕರಿಗೂ ಗೊತ್ತಿರುತ್ತದೆ. ದೈನಿಕ ಮತ್ತು ವಾರಪತ್ರಿಕೆಗಳಲ್ಲಿ ಈಗ ವರ್ಣಿಸುತ್ತಿರುವ ಈ ಸ್ಪೇನ್ ದೇಶದ ವಿದ್ಯಮಾನಗಳನ್ನು ತಿಳಿಯಬೇಕಾದರೆ ಇಷ್ಟೊಂದು ಜ್ಞಾನವು ಸಾಕಾಗದು. ಕಂಠೀರವನ ವಾಚಕರಲ್ಲಿ ಅನೇಕರಿಗೆ ಸ್ಪೇನ್ ದೇಶದ ವಿಷಯವಾದ ಕೆಲವು ಸಂಗತಿಗಳನ್ನು ತಿಳಿಕೊಳ್ಳುವ ಕುತೂಹಲವಿರಬಹುದೆಂದು ನಮ್ಮ ಊಹನೆಯಾದ್ದರಿಂದ ಈ ಚಿಕ್ಕ ಚರಿತ್ರೆಯನ್ನು ಬರೆಯಲು ಕಾರಣವಾಯಿತು.

ಯೂರೋಪಿನ ರಾಷ್ಟ್ರಗಳಲ್ಲಿ ಸ್ಪೇನ್ ದೇಶವು ರುಶ್ಯ ಮತ್ತು ಫ್ರಾನ್ಸು ದೇಶಗಳಿಗಿಂತ ಮಾತ್ರ ವಿಸ್ತೀರ್ಣದಲ್ಲಿ ಸಣ್ಣದಾದರೂ ಅಲ್ಲಿ ಜನನಿಬಿಡತೆಯು ಹೆಚ್ಚಿಲ್ಲವಾದ್ದರಿಂದ ಅದರ ಜನಸಂಖ್ಯೆಯು ಜರ್ಮನಿ, ಇಟಲಿ, ಬ್ರಿಟನ್, ಪೋಲೆಂಡು ದೇಶಗಳಿಗಿಂತ ಕಡಿಮೆಯಾಗಿರುತ್ತದೆ. ಯೂರೋಪಿನ ರಾಷ್ಟ್ರಗಳಲ್ಲಿ ಪ್ರಮುಖ ರಾಷ್ಟ್ರಗಳ ಜನಸಂಖ್ಯೆಯನ್ನು ವಾಚಕರ ತಿಳುವಳಿಕೆಗಾಗಿ ಕೆಳಗೆ ಬರೆದಿರುತ್ತೇನೆ.

ಯೂರೋಪ್ ಖಂಡ	ಮಿಲಿಯ ಜನರು ೫೦೬
ಯೂರೋಪಿನ ರುಷ್ಯ	೧೭೭
ಜರ್ಮನಿ	೬೫
ಬ್ರಿಟನ್	೪೬
ಫ್ರಾನ್ಸು	೪೨
ಇಟಲಿ	೪೨
ಪೋಲೆಂಡು	೩೨
ಸ್ಪೇನ್	೨೪
ಪೋರ್ತುಗಲ್	೬

ಇವುಗಳಲ್ಲಿ ೪೦ ಮಿಲಿಯ ಜನಸಂಖ್ಯೆಯ ರಾಷ್ಟ್ರಗಳಿಗೆ ಮಾತ್ರ ಮಹಾರಾಷ್ಟ್ರಗಳೆಂದು ಕರೆಯುವ ರೂಢಿಯಿರುವುದರಿಂದ ಸ್ಪೇನ್ ದೇಶವು ಮಹಾರಾಷ್ಟ್ರಗಳಲ್ಲಿ ಸೇರಿದ್ದಲ್ಲ. ಮೂರು ಕಡೆ ಸಮುದ್ರವಿದ್ದು ನಾಲ್ಕನೇ ದಿಕ್ಕಿಗೆ ಪಿರೇನಿಸ್ ಪರ್ವತಶ್ರೇಣಿಯಿಂದಾಗಿ ಉಳಿದ ಯೂರೋಪಿನಿಂದ ವಿಂಗಡಿಸಲ್ಪಟ್ಟ ಸ್ಪೆನಿಶ್ ಅರ್ಧದ್ವೀಪದಲ್ಲಿ ಒಂದೇ ರಾಷ್ಟ್ರವಿರಬೇಕಿತ್ತು. ಆದರೆ ಈ ಅರ್ಧದ್ವೀಪದ ಪಶ್ಚಿಮಕ್ಕೆ ಒಂದು ಸಣ್ಣ ಭಾಗದಲ್ಲಿ ಇತಿಹಾಸಕಾರಣಾಂತರಗಳಿಂದ ಪೋರ್ತುಗಲ್ ಎಂಬ ಬೇರೆ ರಾಷ್ಟ್ರವಿರುತ್ತದೆ.



ಸ್ಪೇನ್=ಪೋರ್ತುಗಲ್ ಎರಡೂ ರಾಷ್ಟ್ರಗಳನ್ನು ಅರಬರು ತಮ್ಮ ವೈಭವಕಾಲವಾದ ಎಂಟನೆಯ ಶತಮಾನದ ಆದಿಯಲ್ಲಿ ತಮ್ಮ ಸಾಮ್ರಾಜ್ಯಕ್ಕೆ ಸೇರಿಸಿಕೊಂಡಿದ್ದರು. ಅರಬರ ಇತರ ಸಾಮ್ರಾಜ್ಯವನ್ನು ತುರ್ಕರು ಜೈಸಿ ಸ್ವಾಧೀನಪಡಿಸಿಕೊಂಡಾಗ ಈ ಎರಡು ರಾಷ್ಟ್ರಗಳಿರುವ ಅರ್ಧದ್ವೀಪವೂ ಅದಕ್ಕೆ ಕ್ಷಾಗಿ ಆಫ್ರಿಕಾ ಖಂಡದಲ್ಲಿರುವ ಮೊರೊಕೊ ದೇಶವೂ ಅರಬರ ಸ್ವಾಧೀನದಲ್ಲಿಯೇ ಉಳಿಯಿತು.

ಹನ್ನೊಂದನೆಯ ಶತಮಾನವು ಮುಗಿಯುವ ತನಕ ಸ್ಪೇನ್ ಅರ್ಧದ್ವೀಪದಲ್ಲಿ ಮುಸ್ಲಿಮರ ಪ್ರಭುತ್ವವು ಆತಂಕವಿಲ್ಲದೆ ನಡೆಯಿತು. ಆದರೆ ಅರಬರ ಬಲವು ಕಡಿಮೆಯಾಗಿ ಅವರ ಮಾತೃಭೂಮಿಯೇ ತುರ್ಕರ್ಕೈಕೆಳಗಾದ್ದರಿಂದ ಈ ಪಶ್ಚಿಮ ರಾಜ್ಯದಲ್ಲಿ ಅರಬರು ಹತ್ತು ಹನ್ನೊಂದನೆಯ ಶತಮಾನಗಳಲ್ಲಿ ಕಡಿಮೆಯಾಗುತ್ತಾ ಹೋಗಿ ಉತ್ತರ ಆಫ್ರಿಕದಲ್ಲಿ ಅರಬರು ಜೈಸಿ ಇಸ್ಲಾಂ ಮತಕ್ಕೆ ಸೇರಿಸಿದ ಮೂರರೆಂಬ ಜನರೇ ಪ್ರಬಲರಾದರು. ಈ ಮೂರರು ಕಲಾ ಕೌಶಲ್ಯಗಳಲ್ಲಿ ನಿಪುಣರಾಗಿದ್ದರು. ಅವರು ತಮ್ಮ ವೈಭವಕಾಲದಲ್ಲಿ ಸ್ಪೇನ್ ದೇಶದಲ್ಲಿ ಸ್ಥಾಪಿಸಿದ ಮಶೀದಿಗಳು ಈಗಲೂ ಅಲ್ಲಿರುತ್ತವೆ.

ಹನ್ನೆರಡನೇ ಶತಮಾನದಲ್ಲಿ ಮೂರರ ಬಲವು ಕಡಿಮೆಯಾಗುತ್ತಾ ಬಂತು. ಅಲ್ಲಲ್ಲಿ ಕ್ರೈಸ್ತರ ಪುಟ್ಟ ರಾಷ್ಟ್ರಗಳೆದ್ದು ಸ್ವಾತಂತ್ರ್ಯವನ್ನು ಪಡೆದುಕೊಂಡವು. ಹೀಗೆ ಸ್ವಾತಂತ್ರ್ಯವನ್ನು ಪಡೆದ ರಾಷ್ಟ್ರಗಳಲ್ಲಿ ಪೋರ್ತುಗಲೇ ಮೊದಲನೆಯದು. ಕ್ರಿ. ಶ. ೧೧೪೯ರಲ್ಲಿ ಮೂರರ ಕೈಕೆಳಗಿಂದ ತಪ್ಪಿಸಿಕೊಂಡು ಸ್ವಾತಂತ್ರ್ಯವನ್ನನುಭವಿಸಿದ ಪೋರ್ತುಗಲು ಅಂದಿನಿಂದ ಇಂದಿನವರೆಗೆ ಬೇರೆ ರಾಷ್ಟ್ರವಾಗಿಯೇ ಇರುತ್ತದೆ.

ಉಳಿದ ಅರ್ಧದ್ವೀಪದಲ್ಲಿಯೂ ಮೂರರ ಬಲವು ತಗ್ಗುತ್ತಾ ಹೋಯಿತು. ಹದಿನೈದನೆಯ ಶತಮಾನದ ಅಂತ್ಯದಲ್ಲಿ ಮೂರರನ್ನು ಓಡಿಸಿ ಕ್ರೈಸ್ತ ರಾಷ್ಟ್ರಗಳೆಲ್ಲಾ ಒಂದೇ ಅರಸನ ಕೆಳಗೆ ಒಂದಾದವು. ಹದಿನಾರನೆಯ ಶತಮಾನವು ಸ್ಪೇನ್ ಪೋರ್ತುಗಲ್ ರಾಷ್ಟ್ರಗಳ ವೈಭವದ ಕಾಲ. ಅವುಗಳ ಜನರು ನಾವಿಕಜ್ಞಾನವನ್ನು ಪಡೆದು ಭೂಲೋಕದ ದೂರ ದೂರ ಪ್ರದೇಶಗಳನ್ನು ಕಂಡುಹಿಡಿದು, ವಾಣಿಜ್ಯವನ್ನು ಬೆಳೆಸಿ, ರಾಜ್ಯಗಳನ್ನು ಸ್ಥಾಪಿಸಿ, ಸಿರಿಯಿಂದ ಮೆರೆಯುತ್ತಿದ್ದರು. ಸ್ಪೇನ್ ದೇಶದವರು ದಕ್ಷಿಣ ಅಮೇರಿಕದ ದುರ್ಬಲರಾದ ಜನರನ್ನು ಜೈಸಿ, ಹಿಂಸಿಸಿ ಅಲ್ಲಿಂದ ತಮ್ಮ ರಾಷ್ಟ್ರಕ್ಕೆ ಕೊಂಡು ಬಂದ ಹೇರಳ ದ್ರವ್ಯದ ಬಲದಿಂದ ಯೂರೋಪ್ ಖಂಡದಲ್ಲಿ ಮುಂದಾಳಾದರು. ಎರಡು ರಾಷ್ಟ್ರಗಳ ಜನರೂ ಮತಾಂಧರಾದ ರೋಮೀಯ ಕ್ರೈಸ್ತರಾಗಿದ್ದು ತಮ್ಮ ಮತದ ಸಿದ್ಧಾಂತಗಳನ್ನು ಒಪ್ಪದಿದ್ದವರನ್ನೆಲ್ಲಾ ಪೈಶಾಚಿಕ ಹಿಂಸೆಗೆ ಗುರಿಮಾಡುತ್ತಿದ್ದರು. ಸ್ಪೇನ್ ದೇಶದಲ್ಲಿ ಜೆಸೂವಿಟರ ಮೂಲಪುರುಷನಾದ ಇಗ್ನೆಶಿಯಸ್ ಲೊಯೋಲನು ಹುಟ್ಟಿದ್ದಾದ್ದರಿಂದ ಆ ದೇಶವು ಜೆಸೂವಿಟರ ಮಾತೃಭೂಮಿಯೆಂದು ಹೇಳಬಹುದು. ಮತಾಂಧರಾಗಿ ಕ್ರೂರರಾದ ಸ್ಪೆನಿಶರಿಗೂ ಪೋರ್ತುಗೀಸರಿಗೂ ಚಕ್ರಾಧಿಪತ್ಯವನ್ನು ಸ್ಥಿರವಾಗಿ ಸ್ಥಾಪಿಸಲಾಗುವ ಗುಣಗಳಿರಲಿಲ್ಲ. ತಮ್ಮ ಮತಾಂಧತೆಯಲ್ಲಿ ಬಿದ್ದುಕೊಂಡಿದ್ದು ಇತರ ಪಾಶ್ಚಾತ್ಯ ರಾಷ್ಟ್ರಗಳು ಪ್ರಬಲವಾಗುತ್ತಾ ಹೋಗುವಾಗ ತಾವು ಕುಗ್ಗುತ್ತಾ ಹೋದವು. ದಕ್ಷಿಣ ಅಮೇರಿಕದ ಜನರನ್ನು ಹಿಂಸಿಸಿ ತಂದ ಐಶ್ವರ್ಯವು ಸ್ಪೇನಿನಲ್ಲಿ ಹೆಚ್ಚು ಕಾಲ ನಿಲ್ಲಲಿಲ್ಲ. ರಕ್ತಪ್ರವಾಹದಿಂದ ಕಟ್ಟಿದ ಸಾಮ್ರಾಜ್ಯವು ಮಾಯವಾಗುತ್ತಾ ಹೋಯಿತು. ರಕ್ತ ಚೆಲ್ಲುವ ಕೈಗಳು ಮಾತ್ರ ಸ್ಪೆನಿಶರಲ್ಲಿ ಶಾಶ್ವತವಾಗಿ ನಿಂತದ್ದರಿಂದ ಈಗ ಸ್ಪೇನಿನಲ್ಲಿ ನಡಿಯುವ ಯಾದವಕಲಹದಲ್ಲಿ ಎಲ್ಲೆಲ್ಲಿಯೂ ಭೀಕರ ರಕ್ತಪ್ರವಾಹವು ತೋರುತ್ತದೆ.

ಹತ್ತೊಂಬತ್ತನೆಯ ಶತಮಾನದ ಅಂತ್ಯದಲ್ಲಿ ಫಿಲಿಪ್ಪೈನ್ ದ್ವೀಪಗಳನ್ನೂ ಕಳಕೊಂಡು,—ಚಕ್ರಾಧಿಪತ್ಯವನ್ನೆಲ್ಲಾ ಬಿಟ್ಟು ಸ್ಪೇನು ಯೂರೋಪಿನ ಚಿಕ್ಕ ರಾಷ್ಟ್ರವಾಯಿತು. ಈಗ ಸ್ಪೇನಿಗೆ ಆಫ್ರಿಕಾ ಖಂಡದಲ್ಲಿ ಒಟ್ಟಿಗೆ ೧೪೦,೦೦೦ ಚದರ ಮೈಲು ವಿಸ್ತೀರ್ಣವಿರುವ ಪ್ರದೇಶವೊಂದು ಮಾತ್ರ ಅಧೀನವಾಗಿರುತ್ತದೆ. ಇದರಲ್ಲಿ ೯ ಲಕ್ಷ ಪ್ರಜೆಗಳಿರುವರು. ಸಾಮ್ರಾಜ್ಯವು ದೊಡ್ಡದಿರುವಾಗ ವರಹಿಂಸೆ-ರಾಕ್ಷಸನೀತಿಗಳಿಂದ ರಾಷ್ಟ್ರಕ್ಕೆ ಸುಲಭವಾಗಿ ದ್ರವ್ಯರಾಶಿಯು ಬರುತ್ತಿದ್ದುದರಿಂದ ಸ್ಪೇನ್ ದೇಶದೊಳಗಣ ಆರ್ಥಿಕ ಸ್ಥಿತಿಯನ್ನು ನೆಟ್ಟಗೆ ಮಾಡುವ ಅವಶ್ಯವು ಯಾರಿಗೂ ತೋರಲಿಲ್ಲ. ಹೊರಗಣ ದ್ರವ್ಯವು ಬರುತ್ತಿದ್ದ ತನಕ ಜನರ ಹಾಹಾಕಾರಗಳು ಕೇಳಿಬರಲಿಲ್ಲ. ಇಪ್ಪತ್ತನೆಯ ಶತಮಾನದಲ್ಲಿ ಚಕ್ರಾಧಿಪತ್ಯವು ಮಾಯವಾಯಿತು; ಒಳಗೆ ಸ್ವಶಕ್ತಿಯಿಂದ ಜೀವನವನ್ನು ನಡಿಸಲಿಕ್ಕೆ ಉಪಾಯಗಳ್ಯಾವವೂ ಇಲ್ಲ. ಹೀಗಾಗಿ ಪ್ರಜೆಗಳ ಹಾಹಾಕಾರಗಳು ಕೇಳಲಾರಂಭವಾಯಿತು.

ಸ್ಪೇನ್ ದೇಶವು ಅಲ್ಲಲ್ಲಿ ಪರ್ವತಶ್ರೇಣಿಗಳು, ಹೊಳೆಗಳಿದ್ದು ತುಂಡುರಾಷ್ಟ್ರಗಳು ನೆಲೆಗೊಳ್ಳಲಿಕ್ಕೆ ಯೋಗ್ಯವಾದ ಪ್ರದೇಶವಾಗಿರುತ್ತದೆ. ಹೆಚ್ಚಿನ ಭಾಗವು ಎತ್ತರವಾಗಿದ್ದು ಮಳೆ ಇಲ್ಲದ ಪ್ರದೇಶವಾದ್ದರಿಂದ ಅಲ್ಲಿ ಕೃಷಿಕೆಲಸವು ಬಹಳ ಸಂಕಷ್ಟಕರವಾಗಿರುತ್ತದೆ. ಇಡೀ ದೇಶದಲ್ಲಿ ಪಟ್ಟಣಗಳು ಆರೇಳು ಮಾತ್ರ; ಹಳ್ಳಿ

(೬ನೇ ಪುಟಕ್ಕೆ ಮುಂದುವರಿಸಿರುವೆ.)

ಪಂಡಿತ ಜವಹರಲಾಲರ ಆತ್ಮಕಥೆ

೧೦೦೦ ಪುಟಿಗಳು! ಎರಡು ಸಂಪುಟಿಗಳು!!

ಡೆಮ್ಮಿ. ಅಷ್ಟಪತ್ರಾಕಾರ. ಈ ವರ್ಷ ಡಿಸೆಂಬರ್ ಅಂತ್ಯದಲ್ಲಿ ಪ್ರಕಟವಾಗುವುದು.
ಟಪಾಲು ಖರ್ಚು ಪ್ರತ್ಯೇಕ.

		ಹಣ ಮುಂಗಡ ಕಳುಹಿಸುವವರಿಗೆ ಪ್ರಕಟಣ ಪೂರ್ವಕಾಲದ ಬೆಲೆ.
ಅತ್ಯುತ್ತಮ ಪ್ರತಿ	ರೂ. ೧೦—೦—೦	ಅತ್ಯುತ್ತಮ ಪ್ರತಿ ರೂ. ೧೦—೦—೦.
ವಾಚನಾಲಯ ಪ್ರತಿ	,, ೫—೦—೦	ವಾಚನಾಲಯ ಪ್ರತಿ ,, ೬—೦—೦
ಸಾಮಾನ್ಯ ಪ್ರತಿ	,, ೫—೦—೦	ಸಾಮಾನ್ಯ ಪ್ರತಿ ,, ೪—೮—೦

ಟಪಾಲು ಖರ್ಚು ಮುಘತ್ತು.

ಹಣವನ್ನು ನೇರ ಕಳುಹಿಸಬೇಕು. ಏಜಂಟರನ್ನು ನೇಮಿಸಿಲ್ಲ.

ಮುಂಗಡನಾಗಿ ಆರ್ಡರುಗಳನ್ನು ಕೊಟ್ಟು ವ್ಯಾಪಾರ ನಡೆಸುವ ಪುಸ್ತಕ ವ್ಯಾಪಾರಿಗಳಿಗೆ ಧಾರಾಳವಾದ ಕವಿಷನ್ ಕೊಡಲ್ಪಡುವುದು.

ಪ್ರಕಾಶಕರು:—ಸಿ. ಅಶ್ವತ್ಥನಾರಾಯಣರಾವ್, ಬಿ. ಎ.,
ಸಂಪಾದಕರು: "ನವಜೀವನ" ಮತ್ತು "ಮಕ್ಕಳ ಪುಸ್ತಕ",
ಬಳೇಪೇಟೆ, ಬೆಂಗಳೂರು ಸಿಟಿ.

ANNOUNCING

Bridgestone Tyres

BRIDGESTONE

Sole Importers

Messrs. Mitsui Bussan Kaisha Ltd.
MADRAS

Local Distributor

Mr. U. Subraya Nayak
CANTONMENT :: MANGALORE

ಗಳು ಸಾವಿರಾರು. ಹಳ್ಳಿಗಳಲ್ಲಿ ಜನರು ಕಷ್ಟ ಕೃಷಿಯಿಂದ ಅರ್ಧ ಹೊಟ್ಟೆಯನ್ನು ತುಂಬಿಸಿ ಕೊಳ್ಳಲಿಕ್ಕೆ ಸಹಾ ಕಷ್ಟ. ಕೆಲವು ಕಡೆಗಳಲ್ಲಿ ಗನಿಗಳಿದ್ದು, ಇನ್ನು ಕೆಲವು ಕಡೆಗಳಲ್ಲಿ ನೇಯುವ ಕೈಗಾರಿಕೆಗಳಿದ್ದರೂ ಹೆಚ್ಚಿನ ಜನರು ಜೀವನೋಪಾಯದ ವೃತ್ತಿಗಳಿಲ್ಲದೆ ಕಳವಳಪಡುತ್ತಿದ್ದರು. ಕೃಷಿಮಾಡುವ ಭೂಮಿಗಳು ಕೆಲವು ಶ್ರೀಮಂತರ ಕೈಯಲ್ಲಿಯೂ ಜೆಸುವಿಟರ ಕೈಯಲ್ಲಿಯೂ ಇದ್ದು ಇವರ ಕ್ರೂರತನಗಳಿಂದ ಜನರಲ್ಲಿ ಕ್ರೋಧ, ನಿರಾಶೆಗಳು ತುಂಬಿಕೊಂಡಿದ್ದವು.

ರಾಜಕೀಯ ವಿಷಯಗಳಲ್ಲಿಯೂ ರಾಷ್ಟ್ರದಲ್ಲಿ ಸುಖವಿರಲಿಲ್ಲ. ಹಳ್ಳಿಗಳಲ್ಲಿ ಮತಾಂಧ, ವಿದ್ಯಾವಿಹೀನರೇ ಹೆಚ್ಚಿದ್ದು ಅಲ್ಲಿ ಜೆಸೂವಿಟರ ಪ್ರತಾಪ. ಪಟ್ಟಣಗಳಲ್ಲಿ ಸೈನಿಕರ, ಸೇನಾಧೀಶರ ಕಾಟ. ಸಿಂಹಾಸನದ ಮೇಲಿದ್ದ ಅರಸನು ಕೂಡ ಜೆಸೂವಿಟರ್ಗಮತ್ತು ಸೇನಾಧೀಶರ ಸಹಾಯದಿಂದ ಆಳಬೇಕಿತ್ತು. ಪ್ರಜಾಸತ್ತೆಯ ಕುರುಹೇ ಇರಲಿಲ್ಲ.

ಹೀಗಿರುತ್ತಿರುವಾಗ ಪಟ್ಟಣದ ಕೂಲಿಗಾರರಲ್ಲಿ ಮಾತ್ರ ಪರರಾಷ್ಟ್ರಸಂಪರ್ಕಗಳಿಂದ ಜ್ಞಾನವು ಹುಟ್ಟಿ ಸಮತಾವಾದವು ತಲೆಯೆತ್ತಿತು. ಸ್ಥಳೀಯ ವಿಚಾರಗಳೇ ಹೆಚ್ಚಾಗಿದ್ದ ಸಂಘವಾದ (Syndicalism)ದಿಂದ ಸ್ವಲ್ಪ ಬಲವು ಕಡಿಮೆಯಾದರೂ ಸಮತಾವಾದವು ದಿನೇ ದಿನೇ ಹೆಚ್ಚಿ ಹಳ್ಳಿಗಳಲ್ಲಿ ಜೀವನೋಪಾಯವಿಲ್ಲದೆ ತಿರುಗುತ್ತಿರುವವರಲ್ಲಿಯೂ ವಿಸ್ತರಿಸಿತು. ಕೂಲಿಗಾರರಲ್ಲಿ ಪಕ್ಷಗಳಿದ್ದರೂ ಅವರೆಲ್ಲಾ ಜೆಸೂವಿಟ ವ ಶ್ರೀಮಂತರನ್ನು ತಗ್ಗಿಸಬೇಕೆಂಬ ಧ್ಯೇಯದ ಕುರಿತು ಒಮ್ಮನಸ್ಸಿನವರಾಗಿದ್ದರು.

ಹೊರಗಿನಿಂದ ಪ್ರಜಾಸಮ್ಮತದಿಂದ ನಡೆಯುವ ರಾಷ್ಟ್ರವೆಂದು ತೋರಿಸಲಿಕ್ಕೆ ಸ್ಪೇನಿನಲ್ಲಿ ಕೆಲವು ಸಂಸ್ಥೆಗಳಿದ್ದರೂ—ಪ್ರಜೆಗಳಿಗೆ ಮೊರೆಯಿಡುವ ಅಧಿಕಾರವೂ ನಿಜವಾಗಿ ಇರಲಿಲ್ಲ. ಅರಸನು ಸೈನ್ಯಾಧೀಶರ ಮತ್ತು ಜೆಸೂವಿಟರ ಸಹಾಯದಿಂದ ನಿರಂಕುಶವಾಗಿ ಆಳುತ್ತಿದ್ದನು. ೧೯೨೯ರಲ್ಲಿ ಪ್ರಜಾಪ್ರೀತಿಯನ್ನು ಳಿಸಬೇಕೆಂಬ ಧ್ಯೇಯವಿರುತ್ತಿದ್ದ ಪ್ರಾಮೊ ಏ ವೈರೆನೆಂಬ ಸೇನಾಧೀಶನನ್ನು ಅರಸನಾದ ಆಲ್ಫಾನ್ಸನು ಮಂತ್ರಿತ್ವದಿಂದ ತಪ್ಪಿಸಿ ಬೇರೆ ಮಂತ್ರಿಗಳನ್ನಿಟ್ಟು ಸ್ವೇಚ್ಛಾವರ್ತನೆಯಿಂದ ಆಳಿಸೊಡಗಿದನು. ಇದನ್ನು ಸಹಿಸಲಾರದೆ ಜನರು ಅಲ್ಲಲ್ಲಿ ದಂಗೆ ಎದ್ದರು. ಕೊನೆಗೆ ಸೈನ್ಯದ ಸಹಾಯವೂ ತಪ್ಪಿ ಜನರ ಒಕ್ಕಟ್ಟಿನಿಂದ ಭೀತಿಯೂ ಹುಟ್ಟಿ, ಆಲ್ಫನ್ಸನು ೧೯೩೧ನೇ ಎಪ್ರಿಲ್ ತಿಂಗಳಲ್ಲಿ ಸ್ಪೇನ್ ದೇಶವನ್ನು ಬಿಟ್ಟು ಪಲಾಯನಮಾಡಿದನು. ಅಂದಿನಿಂದ ಸ್ಪೇನ್ ದೇಶವು ಪ್ರಜಾಧಿಪತ್ಯದ ರಿಪಬ್ಲಿಕ್ ಆಗಿರುತ್ತದೆ. ಅಲ್ಲಿ ಈಗ ಅರಸನಿಲ್ಲ.

೧೯೩೧-೩೨ನೆಯ ವರ್ಷಗಳಲ್ಲಿ ಈ ಪ್ರಜಾಧಿಪತ್ಯದ ರಾಜ್ಯಾಂಗರಚನೆಯನ್ನು ಪ್ರಜೆಗಳೆಲ್ಲಾ ಕೂಡಿ ನಿಶ್ಚಯಿಸಿದರು. ಈ ರಾಜ್ಯಾಂಗರಚನೆಯಂತೆ ಈಗ ಸ್ಪೇನಿನ ಸರಕಾರವು ನಡೆಯುತ್ತಿದೆ.

ಸ್ಪೇನಿನಲ್ಲಿ ಹಿರಿಯಭರಿತರಾದ ಪ್ರತಿಯೊಬ್ಬ ಗಂಡಸಿಗೂ ಹೆಂಗಸಿಗೂ ಮತವೀಯುವ ಹಕ್ಕಿರುತ್ತದೆ. ಇವರೆಲ್ಲರೂ ಮತವಿತ್ತು, ಚುನಾವಣೆಯಾದವರು ಪ್ರಜಾಪ್ರತಿನಿಧಿಗಳ ಸಭೆಯಾಗಿ ಕೂಡಿ—ತಮ್ಮ ನಾಯಕತ್ವಕ್ಕೊಬ್ಬನನ್ನು ಆರಿಸುತ್ತಾರೆ. ಈ ನಾಯಕನು ಪ್ರತಿನಿಧಿಗಳಲ್ಲಿ ಕೆಲವರನ್ನು ಸಚಿವರನ್ನಾಗಿ ನೇಮಕ ಮಾಡಿ, ರಾಜ್ಯದ ಕಾರ್ಯಭಾಗವನ್ನು ಅವರಿಗೊಪ್ಪಿಸುತ್ತಾನೆ. ಈ ರೀತಿ ನಡೆಯುತ್ತಿರುವ ಸ್ಪೇನಿನ ರಾಜ್ಯಭಾರವು ಪ್ರಜಾಸಮ್ಮತಿಯಿಂದ ನಡೆಯುವ ರಾಜ್ಯಭಾರವೆಂದು ಯಾರಿಗೂ ವ್ಯಕ್ತವಾಗಬಹುದು. ಆದರೆ ಇದಕ್ಕೆ ಸೈನ್ಯಾಧೀಶರೂ, ಪಲಾಯನನಾದ ಅರಸನ ಹಿತಚಿಂತಕರೂ, ಜೆಸೂವಿಟರೂ, ಶ್ರೀಮಂತರೂ ವಿರೋಧಿಗಳಾಗಿದ್ದು—ಅದು ನಿಜವಾಗಿ ಸಮತಾವಾದಿಗಳಾದ ಬಡಜನರ ಅಧಿಕಾರದ ರಾಜ್ಯಭಾರವೆಂದು ಹೇಳಬಹುದು.

೧೯೩೧ರಿಂದ ೧೯೩೫ರ ತನಕ ಎರಡು ಸಲ ಪ್ರಜಾಪ್ರತಿನಿಧಿಸಭೆಗೆ ಚುನಾವಣೆಗಳಾದವು. ಎರಡು ಸಲವೂ ಚುನಾವಣೆಯಲ್ಲಿ ಅಪಜಯಹೊಂದಿದ ಶ್ರೀಮಂತ-ರಾಜ-ಸೈನಿಕ-ಜೆಸೂವಿಟ-ಪಕ್ಷದವರೆಲ್ಲಾ ಈ ರಿಪಬ್ಲಿಕನ್ನು ಹೇಗೆ ನಾಶನಮಾಡಬಹುದೆಂಬ ಸಾಧನೆಯಲ್ಲಿಯೇ ಇರುತ್ತಿದ್ದರು. ಇದಕ್ಕೆ ಕಾರಣಗಳೂ ಅನೇಕ ವಿರುತ್ತವೆ. ಕೃಷಿಗಾರರನ್ನು ಪೀಡಿಸಿ ಪ್ರಬಲರಾಗಿದ್ದ ಜೆಸೂವಿಟರ ಮತ್ತು ಶ್ರೀಮಂತರ ಆಸ್ತಿಗಳನ್ನೆಲ್ಲಾ ಈ ರಿಪಬ್ಲಿಕ್ ಸರಕಾರದವರು ಅವರಿಂದ ತಪ್ಪಿಸಿ ಬಡ ಜನರಿಗೆ ಹಂಚಿಕೊಟ್ಟಿರುತ್ತಾರೆ. ಮತಾಂಧತೆಯನ್ನು ಕಲಿಸುತ್ತಿದ್ದ ಕೆಲವು ಕ್ರೈಸ್ತ ದೇವಾಲಯಗಳನ್ನು ಇವರು ನಾಶಮಾಡಿರುವರು. ಜೇಸುವಿಟರನ್ನು ರಾಜ್ಯದಿಂದ ಹೊರಗೆ ಓಡಿಸಿರುವರು. ಪಲಾಯನನಾದ ರಾಜನನ್ನು ರಾಷ್ಟ್ರದ್ರೋಹಿಯೆಂದು ತೀರ್ಮಾನಿಸಿ ಅವನ ಸ್ವಾಧೀನವಿರುತ್ತಿದ್ದ ಭೂಮಿಗಳನ್ನೆಲ್ಲಾ ಬಡ ಜನರಿಗೆ ಕೊಟ್ಟಿರುತ್ತಾರೆ. ಬಡ ಜನರಲ್ಲಿ ವಿದ್ಯಾಪ್ರಚಾರ-ಆರ್ಥಿಕ ಉದ್ಧಾರದ ಕಾರ್ಯಗಳನ್ನು ಕೈಕೊಂಡಿರುತ್ತಾರೆ. ರಿಪಬ್ಲಿಕಿನಲ್ಲಿ ಆಳುವವರಲ್ಲಿಯೂ ಅನೇಕ ಪಕ್ಷಗಳಿದ್ದರೂ ಆ ಪಕ್ಷಗಳಲ್ಲಿ ಬಲಿಷ್ಠವಾದ ಪಕ್ಷವು ಸಮತಾವಾದಿಗಳ ತೀಕ್ಷ್ಣಪಕ್ಷವಾಗಿದ್ದುದರಿಂದ ಸ್ಪೇನ್ ದೇಶದ ರಾಜ್ಯಕ್ರಮವು ರುಶ್ಯ ದೇಶದ ರಾಜ್ಯಕ್ರಮದಂತೆಯೇ ಆಗುವ ಸಂಭವವೂ ಬಲವಾಗಿರುತ್ತದೆ. ಈ ಕಾರಣಗಳಿಂದ ಹೊರಗಣ ಭಂಡವಾಳಶಾಹಿಗಳಿಗೂ ಫೆಸಿಸ್ಟ ಪಂಗಡದವರಿಗೂ ಈ ರಾಷ್ಟ್ರವನ್ನು ತಗ್ಗಿಸಬೇಕೆಂಬ ಆಶೆಯು ಪ್ರಬಲವಾಗಿ ಒಳಗಿನ ರಾಷ್ಟ್ರವಿರೋಧಿಗಳಿಗೆ ಹೊರಗಣ ಸಹಾಯವೂ ಸಿಕ್ಕಲು ಕಾರಣವಾಯಿತು. ತನ್ನ ಸ್ವಾತಂತ್ರ್ಯವನ್ನು ಹೇಗಾದರೂ ಸಂಪಾದಿಸಿಕೊಳ್ಳಬೇಕೆಂಬ ಆಶೆಯಿರುತ್ತಿದ್ದ ಆಫ್ರಿಕದ ಮೂರರೂ ಈ ಪಕ್ಷಕ್ಕೆ ಸೇರಿದರು. ಇದೇ ವರ್ಷದ ಜುಲ್ಯಾತಿಂಗಳಲ್ಲಿ, ಮೊದಲೇ ಒಳಗಿಂದೊಳಗೆ ಎಲ್ಲವನ್ನೂ ಸಿದ್ಧಪಡಿಸಿದ ಬಳಿಕ ಇವರೆಲ್ಲಾ ಒಟ್ಟಾಗಿ ದಂಗೆಯೆದ್ದರು. ಈ ದಂಗೆಯು ಇನ್ನೂ ನಡೆಯುತ್ತಿದೆ. ಅದರ ಪರಿಣಾಮವೇನಾಗಬಹುದೆಂಬದನ್ನು ಹೇಳಲಿಕ್ಕೆ ಸಾಧ್ಯವಿಲ್ಲ.

ನೂತನ ಭೂಮ್ಯಾಲೀಕರಾದ ಸ್ಪೆನಿಶ್ ದೇಶದ ಕೃಷಿಗಾರರೂ ಅವರ ಹೆಂಗಸರೂ ಈ ದಂಗೆಖೋರರೊಡನೆ ಶೌರ್ಯದಿಂದ ಕಾದಾಡುತ್ತಿದ್ದಾರೆ. ಸೈನ್ಯ ಮತ್ತು ಆರ್ಥಿಕಬಲವೂ—ಹೊರಗಣ ಬಂಡವಾಳಶಾಹಿಗಳೆಲ್ಲರ ಸಹಾಯವೂ—ಇಟಲಿ, ಜರ್ಮನ್ ರಾಷ್ಟ್ರಗಳ ಸಹಾಯವೂ—ದಂಗೆಖೋರರಿಗಿದ್ದರೂ ಅವರು ಎಣಿಸಿದಂತೆ ಈ ಸಮತಾವಾದಿ ಕೂಲಿಗಾರ ಪಕ್ಷದ ಸರಕಾರವನ್ನು ನಾಶವಡಿಸುವದು ಅವರಿಗೆ ಸುಲಭವಾಗಲಿಲ್ಲ. ಸರಕಾರದ ಕಡೆಯಿಂದಲೂ ನೂತನ ಧ್ಯೇಯಗಳಿಗಾಗಿ ಪ್ರಾಣಾರ್ಪಣೆಯನ್ನು ಮಾಡಲಿಕ್ಕೆ ಹೇಸದ ಶೂರರಿದ್ದಾರೆ. ಈ ಭಯಂಕರ ಹೋರಾಟದಲ್ಲಿ ಒಂದು ಪಕ್ಷದವರ್ಯಾರಾದರೂ ಸಂಪೂರ್ಣ ವಿನಾಶವಾಗಬೇಕಲ್ಲದೆ ರಾಜಿಯಾಗುವದೆಂತಿಲ್ಲ — ಶರಣಾಗತರಾಗುವದೆಂತಲೂ ಇಲ್ಲ. ಸ್ಪೇನ್ ಸರಕಾರದವರಿಗೆ ಈಗ ರುಷ್ಯ ದೇಶದವರ ಸಹಾಯವು ಸಿಕ್ಕಿದ್ದರಿಂದ ದಂಗೆಖೋರರಿಗೆ ಅವರನ್ನು ಫಕ್ಕನೆ ವಿನಾಶಮಾಡುವದೂ ಸಾಧ್ಯವಾಗದು.

ಈ ಭಯಂಕರ ಅಂತಃಕಲಹದಲ್ಲಿ ಆಂಗ್ಲೇಯರೂ, ಫ್ರೆಂಚರೂ ತಾಟಸ್ಥ್ಯವನ್ನವಲಂಬಿಸಿಕೊಂಡಿದ್ದರೂ ಆ ರಾಷ್ಟ್ರಗಳಲ್ಲಿಯೂ ಸ್ಪೇನ್ ದೇಶದ ವಿಷಯದಲ್ಲಿ ಯೋಚನೆ ವಿಚಾರಗಳು ತುಂಬಿರುವವು. ಈ ಕದನವು ಯಾವ ರೀತಿಯೇ ಅಂತ್ಯವಾಗಲಿ—ಅದರಿಂದಾಗಿ ಇತರ ರಾಷ್ಟ್ರಗಳ ಸ್ಥಿತಿಗತಿಗಳು ಮಾರ್ಪಾಟನ್ನು ಹೊಂದುವವೆಂಬದು ನಿಸ್ಸಂದೇಹ. ಲೆನಿನನು ಸ್ಥಾಪಿಸಿದ ರಾಜನೀತಿಯ ತತ್ವವು ಭೂಲೋಕದಲ್ಲಿ ಶಾಶ್ವತವಾಗುವದೋ—ಹಿಟ್ಲರ್ ಮುಸ್ಸೊಲಿನಿಯರ ಫೆಸಿಸ್ಟ ತತ್ವಗಳು ಶಾಶ್ವತವಾಗುವವೋ ಎಂಬದನ್ನು ಈ ಸ್ಪೆನಿಶ್ ಅಂತಃಕಲಹದಲ್ಲಿ ವಿಧಾತನು ತೋರಿಸಿಕೊಡುವನಾದ್ದರಿಂದ ಎಲ್ಲರ ದೃಷ್ಟಿಯೂ ಇಂದು ಸ್ಪೇನಿನ ಕಡೆಯಾಗಲಿಕ್ಕೆ ಕಾರಣವಾಗಿರುತ್ತದೆ. ಇದು ಮೋಲಾ ಫ್ರೆಂಕ್ಫೊರವರಿಗೂ ಲಾರ್ಗೋ ಕೆಬೆಲ್ಲೇರನಿಗೂ ನಡೆಯುವ ಕಲಹವೆಂದು ಎಣಿಸುವದು ಸರಿಯಲ್ಲ. ಇದು ಜಗತ್ತಿನ ಮಹಾ ಶಕ್ತಿಗಳ ಕಾದಾಟವೆಂದು ತಿಳಿಯಬೇಕು.



ಪರ್ಮಾಸನ್ ಮಾತ್ರೆಗಳು ಉನ್ಮಾದಕ್ಕೆ ಸಂಜೀವನ

ಇದೀಗ ಅದ್ವಿತೀಯ ಸಿದ್ಧೌಷಧ. ಈಗ ಚಾಲ್ತಿಯಲ್ಲಿರುವ ಹಿಂದುಸ್ಥಾನದ ಮತ್ತು ಆಂಗ್ಲೇಯ ಚಿಕಿತ್ಸೆಗಳು, ಹುಚ್ಚು, ನಿದ್ರಾಭಂಗ, ಮನೋಭ್ರಾಂತಿ, ಹಿಸ್ಟೇರಿಯಾ ಮತ್ತು ಅಪಸ್ಮಾರ ಮುಂತಾದ ಎಲ್ಲಾ ರೋಗಗಳಿಗೆ ವಿಫಲವಾದಲ್ಲಿ, ಕೊನೆಗೆ ಒಂದುವರ್ತಿಯಾದರೂ **ಪರಮಾಸನ್ ಮಾತ್ರೆಗಳನ್ನು** ಉಪಯೋಗಿಸಿ ಖಾತ್ರಿ ಮಾಡಿರಿ. ಇದನ್ನು ರೋಗಿಗಳಿಗೆ ಉಪಯೋಗಿಸಿ ಇದರ ಆಶ್ಚರ್ಯಕರವಾದ ಗುಣಗಳನ್ನು ನೋಡಿ, ಅನೇಕ ಪಂಡಿತ, ಡಾಕ್ಟರುಗಳು ಹೊಗಳಿ ಕೊಟ್ಟ ಸರ್ಟಿಫಿಕೇಟುಗಳು ಇದರ ಕೀರ್ತಿಯನ್ನು ವರ್ಣಿಸುತ್ತವೆ. ಈ ಮಾತ್ರೆಗಳಿಂದ ಚಿಕಿತ್ಸೆಮಾಡಿದರೆ ರೋಗಿಗಳನ್ನು ಎಂದೆಂದಿಗೂ ಮೆಂಟಲ್ ಆಸ್ಪತ್ರೆಗೆ ಕಳುಹಿಸುವ ಅಗತ್ಯವಿರದು. 60 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. ೩—೦—೦ ಮಾತ್ರ, ವ್ಯಾಪಾರಿಗಳಿಗೆ ಕಮಿಷನ್ ಕೊಡಲಾಗುವುದು.

ಮಂಗಳೂರಿನಲ್ಲಿ **ಕಾರ್ನಾಡ್ ಶಿವರಾವ್,** ಮಾರ್ಕೆಟ್ ರೋಡ್
ಇನ್ನೆಲ್ಲಿ ಮಾತ್ರೆಗಳು ಮಾರಾಟಕ್ಕೆ ದೊರೆಯುವವು.

C. V. KAMATH,
Hysteria & Mental Expert, **Post Udipi.**

ವಿದ್ಯಾದಾನಕ್ಕೆ ಪ್ರೋತ್ಸಾಹಿಸಿರಿ!

ಹಿಂದೂ ವಿದ್ಯಾದಾಯಿನೀ ಸಂಘದವರು ತನ್ನ ಆಡಳ್ತೆಯೊಳಗಿರುವ
'ಇಡ್ಯ ವಿದ್ಯಾದಾಯಿನೀ ಶಾಲೆ'
ಮತ್ತು ಹೊಸದಾಗಿ ಸ್ಥಾಪಿಸಲಿರುವ
'ಅನಾಥಾಲಯ'
ಇವುಗಳ ಸಹಾಯಾರ್ಥವಾಗಿ ಏರ್ಪಡಿಸಿರುವ

'ಗ್ರ್ಯಾಂಡ್ ವಿದ್ಯಾದಾಯಿನೀ ಸೋಡ್ತಿ'

ತೆಗೆಯುವ ತಾರೀಕು: 17—1—1937. ಸೋಡ್ತಿಯ ಮೊಬಲಗು: ರೂ. 50,000

1ನೇ ಇನಾಂ ರೂ. 8000. 2ನೇ ಇನಾಂ ರೂ. 2000.
ಜುಮ್ಲಾ ಇನಾಂಗಳು 1000. ಇನಾಂಗಳ ಜುಮ್ಲಾ ಮೌಲ್ಯ ರೂ. 20,125.

— **ಟಿಕೇಟು 1ರ ನಾಲ್ಕಾಣೆ ಮಾತ್ರ** —

20ಟಿಕೇಟುಗಳಿರುವ 1 ಪುಸ್ತಕದ ಬೆಲೆ ರೂ. 4—0—0, 2 ಪುಸ್ತಕಗಳ ಬೆಲೆ ರೂ. 7-8-0.
ಸ್ಪೆಶಲ್ ಬಹುಮಾನಗಳೂ ಇವೆ.

ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ:—
ಮೆನೇಜರ್, ಗ್ರ್ಯಾಂಡ್ ವಿದ್ಯಾದಾಯಿನೀ ಸೋಡ್ತಿ, ಸುರತ್ಕಲ್, (ದ. ಕ.)

6, 23—10

ಬಾಲಸಾಹಿತ್ಯ ಮಂಡಲ ಲಿಮಿಟೆಡ್,

ಕೊಡಿಯಾಲಬೈಲು, ಮಂಗಳೂರು.

ಈ ವಾರದಲ್ಲಿ ಬಂದ ಹೊಸ ಪುಸ್ತಕಗಳು—ಕೊಲಿನ್ಸ್ ಕಂಪೆನಿಯವರಿಂದ ಪ್ರಕಟವಾದ ಶಾಲಾ ಇನಾಮಿನ ಪುಸ್ತಕಗಳು—(ಬೆಲೆ 3 ಆಣೆಗಳಿಂದ ಮೇಲ್ಪಟ್ಟು)—ಚಿಕ್ಕ ಮಕ್ಕಳಿಗೆ ಆನಂದ ಕೊಡುವ ಮನೋರಂಜಕವಾದ ಬಗೆಬಗೆಯ ಸಚಿತ್ರ ಪುಸ್ತಕಗಳು.

ಜವಾಹೀರಲಾಲ ನೆಹರುರವರ ಈ ಕೆಳಗಿನ ಪುಸ್ತಕಗಳ ಕೆಲವೇ ಪ್ರತಿಗಳು ಉಳಿದಿವೆ:—

1. ಜವಾಹೀರಲಾಲರ ಜನ್ಮಕಥೆ 7—0—0
2. ಜವಾಹೀರಲಾಲರ ಇಂಡಿಯಾವೂ ಪ್ರಪಂಚವೂ 3-12—0
3. ಜವಾಹೀರಲಾಲರು ಮಗಳಿಗೆ ಬರೆದ ಲೇಖನಗಳು 1—8—0

ಲಿಯೊ ಟೊಲ್‌ಸ್ಟೊಯಿಯವರ—ಗ್ರಂಥಗಳು.

ಸುಪ್ರೀಮ್ ಡಿಕ್ಶನರಿ—(ಸಚಿತ್ರವಾದ ಮತ್ತು ಅತೀ ಆಗ್ಗವಾದ ಅತ್ಯುತ್ತಮ ಪ್ರತಿ)—1200 ಪುಟಗಳುಳ್ಳದ್ದು 2-10—0
ಇಂಗ್ಲಿಷ ಭಾಷೆಯ ಪ್ರಯೋಗದ ಮೂಲಸೂತ್ರಗಳು 1—4—0

1. **ಕನ್ನಡ ಸಾಹಿತ್ಯ.** ವಿದ್ವಾನ, ಪ್ರಿಲಿಮಿನೆರಿ ಮತ್ತು ಫೈನಲ್ ಪರೀಕ್ಷೆಗೆ ಅಗತ್ಯವಾದ ಪಠ್ಯಪುಸ್ತಕಗಳು. ಅಷ್ಟೇ ಅಲ್ಲ—ನಿಖಿಲ ಕರ್ನಾಟಕದ ವಿವಿಧ ವಿಚಾರಗಳುಳ್ಳ ಪುಸ್ತಕಗಳು.
2. **ಸ್ಟೇಶನೆರಿ.** ಬ್ಲೆಕಬರ್ಡ್ ಫೌಂಟನ್ ಪೆನ್ನುಗಳು (ಬಗೆಬಗೆ ಬಣ್ಣದವು), ಎವರ್‌ಶಾರ್ಪ್ ಫೌಂಟನ್ ಪೆನ್ನುಗಳು, ಪಾರ್ಕರ್ ಪಾರ್ಕೆಟ್ ಫೌಂಟನ್ ಪೆನ್ನುಗಳು, ವಾರ್ರಿಸ್ ಫೌಂಟನ್ ಪೆನ್ನುಗಳು (ಇತ್ತೀಚೆಗೆ ಬಂದವುಗಳು) ಬೆಲೆ 2—8—0.

ಅತ್ಯುತ್ತಮ ಮತ್ತು ಪ್ರಯೋಜನಕರವಾದ ಲೇಖನಸಾಮಗ್ರಿ ಮತ್ತು ನ್ಯೂ ಇಯರ್ ಕ್ರಿಸ್ತಮಸ್ ಕಾರ್ಡುಗಳು ಮತ್ತು ಹೊಸ ವರ್ಷದ ಡೈರಿಗಳು ಬರುವ ವಾರದಲ್ಲಿ ಸಿಗುವವು.

ಕೈಗಾರಿಕೆಯ ಮರ್ಮ ಶಾಸ್ತ್ರ

ಪಪ್ಪರಮೆಂಟು, ಪನ್ನೀರು, ಕೂದಲು ಬೆಳೆಸುವ ಕೈಲಗಳು, ಸುವಾಸನೆ ಪವುಡರ್‌ಗಳು, ಸುವಾಸನೆ ಸಾಬೂನುಗಳು, ಪರಬತ್‌ಗಳು, ಬೆಂಕಿಕಡ್ಡಿ, ಊದಬತ್ತಿ, ಕರ್ಪೂರ, ಸಾಂಬ್ರಾಣಿ, ಇಂಕು, ಬಿಸ್ಕಟ್, ಔಷಧಗಳು, ಫೋಟೋ ತೆಗೆಯುವ ವಿಧ, ಮುಂತಾದ ೩೦ ವಿಧವಾದ ಕೈಕಸಬುಗಳನ್ನು ಸ್ಪಷ್ಟವಾಗಿ ಕನ್ನಡದಲ್ಲಿ ವಿವರಿಸಿ ಬರೆದಿದೆ. ೩೪೦ ಪುಟಗಳುಳ್ಳ ದೊಡ್ಡ ಪುಸ್ತಕ ಒಂದಕ್ಕೆ ಬೆಲೆ ೧-೦-೦ ಮಾತ್ರ. ಟಿ. ಖ. ೦-೭-೦ ಬೇರೆ. ಮುಂಗಡ ಹಣವಾಗಲೀ ಸ್ಟ್ಯಾಂಪಾಗಲೀ ಕಳಿಸಿದರೆ ಟಪಾಲು ಚಾರ್ಜು ಇನಾಂ.

ಪ್ರಕಾಶಂ ಬುಕ್ ಡಿಪೊ,
೨೭ನೇ ಬೀಟ್, ಸಾವಕಾರಿ ಪೇಟೆ, ಮದರಾಸು.
4, 20-11.

NOTICE OF SALE.

A double-storeyed house and garden 1 acre 5 cents in extent situated at Boloor opposite the Urva Church belonging to the late Father A. J. D'Souza is for sale, whole or in lots. Intending purchasers may communicate for particulars to—

Mangalore, 5—11—'36.

P. U. D'Souza,
Upper Bendur,
MANGALORE

6, 6—11.

THE
Guardian of India Insurance Company, Ltd.,

Head Office:=MADRAS. **Branch:=MANGALORE.**

Capital— Indian. Management—Entirely Indian & Efficient.

Low Premiums.

Conditions Liberal and Equitable.

Schemes— Most novel, suited to all sorts and conditions and attractive.

Assured Security.

LIFE IS UNCERTAIN, SAVINGS ARE UNCERTAIN.
INSURANCE IS THE ONLY REMEDY FOR THIS UNCERTAINTY.

Let the Guardian Guard your future.

Insure your life with this popular and Progressive and Economical Indian Life Office—Do not delay.

Applications are invited from respectable gentlemen and ladies to represent the company in S. Kanara, N. Kanara and Coorg on commission or salary or both.

NOTICE:—All the policy holders & agents are informed that all future dealings must be made with The Branch Secretary, The Guardian of India Insurance Co., Ltd., Mangalore Branch.

For full particulars apply to:—

E. A. Pais, B. Sc.,
BRANCH SECRETARY,
THE GUARDIAN OF INDIA INSURANCE CO., LIMITED,
MANGALORE BRANCH.

ಕರ್ನಾಟಕ

ಉರಿಗಂ ಚಿನ್ನದ ಗಣಿಗಳಲ್ಲಿ ಒಂದು ಬಂಡೆ ಯೊಡೆದು ೭ ಮಂದಿ ಕೂಲಿಗಳು ಮೃತರಾದರು.

ಹರಪನ ಹಳ್ಳಿಯಲ್ಲಿ ಒಬ್ಬ ಬ್ರಾಹ್ಮಣನಿಗೆ ಸ್ವಪ್ನ ವಾದಂತೆ, ಅತನು ಮರುದಿನ ಅಲ್ಲಿನ ಕೋಟೆಯ ಬಳಿಯಲ್ಲಿ ಅಗೆಯುತ್ತಿದ್ದಾಗ, ಹನುಮಂತನ ಒಂದು ಸುಂದರ ವಿಗ್ರಹವು ದೊರಕಿದೆ. ಇದನ್ನು ನೋಡಲು ನಿತ್ಯವೂ ನೂರಾರು ಮಂದಿ ಹೋಗುತ್ತಿದ್ದಾರೆ.

ಶ್ರೀ. ಏ. ಆರ್. ನಾಗೇಶ್ವರ ಅಯ್ಯರವರು, ಬೆಂಗಳೂರಿನ ಹ್ಯಾಕೋರ್ಟ್ ಬೆಂಚಿನಲ್ಲಿ ತಮ್ಮ ಜಡ್ಜೀ ಪದವಿಯ ಸ್ಥಾನವನ್ನು ಅಲಂಕರಿಸಿ, ಚೀಫ್ ಜಸ್ಟೀಸರಿಂದಲೂ, ವಕೀಲಮಂಡಲಿಯಿಂದಲೂ ಅಭಿನಂದಿಸಲ್ಪಟ್ಟರು.

ಮೈಸೂರು ಸಿಟಿ ಮುನಿಸಿಪಲ್ ಕೌನ್ಸಿಲಿನ ಅಜೊಂದು ನಿರ್ಧಾರದ ಮೇರೆಗೆ, ಆ ಕೌನ್ಸಿಲಿನ ವೈಸ್ ಪ್ರೆಸಿಡೆಂಟರಾದ ಎಂ. ಮಹಮ್ಮದ್ ಸೇಟರವರನ್ನು, ಸರಕಾರವು, ಆ ಉದ್ಯೋಗದಿಂದ ನಿವೃತ್ತಿ ಪಡಿಸಿದೆ. ಸೇಟ್‌ರವರು ತಮ್ಮ ಕರ್ತವ್ಯಭಾಗಗಳ ಕುರಿತು ಆಶ್ರದ್ಧೆ ತೋರಿದರೆಂಬುದೇ ಇಪ್ಪಕ್ಕೆಲ್ಲ ಕಾರಣ.

ಮೈಸೂರು ವಿಶ್ವವಿದ್ಯಾಲಯದ ವೈಸ್ ಛಾನ್ಸ ಲರ್ ಡಾ॥ ಇ. ಪಿ. ಮೆಟ್ಕಾಫ್‌ರವರು, ಮೈಸೂರು ಮಹಾರಾಜಾ ಕಾಲೇಜ್ ಹೊಸ್ಟೆಲಿನಲ್ಲಿ, ಆ ಕಾಲೇ ಜಿನ ಪ್ರಿನ್ಸಿಪಾಲ್ ಎಂ. ಜೆ. ಸಿ. ರೋಲೋರವರ ಹಾಗೂ ಮೈಸೂರಿನ ವಿದ್ಯಾಂಗದ ಡೈರೆಕ್ಟರ್ ಶ್ರೀ. ಎನ್. ಎಸ್. ಸುಬ್ಬರಾಯರ ಭಾವಚಿತ್ರಗಳನ್ನು ಅನಾವರಣ ಮಾಡುತ್ತ, ಅವರಿಬ್ಬರ ಶಿಕ್ಷಣಕಾರ್ಯದ ಸತ್ಫಲಗಳ ಕುರಿತು ಕೊಂಡಾಡಿದರು.

ದ. ಕನ್ನಡ

ಬ್ರಹ್ಮಾವರ:—ಇದೇ ತಿಂಗಳ ತಾ. ೨೯ನೇ ಆದಿತ್ಯವಾರ ರಾತ್ರಿ ಬ್ರಹ್ಮಾವರದಲ್ಲಿ ಇಲ್ಲಿಯ ಸುಪ್ರ ಸಿದ್ಧ ಭಾಗವತರಾದ ಶ್ರೀಯುತ ಶೇಷಗಿರಿ ಕಿಣಿಯರ ಭಾಗವತಿಕೆಯಲ್ಲಿ ಒಂದು ಯಕ್ಷಗಾನ ಸಭೆಯು ಪು. ರಾ. ರಾ. ಇವೂಂಡಿ ನಾರಾಯಣ ಶೆಟ್ಟರವರ ನೇತೃ ತ್ವದಲ್ಲಿ ಜರುಗಲಿರುವದು. ಸದರಿ ಸಮ್ಮೇಳನದಲ್ಲಿ ಪೆಂಕು ಮತ್ತು ಬಡಗು ಸೀಮೆಗಳ ಹೆಸರು ಹೊಂದಿದ ಅರ್ಥಗಾರರು ಭಾಗವಹಿಸುವರು. ಸರ್ವರಿಗೂ ಸು ಸ್ವಾಗತವಿದೆ.

ಕಾಸರಗೋಡು:—ಸ್ಥಳೀಯ ಶ್ರೀಯುತ ಉಪೇಂದ್ರ ಪ್ರಭುಗಳ ಪಾನೀಯಮಂದಿರದಲ್ಲಿ ತಾ. ೧೫ಕ್ಕೆ ನವೀನ ರೀತಿಯ ಧನಲಕ್ಷ್ಮೀ ಪೂಜೆಯೊಂದು ನಡೆಯಿತು. ಈ ಸಮಾರಂಭದ ಅಧ್ಯಕ್ಷರು ವಕೀಲ್ ಶ್ರೀ। ಎ. ವಿ. ನಾರಾಯಣ ಮೇಸನರು. ಇಲ್ಲಿಯ ಸಬ್ ಮೇಜಿಸ್ಟ್ರೇಟರಾದ ಮಾ। ಬಿ. ಗಣೇಶರವರೂ, ಡಾಕ್ಟರ್ ಕೆ. ಪಿ. ರಾಘವೇಂದ್ರ ರಾವ್, ಕೆ. ಪಿ. ಮಾಧವ ರಾವ್ ಮುಂತಾದ ಮಹನೀಯರು ಬಂದಿ ದ್ದರು. ಶ್ರೀ ಶಾರದಾ ಸಂಗೀತ ಶಾಲೆಯ ವಿದ್ಯಾರ್ಥಿ ಗಳ ಗಾಯನ, ಪ್ರೊಫೆಸರ್ ಪಿ. ರಾಮರಾಯರ ಗಾ ಯನ ಮತ್ತು ಸತಾರಾವಾದಕ ಮಾ। ರಾಮಚಂದ್ರ ಅಡಿಗರ ಫ್ಲಿಟ್ಟು, ಅಹ್ಲಾದಕರವಾಗಿದ್ದುವು. ತರುವಾ ಯ ಶ್ರೀ. ನಾರಾಯಣ ಶೆಟ್ಟರು ಗಾಯಕರನ್ನು ಸ್ತು ತಿಸಿ ಸಮಯೋಚಿತ ಭಾಷಣವಿತ್ತರು. ಅನಂತರ ಪ್ರೊಫೆಸರ್ ಪಿ. ರಾಮರಾಯರು ಇಲ್ಲಿರುವ ಎರಡು ಸಂಗೀತ ಶಾಲೆಗಳ ಏಕೀಕರಣದ ಅವಶ್ಯಕತೆಯನ್ನೂ ತನ್ನ ಅಶಯವನ್ನೂ ಸೂಚಿಸಿ ಸುರಸ ಭಾಷಣವಿತ್ತ ರು. ಅಧ್ಯಕ್ಷರ ಭಾಷಣ, ಮಂಗಲಾರತಿ, ಧನ್ಯವಾದ ಸಮರ್ಪಣೆ ಇತ್ಯಾದಿಗಳಿಂದ ಸಭಾವಿಸರ್ಜನೆಯಾ ಯಿತು.

ಇಲ್ಲಿಯ ಜೂನಿಯರ್ ಡಿಪ್ಯುಟಿ ಇನ್ಸ್‌ಪೆಕ್ಟರ ರಾಗಿದ್ದ ಶ್ರೀಯುತ ಟಿ. ಶ್ರೀಪಾದರಾಯರಿಗೆ ಮಲಬಾರಿ ಗೆ ವರ್ಗವಾಗಿ ಅವರ ಸ್ಥಾನಕ್ಕೆ ಮಂಗಳೂರಿನ ಡಿ. ಸಿ. ಯಂ. ಶಾಲೆಯ ಉಪಾಧ್ಯಾಯರಾಗಿದ್ದ ಶ್ರೀ. ಟಿ. ಕೃಷ್ಣ, ಬಿ. ಎ., ಎಲ್. ಟಿ.ಯವರು ನೇಮಕ ಹೊಂದಿರುವರು.

ಫರಂಗಿಪೇಟೆ:—ಇಲ್ಲಿಯ ಮೇರಮಜಲು (ವಾಮಂಜೂರು) ಇಗರ್ಜಿಯ ಗುರುಗಳೂ ಸೆಂಟ್ ಜೋಸೆಫ್ಸ್ ಹಾಯರ್ ಎಲಿಮೆಂಟರಿ ಶಾಲೆಯ ಮೇನೇ ಜರರೂ ಆಗಿದ್ದ ರೆವರೆಂಡ್ ಫಾದರ್ ಎವರ್. ಎಸ್. ಫರ್ನಾಂಡಿಸರವರು ತಾ. ೧೪—೧೧—೨೬ರಲ್ಲು ಸ್ವ ರ್ಗಸ್ಥರಾದರು. ಇವರು ಕಳೆದ ೨೩ ವರ್ಷಗಳಿಂದ ಶಾಲೆಯ ಮೆನೇಜರರಾಗಿದ್ದು ವಿದ್ಯಾಭ್ಯಾಸದ ಕಡೆಗೆ ಬಹಳ ಶ್ರಮಪಡುತ್ತಿದ್ದರು. ಇವರ ಶವಸಂಸ್ಕಾ ರವು ಆದಿತ್ಯವಾರ ದಿನ ಬಹಳ ವಿಶೇಷ ಸಂಭ್ರಮ ದಿಂದ ಜರಗಿತು. ಇವರ ಆತ್ಮಕ್ಕೆ ಶಾಂತಿ ಉಂಟಾ ಗಲಿ!

ಮೂಡಬಿದ್ರಿ:—ಇಲ್ಲಿಯ ಜೈನ ಗೃಹಸ್ಥ ರಲ್ಲಿ ಪ್ರಮುಖರೂ, ದಿಗಂಬರ ಜೈನ ಸಂಸ್ಕೃತ ಪಾಠ ಶಾಲೆ, ಜೈನ ಹಾಯರ ಎಲಿಮೆಂಟರಿ ಶಾಲೆ, ಜೈನ ವಿದ್ಯಾವರ್ಧಕ ಸಂಘ, ಇವುಗಳ ಸಂಸ್ಥಾಪಕರಲ್ಲೊ ಬ್ಬರೂ, ಮತ್ತು ಹಲವು ವರುಷಗಳಿಂದ ಈ ಮೇಲಿನ ಸಂಸ್ಥೆಗಳ ಮೆನೇಜರರೂ ಆಗಿದ್ದ ಮ. ರಾ. ಪಟ್ಟ ಶೆಟ್ರು ಪದ್ಮನಾಭ ಶೆಟ್ಟರು ತಾ. ೧೪—೧೧—೨೬ನೇ ಶನಿವಾರ ರಾತ್ರೆ ೧೨ ಘಂಟೆಗೆ ತಮ್ಮ ೬೫ನೇ ವಯಸ್ಸಿ ನಲ್ಲಿ ಸ್ವರ್ಗಸ್ಥರಾದರು. ಇವರ ನಿಧನದಿಂದ ಇಡೀ ಜೈನ ಸಮಾಜಕ್ಕೆ ಬಂದು ಮಹದ್ ವ್ಯಕ್ತಿಯ ಅಪಾರ ನಷ್ಟವೇ ಸಂಭವಿಸಿತು. ಇವರ ಆತ್ಮನಿಗೆ ಪರಲೋಕ ದಲ್ಲಿ ಸುಖಶಾಂತಿಯನ್ನೂ ಇವರ ಬಂಧುಗಳಿಗೆ ವಿ ಯೋಗದುಃಖಶಾಂತಿಯನ್ನೂ ಬಯಸುವೆವು. ತಾ. ೧೬—೧೧—೨೬ಕ್ಕೆ ಮಹನೀಯರ ಸ್ಮರಣಾರ್ಥವಾಗಿ ಜೈನಸಂಸ್ಥೆಗಳು ಮುಚ್ಚಲ್ಪಟ್ಟಿದ್ದುವು.

ಇಲ್ಲಿಯ ಉಪಾಧ್ಯಾಯರ ಸಂಘದ ಖನೇ ಸಾ ಮಾನ್ಯ ಸಭೆಯು ಇದೇ ಕಳೆದ ನವಂಬರ ತಾರೀಕು ೬ನೇ ಶನಿವಾರ ಬೋರ್ಡ ಹುಡುಗರ ಶಾಲೆಯಲ್ಲಿ ಕಾರ್ಕಳ ರೇಂಜ ಡಿಪ್ಟಿ ಇನ್ಸ್‌ಪೆಕ್ಟರ ಮ. ರಾ. ಬಿ. ವೆಂಕಟರಾಯ ಮಲ್ಯರ ಅಧ್ಯಕ್ಷತೆಯಲ್ಲಿ ಸಾಂಗ ವಾಗಿ ಜರುಗಿತು. ಬರುವ ಸಭೆಯು ದಶಂಬರ ತಾ. ೫ಕ್ಕೆ ಬೋರ್ಡ ಹುಡುಗರ ಶಾಲೆಯಲ್ಲಿ ಜರುಗಿಸಲ್ಪ ಡುವುದು.

ಉಡುಪಿ:—ಮಂಗಳೂರಿನ ಸೆಂಟ್ ಎಗ್ನೆ ಸ್ ಕಾಲೇಜಿನ ವಿದ್ಯಾರ್ಥಿನಿಯರು ತಮ್ಮ ಅಧ್ಯಾಪಕ ಯರೊಡನೆ ಇಲ್ಲಿನ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟ್ ನ್ನು ಸಂದರ್ಶಿಸಿದರು. ಡಿ. ಮುನ್ಸಿಫರಾದ ಮಿ। ಸಿ. ಎಲ್. ಕುಲಾಸೋ, ಬಿ. ಎ., ಎಲ್. ಎಲ್.ರವರು ಅವರಿಗೆ ಕೋರ್ಟ್ ವ್ಯವಹಾರದ ಪರಿಚಯ ಮಾಡಿಸಿ ಕೊಟ್ಟರು.

ಕೊಂಗ್ರೆಸಿನ ಅಧ್ಯಕ್ಷ ಶ್ರೀ. ಪಂಡಿತ ಜವಾಹರ ಲಾಲರ ಆದೇಶದಂತೆ ತಾ. ೧೧ನೇ ದಿನ ಯುದ್ಧ ನಿಷೇಧಕ ದಿನವಾಗಿ ಆಚರಿಸುವಗೋಸ್ಕರ ರಥಬೀದಿ ಯಲ್ಲಿ ಸಾಯಂ. ೫-೩೦ಕ್ಕೆ ಸಭೆ ಸೇರಿತು. ಶ್ರೀ. ಯು. ನಾಗಪ್ಪ ಕಮ್ತಿಯವರು ಅಧ್ಯಕ್ಷಸ್ಥಾನವನ್ನು ವಹಿಸಿದ ಮೇಲೆ ಶ್ರೀ। ಎವರ್. ವಿಟ್ಟಲ ಹೆಗ್ಗಡೆಯ ವರು ಸಭೆಯ ಉದ್ದೇಶವನ್ನು ವಿವರಿಸಿದರು. ಅಧ್ಯ ಕ್ಷರ ಚಿಕ್ಕ ಭಾಷಣದೊಡನೆ ಸಭೆಯು ಮುಕ್ತಾಯ ವಾಯಿತು.

ಆವರ್ಣರಿಗೆ ಮಂದಿರಪ್ರವೇಶಾಧಿಕಾರ ಕೊಟ್ಟು ದಕ್ಕಾಗಿ ತಿರುವಾಂಕೂರಿನ ಮಹಾರಾಜರನ್ನು ಅಭಿನಂದಿಸುವರೆ ಒಂದು ಸಭೆಯು ಶ್ರೀ. ಎವರ್. ವಿಟ್ಟಲ ಕಾಮತ್, ಬಿ. ಎ., ಬಿ. ಎಲ್. ಇವರ ಅಧ್ಯಕ್ಷತೆಯಲ್ಲಿ ತಾ. ೧೭ನೇ ಸಾಯಂಕಾಲ ೫-೩೦ಕ್ಕೆ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಜರು ಗಿತು. ಶ್ರೀ.ಗಳಾದ ಕಾಂತಪ್ಪ ಸೆಟ್ಟರ, ಫಣಿಯಾಡಿ ಯವರ ಭಾಷಣಗಳಾದ ತರುವಾಯ ಅಧ್ಯಕ್ಷರು ಸಭೆಯ ಉದ್ದೇಶ ಹಾಗೂ ಹರಿಜನರಿಗೆ ಸರ್ವ ಸ್ವಾತಂತ್ರ್ಯಗಳನ್ನು ಕೊಡುವ ಅವಶ್ಯಕತೆಯನ್ನು ವಿವರಿಸಿ ನಮ್ಮ ಜಿಲ್ಲೆಯಲ್ಲಿಯೂ ದೇವಸ್ಥಾನಗಳ ತಸದೀಕನ್ನು ಕೊಡುವ ಶರ್ತದ ಮೇಲೆ ಹರಿಜನರಿಗೆ ಪ್ರವೇಶ ಸಿಕ್ಕುವಂತೆ ಯತ್ನಿಸಲು ಒಳ್ಳೇ ಅವಸರ ವೆಂದೂ ಹೇಳಿ, ತಿರುವಾಂಕೂರಿನ ಮಹಾರಾಜರನ್ನು ಅಭಿನಂದಿಸುವ ನಿರ್ಣಯವನ್ನು ಓದಿ ಹೇಳಿದರು. ಸರ್ವಾನುಮತದಿಂದ ಮಂಜೂರಾದ ಮೇಲೆ ಅದನ್ನು ಮಹಾರಾಜರಿಗೆ ಕಳುಹುವುದೆಂದು ನಿಶ್ಚಯವಾಯಿತು.

ಐದಾರು ದಿನಗಳಿಂದ ಪ್ರತಿನಿತ್ಯವೂ ಮಳೆ ಸುರಿಯುತ್ತಿದೆ. ಆಕಾಲಿಕವಾದ ಈ ಹೈಪ್ಟಿಯಿಂದ ಯಾರಿಗೂ ಫಲವಿಲ್ಲವಲ್ಲದೆ ಧಾನ್ಯಾದಿಗಳಿಗೆ ಹಾನಿ ಯೇ ಉಂಟಾಗುತ್ತಿದೆ.

ನ್ಯೂ ಮೋಡಲ್ ಗಡಿಯಾರ.

3 ವರುಷಗಳ ಗ್ಯಾರಂಟಿ.

(ದಿವಸಕ್ಕೆ ಒಂದಾವರ್ತಿ ಬೀಗ ಕೊಡುವುದು.)

ಈ ಗಡಿಯಾರಗಳು ಹೊ ಸದಾಗಿ ತಯಾರು ಮಾಡಿ ತರಿಸಿದ್ದೇವೆ. ಸೀಮೆಯ ನಿಕ್ಕಲ್ ಲೋಹದ ಸ್ಟಾಂಡಿ ನಲ್ಲಿ ತಯಾರಿಸಿದ್ದೇವೆ. ಈ ಗಡಿಯಾರವು ಖರಾರು ಗಂ ಟೆಯನ್ನು ತೋರಿಸುವುದು. ಖಾತ್ರಿಯಾದ 3 ವರುಷ ಗಳ ಗ್ಯಾರಂಟಿ ಕೊಡುವೆವು. ಈ ಗಡಿಯಾರಗಳನ್ನು ಗು ಡಿ, ಸ್ಕೂಲು, ರೀಡಿಂಗ್‌ರೂ ಮ್ ಹಾಲುಗಳಲ್ಲಿ ಮುಂ ತಾದ ಜಾಗದಲ್ಲಿ ಗೋಡೆಗೆ ತಗಲಿಸಿದರೆ ಅಂದವಾಗಿರು ವುದು. ಕ್ರಯ ಗಡಿಯಾರ 1ಕ್ಕೆ ರೂ. 3. ಟಪಾಲು ಖರ್ಚು ಪ್ರತ್ಯೇಕ.

ವಿ. ಎಸ್. ವಾಚ್ ಕಂಪೆನಿ,
8, 3-11. ಇರುಳಪ್ಪನ ಬೀದಿ, ಮದ್ರಾಸು.

ESTD: 1906.

CANARA BANK
LIMITED.

HEAD OFFICE: MANGALORE.

Subscribed Capital	....	6,00,000.
Paid up Capital	....	3,33,000.
Reserves	....	4,50,000.
Deposits	....	61,92,000.
Working Capital	....	73,40,000.

OFFICES

Bombay-Fort, Bombay-Mandvi, Hubli, Calicut Cochin, Ernakulam, Alleppey, Bangalore, Chikmagalur, Mangalore-Bunder, Mangalore-City, Kasaragod, Puttur, Udipi, Karkala, Coondapoor, Ganguli, Bantval, Davangere & Moolky.

ALL KINDS OF BANKING BUSINESS UNDERTAKEN.

ಕಂಠೀರವ

(ವಸಂತತಿಲಕವೃತ್ತಮ್)

ನಿಂದಂತು ನೀತಿನಿಪುಣಾ ಯದಿ ವಾ ಸ್ತುವಂತು ।
ಲಕ್ಷ್ಮೀಃಸಮಾವಿಶತು ಗಚ್ಛತು ವಾ ಯಥೇಷ್ಟಮ್ ॥
ಅದ್ಯೈವ ವಾ ಮರಣಮಸ್ತು ಯುಗಾಂತರೇ ವಾ ।
ನ್ಯಾಯ್ಯಾತ್ಪಥಃ ಪ್ರವಿಚಲಂತಿ ಪದಂ ನ ಧೀರಾಃ ॥

[ಭರ್ತೃಹರಿ.

(ಚೌಪದಿ)

ನಿಂದಿಸಲಿ ವಂದಿಸಲಿ, ನಂದ ಧೀರರು ತಾ- ।
ವೆಂದಿರೆಯು ಹೊಂದಿರಲಿ ನಂದಿರಲಿ, ಮತ್ತಾ ॥
ಇಂದಿಗೊ ಯುಗಾಂತರಕೊ ಬಂದಿರಲಿ ಮರಣಂ, ।
ಹಿಂದಿಡರು ನ್ಯಾಯಪಥದಿಂದೊಂದು ಚರಣಂ! ॥

[M. N.

XVIII] ಮಂಗಳೂರು, ತಾರೀಕು ೨೦—೧೧—೧೯೫೬ [೬೬
೧೮೫೮ ಧಾತು ಸಂವತ್ಸರದ ಕಾರ್ತಿಕ ಶು। ೬ ಶುಕ್ರವಾರ

ಕಾಂಗ್ರೆಸ್ ಪಕ್ಷವೂ, ಅದರ ಉಮೇದುವಾರರೂ.

ಮುಂದಿನ ಚುನಾವಣೆಗಳಲ್ಲಿ ಯೋಗ್ಯರಾದ ಉಮೇದುವಾರರನ್ನು ಕಾಂಗ್ರೆಸಿನ ಪರವಾಗಿ ಆರಿಸುವುದರ ಕುರಿತು, ಪಂಡಿತ ಜವ್ಹರಲಾಲರೂ, ಇತರ ಕಾಂಗ್ರೆಸ್ ಮುಖಂಡರೂ ನರ್ಧಾದಿಂದ ಒಂದು ಪ್ರಕಟಣೆಯನ್ನು ಹೊರಡಿಸಿದ್ದಾರೆ. ಅವರದರಲ್ಲಿ ಹೇಳುವುದಿಷ್ಟು:—ಯಾರ ಹಿಂದಿನ ಅಥವಾ ಇಂದಿನ ಚಟುವಟಿಕೆಗಳು ಕಾಂಗ್ರೆಸಿಗೆ ವಿರೋಧವಾಗಿವೆಯೋ ಅಂತಹವರನ್ನು ಕಾಂಗ್ರೆಸ್ ಕಮಿಟಿಗಳಾರಿಸಬಾರದು; ಶಿಫಾರಸು ಮಾಡಬಾರದು; ಇದರಲ್ಲಿ ಉಮೇದುವಾರರ ಗುಣನಡತೆಯೇ ಮುಖ್ಯವಲ್ಲದೆ, ಸಭೆಗಳಲ್ಲಿ ಕೆಲಸಕ್ಕೆ ಬಾರದ ಬಹುಮತವಿರುವ ಹಾಗೆ, ಹೆಚ್ಚಿನ ಸ್ಥಾನಗಳನ್ನು ಪಡೆಯುವುದರಲ್ಲಿ ಪ್ರಯೋಜನವಿಲ್ಲ. ಕಾಂಗ್ರೆಸ್ ಸಭಾಸದಸ್ಯರ ಧೋರಣೆಯು ಹೊಸ ರಾಜ್ಯರಚನೆಯೊಡನೆ ಸಹಕರಿಸುವದಾಗಿರದೆ, ಅದನ್ನು ವಿರೋಧಿಸುವುದೂ, ಕೊನೆಗೊಳಿಸುವುದೂ ಆಗಿರಬೇಕು. ಹಾಗೆ ಮಾಡುವೆವೆಂದು ಪ್ರತಿಜ್ಞೆ ಮಾಡುವವರು ಮಾತ್ರವೇ ನಮಗೆ ಬೇಕು. ಅಷ್ಟೇ ಅಲ್ಲ; ಇದರಲ್ಲಿನ್ನು ಉಮೇದುವಾರರನ್ನಾರಿಸುವಾಗ, ಮತದಾರರ ಸ್ವತಂತ್ರಾಭಿಪ್ರಾಯಕ್ಕೆ ಮನ್ನಣೆ ದೊರೆಯುವ ಹಾಗೆ, ಸ್ಥಳೀಯ ಅಭಿಪ್ರಾಯಕ್ಕೂ ಪ್ರಾಧಾನ್ಯತೆ ಕೊಡಬೇಕು.

ಕಾಂಗ್ರೆಸ್ ಮುಖಂಡರ ಈ ಪ್ರಕಟಣೆಯು ಕಾಂಗ್ರೆಸಿನ ಧ್ಯೇಯಗಳಿಗೆ ಅನುಸಾರವಾಗಿಯೇ ಇದೆ ಎಂಬುದು ನಿರ್ವಿವಾದ. ಆದರೂ ಸಂದಿಗ್ಧವಾದ ಅಂಶಗಳು ಇನ್ನೂ ಕೆಲವಿವೆ ಎಂಬುದನ್ನು ನಾವಿಲ್ಲಿ ಮರೆಯಬಾರದು. ಯಾವ ಪಂಗಡವಾದರೂ, ಅದರ ಶಿಸ್ತಿಗೆ ವಿರೋಧವಾಗಿ ನಡೆದವರನ್ನು ಅಥವಾ ನಡೆಯುವವರನ್ನು ಆರಿಸದಿರುವುದು ಸಹಜವಾಗಿರುವಂತೆ, ಕಾಂಗ್ರೆಸೂ ಅಂತಹವರನ್ನು ಕೈಬಿಟ್ಟಿರುವುದು ನ್ಯಾಯವೇ ಆಗಿರುವುದಾದರೂ, ಉಮೇದುವಾರರ ಇತರ 'ಗುಣನಡತೆ'ಯು ಹೇಗಿರಬೇಕೆಂಬುದು ನಮಗಿನ್ನೂ ಸ್ಪಷ್ಟವಾಗಿಲ್ಲ. ಅವರು ಕಾಂಗ್ರೆಸಿಗೆ ವಿರೋಧವಾಗಿಲ್ಲದ ಮಾತ್ರಕ್ಕೇ ಸಾಕೇ? ಈ ಪ್ರತಿಜ್ಞೆಯನ್ನು ಕೈಕೊಂಡ ಮಾತ್ರಕ್ಕೇ ಸಾಕೇ? ಒಟ್ಟಿನಲ್ಲಿ ಕಾಂಗ್ರೆಸ್ ಉಮೇದುವಾರನ ಯೋಗ್ಯತೆ ಎಂತದಾಗಿರಬೇಕು? ಭಿನ್ನಾಭಿಪ್ರಾಯವು ತಲೆದೋರಿರುವುದೆಂದರೆ, ದೊಡ್ಡ ಚರ್ಚೆ ಎದ್ದಿರುವುದೆಂದರೆ ಇದೇ ವಿಷಯದಲ್ಲಿಯೇ ತಾನೇ?

ಕಾಂಗ್ರೆಸಿನವರಲ್ಲಿ ಎರಡು ತಂಡದವರು ಮುಖ್ಯರಾಗಿರುತ್ತಾರೆ. ಮೊದಲನೆಯವರು, ಗಾಂಧಿಶಕದಲ್ಲಿ, ಅಸಹಕಾರ ಹೂಡಿ, ಸತ್ಯಾಗ್ರಹವೇ ಮೊದಲಾದ ಕಠಿನ ಪಂಥಗಳನ್ನು ಪಾಲಿಸಿ, ಜೈಲುವಾಸವನ್ನೂ ಅನುಭವಿಸಿದ ತ್ಯಾಗವೀರರು; ದೇಶಕ್ಕಾಗಿ ಹೋರಾಡಿದವರು; ಕಷ್ಟಜೀವಿಗಳು; ಎರಡನೆಯವರು, ಬರೇ ಳ ಆಣೆ ಮೆಂಬರರಾಗಿ, ಕಾಂಗ್ರೆಸ್ ಟಿಕೆಟ್ ಪಡೆದು, ಕಾಂಗ್ರೆಸಿನ ಮೇಲಿನ ಭಕ್ತಿಯಿಂದಲೋ, ಚುನಾವಣೆಯಲ್ಲಿ ಕಾಂಗ್ರೆಸಿನ ಪರವಾದ ಉಮೇದುವಾರರಾಗಿ ಆರಿಸಲ್ಪಡಬೇಕೆಂಬ ಅಂತರಂಗದ ಉದ್ದೇಶದಿಂದಲೋ ಮುಂದೆ ಬಂದ ಸುಲಭಯತ್ನದ ಸುಖಜೀವಿಗಳು. ಇಷ್ಟೇ ಅಲ್ಲದೆ, ಅತ್ತ ಜೈಲುವಾಸದ ಪಂಥಗಳಿಗೆ ಕೈ ಇಕ್ಕದೆಯೂ, ಇತ್ತ ಚುನಾವಣೆಗಾಗಿಯೇ ಕಾಂಗ್ರೆಸಿಗೆ ಸೇರದೆಯೂ, ಕೇವಲ ಊರಿನ ಒಳ್ಳಿದಕ್ಕಾಗಿಯೇ ಕೆಲಸ ಮಾಡಿದ ಕಾಂಗ್ರೆಸ್ ಮುಂದಿಯ ಮತ್ತೊಂದು ತಂಡವನ್ನೂ ನಾವು ನೋಡಬಹುದಾಗಿದೆ.

ಈ ತಂಡಗಳಲ್ಲಿ ಯಾವುದರಿಂದ ಕಾಂಗ್ರೆಸ್ ಉಮೇದುವಾರರ ಚುನಾವಣೆಯಾಗಬೇಕು? ಮತದಾರರ ಸ್ವತಂತ್ರಾಭಿಪ್ರಾಯವು ಈ ಕುರಿತಾಗಿ ಸಂಗ್ರಹವಾಗಿದೆಯೇ? ಆಗುತ್ತಿದೆಯೇ? ಆಗಲು ಯಾವ ಏರ್ಪಾಡು ನಡೆದಿದೆ? ಭಿನ್ನಾಭಿಪ್ರಾಯಗಳಿರುವಲ್ಲಿ ಅದರ ತೀರ್ಮಾನ ಯಾವ ರೀತಿ? ಕಾಂಗ್ರೆಸ್ ಕಮಿಟಿಗಳೆಲ್ಲ ನಿರ್ದೋಷವಾಗಿವೆಯೇ? (ಸುಣ್ಣಬೆಣ್ಣೆಗಳ ಮಾತೀಗಲೇ ಕೇಳುತ್ತಿದೆಯಲ್ಲ?) ಅವು ಕಾಂಗ್ರೆಸ್ ಉಮೇದುವಾರರ ಯೋಗ್ಯತೆಯನ್ನು ನಿರ್ಧರಿಸುವ ಕ್ರಮವಾದರೂ ಯಾವುದು?

ಕಾಂಗ್ರೆಸ್ ಕಮಿಟಿಗಳ ಈ ವಿಷಯಕವಾದ ತೀರ್ಮಾನದ ಕೆಲಸವು ಅತ್ಯಂತ ಕಠಿನತರದ್ದೆಂದು ನಾವು ಒಪ್ಪುತ್ತೇವೆ. ಆದರೆ ಶ್ರೀಮಂತಗಿರಿ, ವ್ಯಾಪಕತೆ, ಹೊರಗಿನ ಅಬ್ಬರ, ಇವೇ ಅವುಗಳ ದೃಷ್ಟಿಯಲ್ಲಿರುವ ವಿಷಯಗಳಾಗಿದ್ದರೆ ಕೆಟ್ಟಿತು ಕೆಲಸ. ಬಡವನಾಗಿದ್ದರೂ, ಮೊದಲನೆಯ ಪಂಗಡದ ತ್ಯಾಗವೀರನು ಕಾಂಗ್ರೆಸ್ ಉಮೇದುವಾರನಾಗಲು ಪ್ರಥಮತಃ ಅರ್ಹನು; ಊರಿನ ಒಳ್ಳಿದಕ್ಕಾಗಿ ದುಡಿದ ಮೂರನೆಯ ತಂಡದ ಕಾಂಗ್ರೆಸ್ ಮೆಂಬರನು ಆತನಿಗೆ ಎರಡನೆಯವನು. ಇವರಿಬ್ಬರನ್ನೂ ಬಿಟ್ಟು, ನಿರ್ವಾಹವೇ ಇಲ್ಲವೆಂದಾದರೆ ಮಾತ್ರ, ಎರಡನೆಯ ಪಂಗಡದವರನ್ನಾರಿಸುವ ಸಂದರ್ಭ ಬರುತ್ತಿದೆ. ಆದರೆ ಅವನ ಚುನಾವಣೆಯು ಫಲವೇನಾದೀತೆಂದು ಹೇಳಬರುವುದಿಲ್ಲ. ಕಾರಣ—ಅವನ ದೇಶಭಕ್ತಿ, ದೇಶಸೇವೆಗೆ ಇದುವರೆಗೆ ನಿದರ್ಶನಗಳು ಸಿಕ್ಕಿಲ್ಲವಾಗಿ, ಇಂತಹ ಅನುಮಾನಗ್ರಸ್ತ ಗೃಹಸ್ಥರ ಚುನಾವಣೆ ತುಂಬ ಅಪಾಯಕರ.

ನಾವು ಇದೊಂದು ವಿಷಯದಲ್ಲಿ ಕಂಠೋಕ್ತವಾಗಿ ಸೂಚಿಸಲೆಳಸುತ್ತೇವೆ. ಅದಿಷ್ಟೇ. ನಮ್ಮ ಜಿಲ್ಲೆಯಲ್ಲಿ ಸಮರ್ಥರೂ, ಯೋಗ್ಯರೂ ಆದ ಕಾಂಗ್ರೆಸ್ ಉಮೇದುವಾರರು, ಹುಡುಕಿದರೆ, ಇಲ್ಲದೆ ಇಲ್ಲ. ಆದರೆ ಹಾಗೆ ಮಾಡದೆ, ಚತುರೋಪಾಯದ ಪ್ರಯೋಗದಿಂದ ಕಾಂಗ್ರೆಸ್ ವಕ್ಷದ ಹಳೆಯ ಸದಸ್ಯರಿಗೇ ಇನ್ನೂ ಇನ್ನೂ ಅದೇ ಸದಸ್ಯತನದ ಪಟ್ಟವನ್ನೇ ಕಟ್ಟುವ ಈ ಕಣ್ಣುಕಟ್ಟು, ಹಟಸಾಧನೆ ಸಯುಕ್ತಿಕವೂ ಅಲ್ಲ; ಸಮಂಜಸವೂ ಅಲ್ಲ. ಹಲವು ವರ್ಷಗಳ ವರೆಗೆ ಅವರಲ್ಲಿ ಜನಪ್ರತಿನಿಧಿಗಳಾಗಿದ್ದುದು ಸಾಲದೇ? ಇನ್ನೆಷ್ಟು ಕಾಲ ಅವರಲ್ಲಿ ಹೀಗೇ ಸದಸ್ಯರೇ ಆಗಿರಬೇಕು? ಅವರೇ ಆಗಿರಬೇಕೆಂದರೆ, ಕಾಂಗ್ರೆಸಿನ ಇತರ ಯೋಗ್ಯರಿಗೆ 'ಚಾನ್ಸ್' ಬೇಡವೇ? ಅದೆಂದು?

ಕಾಂಗ್ರೆಸಿನ ಧ್ಯೇಯಗಳನ್ನು ಸಾರಿ, ಅದರ ನಿಜವಾದ ಪ್ರಯೋಜನಗಳನ್ನು ಪ್ರಕಟಿಸಿ, ಮತದಾರರ ಮನವೊಲಿಸಿಕೊಳ್ಳುವ ಯತ್ನಗಳನ್ನು ನಡೆಸುವುದು ಸರಿಯೇ. ಆದರೆ ಇತರ ಪಂಗಡಗಳ ಉಮೇದುವಾರರನ್ನು ವ್ಯಕ್ತಿಶಃ ದೂರಿ, ಅಲ್ಲಸಲ್ಲದ ಆರೋಪಣೆ ಮಾಡಿ, ಊರಲ್ಲಿ ಸಾಧ್ಯವಿರುವಷ್ಟು ಕಲಹಕೀಟಲೆಗಳನ್ನು ಹಬ್ಬಿಸುವ ಮೂಲಕ, ಕಾಂಗ್ರೆಸಿನಂತಹ ಪವಿತ್ರ ಸಂಸ್ಥೆಗೆ, ಅಡವ ಉಮೇದುವಾರರೋ, ಅದರ ಹಿತೈಷಿಗಳೆಂಬುವರೋ ಉದ್ದೇಶಪೂರ್ವಕವಾಗಿ ಹಚ್ಚುವ ಈ ಕಳಂಕವು, ಎಂದೂ ತೊಳೆಯಲಾಗದ ಕೆಸರೇ, ಕಾಂಗ್ರೆಸಿನ ಹೆಸರು ಕೆಡಿಸುವ ಸ್ವಾರ್ಥಸಾಧನೆಯೇ ಎನ್ನಬೇಕು.

ಕಾಂಗ್ರೆಸಿನ ಕಡೆಯಿಂದ ನಮ್ಮ ಜಿಲ್ಲೆಯ ಕಾಂಗ್ರೆಸ್ ಉಮೇದುವಾರರ ನೇಮಕಗಳಾಗದಿದ್ದರೂ, ಆಗಲೇ ಉಮೇದುವಾರರು ತಮ್ಮನ್ನು ತಾವೇ ನೇಮಕ ಮಾಡಿಕೊಂಡಂತೆ, ಮುಂದೆ ಬಂದಿರುವುದೊಂದು ವಿಶೇಷವೇ. ಇದು ಕಾಂಗ್ರೆಸಿನ ಪ್ರತಿಷ್ಠೆಯನ್ನು ಎಷ್ಟು ಮಟ್ಟಿಗೆ ಹೆಚ್ಚಿಸುವುದು? ಅಥವಾ ಕಾಂಗ್ರೆಸಿನ ಶಿಕ್ಷಾಕ್ರಮಕ್ಕೆ ಇದು ಸರಿಯೇ?

ಮತದಾನದ ಸ್ವಾತಂತ್ರ್ಯವನ್ನು ನರ್ಧಾದ ಈ ಪ್ರಕಟಣೆಯೂ ಸಮರ್ಥಿಸಿರುವಾಗ, ನಮ್ಮ ಜಿಲ್ಲೆಯ ವಿಪರೀತ ಕಾಂಗ್ರೆಸ್ ಭಕ್ತಿಯ ಕೆಲ ಸಮುಜ್ವಲ ಪತ್ರಿಕೆಗಳು ಮತದಾರರಿಗೆ ಹೇಳಿ ಬರೆಯಿಸುವ ಆ ಹಳೇ ಸಂಪ್ರದಾಯದ ಡಿಕ್ಟೇಶನಿನ ಒಕ್ಕಣೆಯನ್ನು ಇಷ್ಟಕ್ಕೇ ಮುಗಿಸುವುದು ಮೇಲು. ಕಾಂಗ್ರೆಸಿನವರು ಆರಿಸಿದವರ್ಯಾರಾದರೂ ಸರಿ, ಅವರನ್ನೇ ಆರಿಸಬೇಕೆಂದು ಮತದಾರರನ್ನು ಬಲಾತ್ಕರಿಸಿ, ತನ್ಮೂಲಕ 'ದಾಸ್ಯಭಾವದ ಮನೋವೃತ್ತಿ' (Slave Mentality) ಯನ್ನು, ಪತ್ರಿಕೆಗಳು, ಡಿಕ್ಟೇಟರುಗಳಿಗೂ ಹೆಚ್ಚಾಗಿ, ಉಪದೇಶಿಸಲು ಹೊರಡುವುದಿದು. ಮತದಾರಮಂಡಲಿಗೊಂದು ಬಹುಮಾನವೇ—ಏನು?

ಮಂಗಳೂರು

ಮೈಸೂರು ಪ್ರಾಂತದ 'ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಲಿ'ಯವರು, ಮದ್ರಾಸ್, ಸೇಲಮ್ ಕೊಯಮುತ್ತೂರು ಮೊದಲಾದ ದೊಡ್ಡ, ಚಿಕ್ಕ ನಗರಗಳಲ್ಲಿ ನೂರಾರು ನಾಟಕವಾಡಿ, ಅಲ್ಲಿ ತುಂಬ ಯಶಸ್ಸನ್ನು ಸಂಪಾದಿಸಿ ಈಗ ನಮ್ಮ ಮಂಗಳೂರಿಗೂ ಬಂದಿರುವರು. ಈ ಸಂಸ್ಥೆಯಲ್ಲಿ ಗ್ರಾಮಾಫೋನು ಸಂಗೀತ ವಿಖ್ಯಾತರೂ, ಸಿನೆಮಾ ಅಭಿನಯ ಕಾರರೂ ಆಗಿರುವ ಶ್ರೀಗಳಾದ ನಾಗೇಂದ್ರ ರಾವ್, ಸುಬ್ಬಯ್ಯ ನಾಯಿಡು ಮೊದಲಾದ ಕರ್ನಾಟಕದ ಪ್ರಸಿದ್ಧ ನಟಶ್ರೇಷ್ಠರಿರುವರು. ಇವರು ಇದೇ ಬರುವ ಗುರುವಾರ ತಮ್ಮ ಪ್ರಥಮ ನಾಟಕವಾದ 'ಭೂಕೈಲಾಸ'ವೆಂಬ ಅತ್ಯುತ್ಕೃಷ್ಟ ನಾಟಕವನ್ನು, ಇಲ್ಲಿನ ಲೈನ್ ವೈದ್ಯಾನಿನ ನೂತನ ನಾಟಕ ಮಂದಿರದಲ್ಲಿ ಆಡಿ ತೋರುವರು. ಮುಹಾಜನರು ಪ್ರೋತ್ಸಾಹಿಸಲಿ!

ಬರುವ ಜನವರಿ ತಾ. ೧೫ರಿಂದ ೧೬ರ ವರೆಗೆ ಜರುಗಲಿರುವ ಈ ಜಿಲ್ಲೆಯ ವಿದ್ಯಾಂಗದ ಪ್ರದರ್ಶನಕ್ಕೆ ಜಿಲ್ಲೆಯ ಎಲಿಮೆಂಟರಿ ಮತ್ತೂ ಸೆಕೆಂಡರಿ ಶಾಲೆಗಳ ಸ್ಕೂಲ್ ಶಾಖೆಯ ವಿದ್ಯಾರ್ಥಿಗಳೂ, ಉಪಾಧ್ಯಾಯರೂ ಇತರರೂ, ಶಿಕ್ಷಣ ವಿಷಯವಾದ ಸಾಹಿತ್ಯಗಳನ್ನು—ಅಂದರೆ ಚಿಕ್ಕ ಕಥೆಗಳು, ಒಗಟುಗಳು, ಗಾಥೆಗಳು, ಚಿಕ್ಕ ನಾಟಕಗಳು, ಸಂಭಾಷಣೆಗಳು, ಪುಟ್ಟ ಯಕ್ಷಗಾನ ಪ್ರಬಂಧಗಳು, ಜನಪದ ಸಾಹಿತ್ಯ, ಗ್ರಾಮ ನಕ್ಷೆ, ಸ್ಥಳಮಹಾತ್ಮ್ಯ, ನಕಾಶೆ, ಮಣ್ಣು, ಚೆಂಡು ಮರ, ಅವೆ ಮಣ್ಣು, ಗಡಿಗೆ ಕಲ್ಲು ಮೊದಲಾದುವುಗಳಿಂದ ಮಾಡಿದ ಈ ಜಿಲ್ಲೆಯ ಕೋಟೆ, ಸೇತುವೆ, ದೇವಾಲಯ ಮುಂತಾದವುಗಳ ಪ್ರತಿಬಿಂಬಗಳು, ಪುರಾತನ ನಾಣ್ಯ ಸಂಗ್ರಹ, ಪ್ರಾಣಿ-ಸಸ್ಯಾದಿಗಳ ಚಿತ್ರ,. ಅಂಗಾಂಗಗಳು ಮೊದಲಾದವುಗಳನ್ನು—ಇದೇ ಡಿಸೆಂಬರ ತಿಂಗಳ ಅಂತ್ಯದೊಳಗೆ ಮಂಗಳೂರಿನ ಗವರ್ನಮೆಂಟ್ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ಮುಖ್ಯೋಪಾಧ್ಯಾಯರ ಬಳಿಗೆ ರವಾನಿಸಬೇಕಾಗಿ ವಿನಂತಿ ಎಂದು ಆ ಪ್ರದರ್ಶನ ಸಮಿತಿಯವರ ಪ್ರಕಟಣೆ. ಇವುಗಳಲ್ಲಿ ಯೋಗ್ಯವಾದವುಗಳಿಗೆ ಬಹುಮಾನಗಳಿವೆ.

ಓಲ್ ಇಂಡಿಯಾ ಸಾರಸ್ವತ ಬ್ರಾಹ್ಮಣ ಸಭೆಯ ಜೊಯಿಂಟ್ ಸೆಕ್ರೆಟರಿಗಳಾದ ಶ್ರೀಯುತ ಏ. ಜೆ. ಜೆಟ್ಟಿಯವರು ತಾ. ೧೫ರಲ್ಲು ಇಲ್ಲಿಗೆ ಬಂದಿದ್ದು, ಸಾಹುಕಾರ ಗಣೇಶ ಶ್ರೀನಿವಾಸ ಪೈಗಳವರ ಅತಿಥಿಗಳಾಗಿರುವರು. ಇವರು ಒಂದು ಡೈರೆಕ್ಟರಿಯನ್ನು ತಯಾರಿಸಲೋಸುಗವಾಗಿ ನಮ್ಮ ಜಿಲ್ಲೆಯನ್ನು ಸಂದರ್ಶಿಸುತ್ತಿದ್ದು, ಮುಂದಕ್ಕೆ ಮಲಬಾರು, ಕೊಚ್ಚಿ, ತಿರುವಾಂಕೂರು ಪ್ರಾಂತಗಳನ್ನೂ ಸಂಚರಿಸುವರು.

ಈ ಜಿಲ್ಲೆಯ ಹರಿಜನ ವರ್ಗದಲ್ಲಿ ಮೊದಲನೆಯ ಬೀ. ಏ., ಎಲ್. ಟಿ.ಗಳಾಗಿರುವ ರಾ. ಟಿ. ಕೃಷ್ಣ ಇವರು, ಕಾಸರಗೋಡು ಫಕಾಷ ಜ್ಯೂನಿಯರ್ ಡೆಪ್ಯುಟಿ ಇನಸ್ಪೆಕ್ಟರರಾಗಿ ನೇಮಿಸಲ್ಪಟ್ಟಿರುವುದು ಅತ್ಯಂತ ಅಭಿನಂದನೀಯವಾಗಿದೆ. ಈ ಸಂಬಂಧ, ಅವರು ಮೊದಲು ಅಧ್ಯಾಪಕರಾಗಿದ್ದ ಇಳಿಯ ಡಿ. ಸಿ. ಎಂ. ಸಂಸ್ಥೆಯ ವಿದ್ಯಾರ್ಥಿಗಳೂ, ಉಪಾಧ್ಯಾಯರೂ ಕೂಡಿ, ಒಂದು ಸಂತೋಷಕೂಟವನ್ನು ಏರ್ಪಡಿಸಿ ತನ್ಮೂಲಕ ಅವರಲ್ಲಿ ತಮಗಿದ್ದ ಗೌರವಾದರಗಳನ್ನು ವ್ಯಕ್ತಪಡಿಸಿದರು.

ಯುನ್ಯಾಟಿಡ್ ಗೌಡಸಾರಸ್ವತ ಬ್ರಾಹ್ಮಣ ಪರಿಷತ್ತಿನ ಹಾಗೂ ಓಲ್ ಇಂಡಿಯಾ ಸಾರಸ್ವತ ಸಭೆಯ ಸೆಕ್ರೆಟರಿಗಳಾಗಿರುವ ಏ. ಏ. ಜೆ. ಜೆಟ್ಟಿಯವರು ಗೌಡಸಾರಸ್ವತ ಬ್ರಾಹ್ಮಣ ಸಮುದಾಯದ ಎಲ್ಲ ವರ್ಗದವರ ಡೈರೆಕ್ಟರಿಯನ್ನು ತಯಾರಿಸಲೋಸುಗವಾಗಿ ಸಂಚಾರವನ್ನು ಕೈಕೊಂಡಿರುವವರು. ಇದೇ ತಾ. ೨೧ನೇ ಶನಿವಾರ ಸಾಯಂಕಾಲ ೫-೩೦ ಘಂಟೆಗೆ ಕೆನರಾ ಹೈಸ್ಕೂಲಿನಲ್ಲಿ ಎಲ್ಲಾ ಸಾರಸ್ವತರ ಒಂದು ಸಭೆಯು ಮುಂದೆ ತಮ್ಮ ಭಾಷಣವನ್ನೀಯಲಿರುವರು.

ಬೆಳಗಾವಿಯಲ್ಲಿ ನೆರೆಯುವ ಕರ್ನಾಟಕ ಏಕೀಕರಣ ಪರಿಷತ್ತಿನ ವೇಳೆಯಲ್ಲಿಯೇ, ನಮ್ಮ ಕರ್ನಾಟಕದ ಪತ್ರ ಪತ್ರಿಕೆಗಳ ಪ್ರದರ್ಶನವನ್ನೂ ಏರ್ಪಡಿಸಲಿರುವುದರಿಂದ, ಹಾಗೆ ಆಳಿದ ಮತ್ತೂ ಉಳಿದ ಪತ್ರ ಪತ್ರಿಕೆಗಳ ಸಂಪಾದಕರುಗಳು, ಕೈಬೆಮ್ಮುಟ್ಟು, ತಮ್ಮ ತಮ್ಮ ಭಾವಚಿತ್ರಗಳನ್ನೂ, ಪತ್ರ ಪತ್ರಿಕೆಗಳ ಸಂಪೂರ್ಣ ಇತಿಹಾಸವನ್ನೂ, ಆಯಾ ಪತ್ರ ಪತ್ರಿಕೆಗಳ ಎರಡೆರಡು ಪ್ರತಿಗಳನ್ನೂ, ವಿಶೇಷ ಸಂಚಿಕೆಗಳಿದ್ದರೆ ಅವನ್ನೂ, ತಪ್ಪದೆ ಕಳುಹಿಸಬೇಕೆಂದೂ, ಇವುಗಳ ಆಧಾರದಿಂದ ಕರ್ನಾಟಕದ ಯಾವತ್ತು ಗತ ಮತ್ತೂ ಜೀವಿತ ಪತ್ರಿಕೆಗಳ ಇತಿಹಾಸ ಸಂಗ್ರಹವನ್ನು, ಆಯಾ ಸಂಪಾದಕರುಗಳ ಭಾವಚಿತ್ರಗಳೊಡನೆ ಸಿದ್ಧಗೊಳಿಸುವ ಯತ್ನ ನಡೆಯುತ್ತಿದೆ ಎಂದೂ ಶ್ರೀ. ವಿ. ಜಿ. ತೊರಗಲ್ಲ, ಕಾರ್ಯದರ್ಶಿ, ಕರ್ನಾಟಕ ಸಂಘ, ಬೆಳಗಾವಿ, ಇವರು ತಿಳಿಸುತ್ತಾರೆ.

ಡಾ॥ ಎನ್. ಎಸ್. ಹರ್ಡೀಕರರವರು ಇಂದು ನಾಳೆ ಇಲ್ಲಿಗೆ ದಯೆಯಾಡುವರೆಂದು ತಿಳಿದುಬರುತ್ತದೆ.

ಸ್ವಸ್ತಿಕಾ

ಕೇಶ

ಸಿದ್ಧತೆಗಳು

ಇಂಡಿಯದಲ್ಲೆಲ್ಲಿಯೂ ಖ್ಯಾತಿ ಪಡೆದಿದೆ. ಬಿಳಿಯ ಮತ್ತು ಖನಿಜತೈಲಗಳಿಲ್ಲವೆಂದು ಗ್ಯಾರೆಂಟಿ ಇದೆ. ತೃಪ್ತಿಯಾಗದಿದ್ದರೆ ಹಣ ಪರತ.

ಕೇಶವರ್ಧಕ ಟಾನಿಕ್

ಕೂದಲು ಯಥೇಷ್ಟ ಬೆಳೆಯುತ್ತದೆ, ಚಿಕ್ಕ ವಯಸ್ಸಿನಲ್ಲಿ ಕೂದಲು ಉದುರುವುದನ್ನು ತಡೆಯುತ್ತದೆ, ತಲೆಯ ಹೊಟ್ಟನ್ನು ನಿರ್ಮೂಲಿಸುತ್ತದೆ, ತಲೆಯ ಚರ್ಮದ ಮೇಲೆ ಮನೋಹರವಾದ ತಂಪನ್ನು ಉಂಟುಮಾಡುತ್ತದೆ, ಹೀಗೆಂದು ಪ್ರಬಲವಾಗಿ ಶಿಫಾರಸು ಮಾಡಲ್ಪಟ್ಟಿದೆ. ಹೊಸ ಹೂಗಳ ಹಾಗಿರುವ ಸೂಕ್ಷ್ಮವಾದ ಸುವಾಸನೆಯುದೆ.

ಕೇಶತೈಲಗಳು

ಪುಟಕ್ಕಿಟ್ಟ ಶುದ್ಧ ತೆಂಗಿನೆಣ್ಣೆ ಮತ್ತು ತಿಲ್ ಎಣ್ಣೆಗಳಿಂದ ಮಾತ್ರವೇ ತಯಾರಿ. ಹಾನಿಕರವಾದ ಖನಿಜದ ಎಣ್ಣೆಗಳಿಲ್ಲವೆಂದು ಗ್ಯಾರೆಂಟಿ. 'ಸ್ವಸ್ತಿಕಾ' (ಸಾಮಾನ್ಯ ಸುವಾಸನೆ) ಮತ್ತು 'ಸುಪರ್‌ಫೈನ್' (ಬಲವಾದ ಸುವಾಸನೆ) ಎಂಬ ೨ ಜಾತಿಯಾಗಿ ೫ ಬಗೆಯ ಪರಿಮಳಯುಕ್ತವಾಗಿ ದೊರಕುತ್ತದೆ—ಗುಲಾಬೀ, ಮಲ್ಲಿಗೆ, ಗಂಧ, ಕಸ್ತೂರಿ, ಮಾಧವಿಕಾ.

ಸುವಾಸನೆಯುಳ್ಳ ಹರಳೆಣ್ಣೆ

ಕೂದಲಿಗಿದು ಉತ್ಕೃಷ್ಟ ಶಕ್ತಿವರ್ಧಕ ಔಷಧ; ಕೂದಲು ಉದುರದು; ಬೆಳ್ಳಗಾಗದು; ತಲೆಯ ಚರ್ಮವನ್ನು ನಿರ್ಮಲವಾಗಿ, ತಂಪಾಗಿ ಇಡುತ್ತದೆ. ಅತ್ಯುತ್ತಮವಾಗಿ ಸುಗಂಧವುಳ್ಳದು; ನಿಜವಾಗಿಯೂ ಉಚ್ಚ ತರಗತಿಯ ಸಾಧನ.

ಕೂದಲಿಗೆ ಶಿಕಾಕ್ಕಾಯಿ ಸಾಬೂನು

ಕೂದಲು ತೊಳೆಯುವಲ್ಲಿ, ಅಡಸ್ಸು ಯಥೇಷ್ಟ ಬೆಳೆಸುವಲ್ಲಿ, ತಲೆ ಹೊಟ್ಟನ್ನು ನಿರ್ಮೂಲಿಸುವಲ್ಲಿ, ಕೂದಲಿಗೆ ಧಾರಾಳವಾಗಿ ನುಣುಪಿನ ಹೊಳಪು ಕೊಡುವಲ್ಲಿ ಇದಕ್ಕೆ ಸರಿ ಇಲ್ಲ. ತಲೆಯ ಚರ್ಮಕ್ಕೆ ಇದರಿಂದ ಹೊಸ ಚೈತನ್ಯ-ಸಂತೋಷಕರವಾದ ಸುವಾಸನೆ; ಸ್ನಾನಕ್ಕೂ ಇದೇ ಒಳ್ಳೆಯದು.

ದಿ ಸ್ವಸ್ತಿಕಾ ಆಯಿಲ್ ಮಿಲ್ಸ್ ಲಿಮಿಟೆಡ್
ವಡಾಲಾ, ಬೊಂಬಯಿ 15.

ಹಿಂದೂದೇಶ

ಪಂಡಿತ ಜಹ್ವರಲಾಲರು ಮುಂಗಿಲಿ ಪ್ರಾಂತದಲ್ಲಿ ಕಾರಿನಲ್ಲಿ ಬರುತ್ತಿದ್ದಾಗ, ಗಜಧರ ಶಾಹು ಎಂಬಾತನು ಕಾರಿಗೆ ಆಡ್ಡ ಮಲಗಿ, ಕಿಸಸ್ಸು ರಹಿತ ಪ್ರತಿನಿಧಿಗಳನ್ನೇ ಎಸೆಂಬ್ಲಿಗೆ ಕಳುಹಿಸಿ ಕೊಡುವಂತೆ, ಪಂಡಿತರಿಂದ ಭರವಸೆ ಪಡೆಯುವ ಹಟಸಾಧನೆ ಮಾಡಿದನೆಂದೂ, ಕೊನೆಗೆ ಅವನನ್ನು ಬಲಾತ್ಕಾರದಿಂದ ಆಚೆಗೊಯ್ಯುವ ಸಂದರ್ಭವೊದಗಿತೆಂದೂ ಪ್ರಕಟವಾಗಿದೆ.

ಅಹಮ್ಮದ್‌ನಗರ ಜಿಲ್ಲೆಯ ಅನೇಕ ಮಂದಿ ರೈತರು ಫೈಜಾಪುರ ಕಾಂಗ್ರೆಸಿನ ಅಧಿವೇಶನಕ್ಕೆ—ಸುಮಾರು ೨೦೦ ಮೈಲು ದೂರ—ತೆರಳಿ ಅಲ್ಲಿ ತಮ್ಮ ಹೇಳಿಕೆಯನ್ನು ಮುಂದಿರಿಸಬೇಕೆಂದು ಪ್ರಯತ್ನಗಳು ನಡೆಯುತ್ತಿವೆ.

ವೈಸರಾಯರ ಕಿಂಗ್ ಜಾರ್ಜ್ V ಸ್ಮಾರಕ ನಿಧಿಗೆ ಇಲ್ಲಿಯ ತನಕ ರೂ. ೧೦,೫೧೧—೧೫—೩ ಸಂಗ್ರಹವಾಗಿದೆ.

ದಿವಾಳಿ ಹಬ್ಬದ ಸಮಯದಲ್ಲಿ ಕರಾಚಿಯಲ್ಲಿ ೧೩ ಕಡೆ ಬೆಂಕಿಯ ಅನಾಹುತಗಳುಂಟಾಗಿ, ವಿಶೇಷ ಧನನಷ್ಟವಾಗಿದೆ. ಪ್ರಾಣನಷ್ಟವಿಲ್ಲ.

ಲಂಡನ್ ಪ್ರದರ್ಶನದ ರಾಯಲ್ ಕಮಿಷನರವರು, ವಿಜ್ಞಾನಪರಿಶೋಧನೆಯ ಸಂಬಂಧದ ವಿದ್ಯಾರ್ಥಿವೇತನವನ್ನು ಹೊಸದಾಗಿ ಏರ್ಪಡಿಸಿ ಅದನ್ನು ಪ್ರವೀಣರಾದ ಹಿಂದೀ ವಿದ್ಯಾರ್ಥಿಗಳಿಗೆ ಕೊಡಲು ನಿರ್ಧರಿಸಿದ್ದಾರೆ. ಇದರ ಮೌಲ್ಯ ೨೫೦—೩೦೦ ಪೌಂಡುಗಳು. ಇದು ೨ ವರ್ಷಗಳ ವರೆಗೆ ದೊರಕುವುದು.

ಷಾಹಿದ್‌ಗಂಜಿನ ಮೊಕದ್ದಮೆಯನ್ನು ಹೈಕೋರ್ಟಿಗೂ ಅಗತ್ಯಬಿದ್ದರೆ, ಪ್ರೀವೀ ಕೌನ್ಸಿಲಿಗೂ ತೆಗೆದುಕೊಂಡು ಹೋಗಬೇಕೆಂದು ಲಾಹೋರಿನ ಷಾಹಿದಗಂಜ್ ಕಾನ್ಫರೆನ್ಸಿನಲ್ಲಿ ನಿರ್ಣಯವಾಗಿದೆ.

ಕಲ್ಕತ್ತಾ ನಗರದ ೨೫ ಮನೆಗಳಲ್ಲಿ ಏಕಕಾಲದಲ್ಲಿ ಪೋಲೀಸರ ಝಡ್ತಿ ನಡೆದು ಕಮ್ಯುನಿಸ್ಟರ ಸಾಹಿತ್ಯವು ದೊರಕಿದೆ ಎಂದೂ, ಕೆಲವು ಮಂದಿ ಯುವಕ ಯುವತಿಯರ ವಿಚಾರವಾಗುತ್ತಿದೆ ಎಂದೂ ತಿಳಿದು ಬರುತ್ತಿದೆ.

ಲಾಹೋರಿನಲ್ಲಿ ಕಾರುಗಳಿಗೆ ಬೆಂಕಿಕೊಡುವ ಹಾವಳಿ ಹೆಚ್ಚಾಗುತ್ತಿದೆ. ಇಪ್ಪರಲ್ಲಿಯೇ ಅಂತಹ ೧೩ ಕೇಸುಗಳಾಗಿ ಪೋಲೀಸರ ಜೋರಾದ ತನಿಖೆ ನಡೆಯುತ್ತಿದೆ.

ಪೇಶಾವರ ಬನ್ನೂ ಧಾನ್ಯದ ಮಾರ್ಕೆಟಿನಲ್ಲಿ ಬೆಂಕಿ; ೧೯ ಅಂಗಡಿಗಳೂ ಸ್ವಾಲುಗಳೂ ಸುಟ್ಟು ೭೦ ಸಾವಿರದಷ್ಟು ನಷ್ಟವಾಗಿದೆ.

ರಿಜರ್ವ್ ಬ್ಯಾಂಕಿನ ಗವರ್ನರರಾಗಿದ್ದ ಸರ್ ಒಸ್‌ಬರ್ನ್ ಸ್ಮಿತ್‌ರವರ ರಾಜೀನಾಮೆಯ ಸಂಬಂಧ ಶ್ರೀ. ಸತ್ಯಮೂರ್ತಿಗಳವರು ಎಸೆಂಬ್ಲಿಯಲ್ಲಿ ಪ್ರಶ್ನೆ ಕೇಳಲಿರುವರು.

ಸಬ್ ಮ್ಯಾಜಿಸ್ಟ್ರೇಟರುಗಳು ತಮ್ಮ ಮೊಕದ್ದಮೆಗಳನ್ನು ಬೇಗನೇ ತೀರ್ಮಾನಿಸುವ ಹಾಗೆ ಸಮ್ಮತಿಯಾಗಿ ಮದ್ರಾಸ್ ಸರಕಾರದ ಅಪ್ಪಣೆ ಹೊರಟಿದೆ. ಅನಾವಶ್ಯಕವಾಗಿ ಸರಕಾರಕ್ಕೆ ಆಗುವ ಖರ್ಚನ್ನು ತಪ್ಪಿಸಬೇಕೆಂಬುದೂ ಇದರಲ್ಲಿ ಸರಕಾರದವರ ಒಂದು ಮುಖ್ಯೋದ್ದೇಶ.

ಮಾನ್ಯ ವಿ. ಎಸ್. ಶ್ರೀನಿವಾಸ ಶಾಸ್ತ್ರಿಗಳವರು, ಮಲಯದ ಡೆಪ್ಯುಟೇಶನ್ನಿನೊಂದಿಗೆ ಅಲ್ಲಿಗೆ ತೆರಳಿದ ಸಮಯದಲ್ಲಿ ಶ್ರೀ. ಟಿ. ಆರ್. ವೆಂಕಟರಾಮ ಶಾಸ್ತ್ರಿಗಳವರು ಅನ್ನಮಲೆಯ ವಿಶ್ವವಿದ್ಯಾಲಯದ ವೈಸ್ ಛಾನ್ಸಲರರ ಕಾರ್ಯನಿರ್ವಾಹ ಮಾಡುವರು.

ಬರೇ ೩೪ ರೂಪಾಯಿಗಳನ್ನು ಅಥವಾ ಅದಕ್ಕೂ ಕಡಿಮೆಯಾಗಿರುವ ಮೂಲಧನವನ್ನು ಮಾತ್ರವೇ ಉಪಯೋಗಿಸಿಕೊಂಡು, ಅದರಿಂದ ಪ್ರತಿಯೊಬ್ಬ ರೈತನೂ, ಸಾಧಾರಣ ರೀತಿಯ ಒಂದು ಸಕ್ಕರೆ ಕೈಗಾರಿಕೆಯನ್ನು ತನ್ನಲ್ಲಿಯೇ ಏರ್ಪಡಿಸಿಕೊಳ್ಳುವಂತೆ, ಇಂಪೀರಿಯಲ್ ಕೃಷಿಪರಿಶೋಧನಾ ಸಂಸ್ಥೆಯವರು, ಒಂದು ಹೊಸ ಯೋಜನೆಯನ್ನು ಕಂಡುಹಿಡಿದಿದ್ದಾರೆ.

ಬಸ್ಸು ಪ್ರಯಾಣದಲ್ಲಿ, ಗಾಳಿಯಲ್ಲಿ ಹಾರಿ ಕೆಳಗೆ ಬಿದ್ದ ತನ್ನ ಟೋಪಿಯನ್ನು ಹೆಕ್ಕಲಿಕ್ಕಾಗಿ ಚಲಿಸುತ್ತಿದ್ದ ಆ ಬಸ್ಸಿನಿಂದ ಹಾರಿದ ಬೆರ್‌ಸಾಂತ್ ಸಿಂಗ್ ಎಂಬ ಒಬ್ಬ ಸಿಖ್ಖನು ತನ್ನ ಪ್ರಾಣವನ್ನೇ ಕಳೆದುಕೊಂಡ. ಇದು ಕೌಲಾಲುಂಪರಿನ ವೃತ್ತಾಂತ.

ಪೂರ್ಬಿಲಿಯಲ್ಲಿ ಕಾಂಗ್ರೆಸ್ ಪ್ರೆಸಿಡೆಂಟರಾದ ಪಂಡಿತ ಜಹ್ವರ್‌ಲಾಲ್ ನೆಹರೂಯವರು ಒಂದು ಭಾಷಣ ಕೊಡುತ್ತಿದ್ದ ಹಾಗೆ, ಆ ಸಭೆಯನ್ನು ಚೆದರಿಸಲು, ಯಾರೋ ಕೆಲವರು ಅನೆಗಳನ್ನು ಅಲ್ಲಿಗೆ ಕಳುಹಿಸಿ ಗಲಭೆ ಮಾಡಿದರೆಂದೂ, ಪೋಲೀಸರು ಆಸ್ಪರಲ್ಲಿಯೇ ಅಲ್ಲಿಗೆ ತಲುಪಿದುದರಿಂದ ಗಲಭೆಯಲ್ಲಿಗೇ ಶಾಂತವಾಯಿತೆಂದೂ ತಿಳಿದುಬರುತ್ತಿದೆ.

ರಂಗೂನ್ ಪ್ರಾಂತದಲ್ಲಿ ಚುನಾವಣೆಯು ಸಂಬಂಧ ಒಂದು ಬಸ್ಸಿಂದ ಮಂದಿ ಓಟರರನ್ನು ತರುತ್ತಿದ್ದಾಗ ಉರುಳಿ ಬಿದ್ದು ಇಬ್ಬರು ಸತ್ತರು; ೪ ಮಂದಿಗೆ ಗಾಯಗಳಾಗಿವೆ.

ಬೊಂಬಯಿಯ ಪರಿಸ್ಥಿತಿ ಸುಧಾರಿಸಿದೆ. ಅಡರೂ ತಂಟೆಯು ಆಗಾಗ ನಡೆದಿದೆ. ಥೀಸಾವಳಿ ಸಮಯದಲ್ಲಿ ಒಬ್ಬ ಮುಸಲ್ಮಾನನು ಒಂದು ಉರಿಯುವ ಪಟಾಕಿಯನ್ನು ಒಬ್ಬ ಮಾರ್ವಾಡಿ ಅಂಗಡಿಯ ಮೇಲೆ ಹಾಕಿ ಸ್ವಲ್ಪ ಗಲಾಟೆಯಾಯಿತು. ೭ ಮಂದಿಗೆ ಗಾಯ. ಹಾಗೇ ಇನ್ನೂ ಒಂದೆರಡು ಬಡಿದಾಟಗಳು ನಡೆದಿವೆ.

ಬರಿಸಕ್ಕೊಂದು ಹೊಸ ವಿಶ್ವವಿದ್ಯಾಲಯವು ತೆರೆಯಬಹುದೆಂಬ ಆಶ್ವಾಸನವನ್ನು ಅಲ್ಲಿನ ಮಾನ್ಯ ಗವರ್ನರರು ತಮ್ಮದೊಂದು ಭಾಷಣದಲ್ಲಿ ಕೊಟ್ಟಿರುತ್ತಾರೆ.

ಹಿಂದೂ—ಮುಸಲ್ಮಾನರ ಮತವೈಷಮ್ಯಕ್ಕೆ ಆಸ್ಪದ ಕೊಡುವ ಯಾವ ವಿಚಾರಕ್ಕೂ ತಮ್ಮ ಆಶ್ರಯ ವಿಲ್ಲವೆಂದು ಅಲಿಘರ ಮುಸ್ಲಿಂ ವಿಶ್ವವಿದ್ಯಾಲಯದ ಮುಸ್ಲಿಂ ವಿದ್ಯಾರ್ಥಿಗಳು ನಿರ್ಧರಿಸಿದ್ದಾರೆ.

ತಿರುವಾಂಕೂರಿನ ಸಂಗೀತ ಸಮ್ಮೇಳನವು ಬ್ರಹ್ಮಶ್ರೀ ಗಾಯನಶಿಖಾಮಣಿ ಮುತ್ತೈಯ್ಯ ಭಾಗವತರ್, ಮೈಸೂರು ಆಸ್ಥಾನ ವಿದ್ವಾನ್, ಇವರ ಅಧ್ಯಕ್ಷತೆಯಲ್ಲಿ ಜರುಗಿತು. ದಿವಾನ್ ಸರ್. ಸಿ. ಪಿ. ರಾಮಸ್ವಾಮಿ ಅಯ್ಯರರು ಇದರ ಆರಂಭೋತ್ಸವವನ್ನು ನೆರವೇರಿಸಿ, ತಿರುವಾಂಕೂರು ಮಹಾರಾಜರುಗಳಿಗೆ ಸಂಗೀತವ ವಿಷಯದಲ್ಲಿ ಇದ್ದ ಅಭಿರುಚಿ, ಆಸಕ್ತಿ, ಪಾಂಡಿತ್ಯಗಳೆಷ್ಟೆಂದು ವಿಶದೀಕರಿಸಿದರು.

ಸಾಹಿತ್ಯ ಸಂಬಂಧವಾಗಿ, ನೋಬಲ್ ಬಹುಮಾನದ ಮಾದರಿಯ ಒಂದು ಪಾರಿತೋಷಕವನ್ನು, ಹೈದರಾಬಾದು ನೈಜಾಂವರ ಸಿಲ್ವರ್ ಜುಬಿಲೀ ಮಹೋತ್ಸವದ ಸ್ಮಾರಕವಾಗಿ ಏರ್ಪಡಿಸಬೇಕೆಂದು ಉಸ್ಮಾನಿಯಾ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ನಿರ್ಧರಿಸಿರುವರು.

ವಿದೇಶ

ಜರ್ಮನಿಯ ಹಿಟ್ಲರ್ ಸಾಹೇಬರು ಇನ್ನೊಂದು ಬಾಣ ಪ್ರಯೋಗ ಮಾಡಿದ್ದಾರೆ. ವಾರ್ಸೇಲಿ ಒಪ್ಪಂದಕ್ಕೆ ಇದರಿಂದ ಜೀವಾಳಿಗೆ ಗಾರ್ಪಡೆ ಬಂದ ಹಾಗಿದೆ. ಈ ಒಪ್ಪಂದದಲ್ಲಿ ಜರ್ಮನ್ ಹೊಳೆಗಳಲ್ಲಿ ಹಡಗಿನ ಸಂಚಾರದ ಸ್ವಾತಂತ್ರ್ಯದ ಕುರಿತಾಗಿ ಕೆಲವು ಪರತ್ತುಗಳಿದ್ದುವು. 'ಆವು ತೀಗ ಆ ಸಂಧಿಪತ್ರದಲ್ಲಿಯೇ ಇರಲಿ; ನಾವದನ್ನು ಗಣ್ಯಕ್ಕೆ ತರುವವರಲ್ಲ. ವಿದೇಶೀ ಹಡಗುಗಳ ಸಂಚಾರವು ಇನ್ನು ಅಲ್ಲಿ ಆಗ ಬೇಕಾದರೆ ಜರ್ಮನಿಯೇ ಆ ಸಂಬಂಧದ ನಿಯಮ ನಿಬಂಧನೆಗಳನ್ನು ರಚಿಸುವುದು. ಬೇಕಾದರೆ, ಆ ನಿಯಮಗಳಂತೆಯೇ ವಿದೇಶೀ ಹಡಗುಗಳು ನಡೆದು ಕೊಳ್ಳಬೇಕು' ಎಂದು ಹಿಟ್ಲರರ ಅಪ್ಪಣೆಯಾಗಿವೆ. ಇದರಿಂದ ಹಳೆಯ ಸಂಧಿಪತ್ರಗಳ ಬೆಲೆ ಇಳಿದಿದೆ ಎಂದು ತೋರುವುದಿಲ್ಲವೇ?

ಮೆಡ್ರಿಡ್ ನಗರದ ವಾರ್ತೆ ಕ್ಷಣಕ್ಕೊಂದು ಬಗೆ. ಅಲ್ಲಿನ ಮಂದಿರಗಳಿಗೆ ಬೋಂಬಿನಿಂದ ಬಹಳ ನಷ್ಟ ಸಂಭವಿಸಿದೆ. ಯುದ್ಧ ಆರಂಭವಾದುದೀಗಲೇ ಎಂದು ಕೆಲವರ ಹೇಳಿಕೆ. ಒಂದು ಗಜ ಸ್ಯೈನಿನ ಭೂಮಿ ಸರಕಾರವ ವಶವಿರುವಷ್ಟು ಕಾಲ ಯುದ್ಧ ತಪ್ಪದೆಂದು ಪ್ರಭುತ್ವದವರ ವೀರವಾಣಿ. ಅಡರೂ ಇಪ್ಪರಲ್ಲೇ ಪ್ರಭುತ್ವದವರ ಬಲ ಹಿಂಜರಿದು, ಬಂಗೆಗಾರರ ಪ್ರವೇಶವು ಆ ನಗರದಲ್ಲಿಯಾಗಿದೆ ಎಂದು ಸುದ್ದಿ.

ಸಿರಿಯಾ ಪ್ರಾಂತದಲ್ಲಿ ರಮುಝಾನಿನ ಸಮಯದಲ್ಲಿ ಕೈಸ್ತ—ಮಹಮ್ಮದೀಯರೊಳಗೆ ಕಲಹವಾಗಿ, ಪೋಲೀಸರ ಗುಂಡು ಹಾರಿತು. ೩ ಮಂದಿ ಸತ್ತರು; ೩೮ ಮಂದಿಗೆ ಗಾಯ. ಈ ಗಲಭೆಯಿಂದ ಎಲ್ಲ ಅಂಗಡಿಗಳನ್ನೂ ಕೊಂಚ ಸಮಯ ಮುಚ್ಚಬೇಕೆಂದು ಅಲ್ಲಿಯ ಹೈ ಕಮಿಶನರರ ಆಜ್ಞೆ.

ದಕ್ಷಿಣ ಆಫ್ರಿಕದ ಗಣಿಗಳ ಮಂತ್ರಿಗಳಾದ ಮಿ. ಪೇಟ್ರಿಕ್ ಡಂಕನ್‌ರವರು, ಅಲ್ಲಿನ ಗವರ್ನರ್ ಜನರಲರಾಗಿ ನೇಮಕ ಹೊಂದಿದ್ದಾರೆ— ಯೂನಿಯನ್ ಸರಕಾರದ ಶಿಫಾರಸಿನಂತೆ. ಆಫ್ರಿಕದವರೇ ಈ ಸ್ಥಾನವನ್ನೇರಿದುದು ಇದೇ ಮೊದಲು.

ಮೂಸೇರಿಸ್ ಪ್ರಾಂತದಲ್ಲಿ ಗುಂಡಿನ ಮದ್ದು ತಯಾರಾಗುವ ಕಾರ್ಖಾನೆಯಲ್ಲಿ ಸಿಡಿತವುಂಟಾಗಿ ಸುಮಾರು ೧೨ ಮಂದಿ ಸತ್ತರು; ಸುಮಾರು ೧೦೦ ಮಂದಿಗೆ ಗಾಯ.

MYSORE & COORG PRODUCE AGENCY,
MANGALORE. TELE: MYCO.

ಮೈಸೂರ್ ಎಂಡ್ ಕೂರ್ಗ್ ಪ್ರೊಡ್ಯೂಸ್ ಏಜನ್ಸಿ,

ಮಂಗಳೂರು

ಮಾಡುವ ನಮಸ್ಕಾರ.

ಹಾಲಿ ಮಂಗಳೂರು ಬಜಾರು ಧಾರಣೆ.

ಹಳೇ	ಕಾಫಿ	ರೂ. 132—8—0	ರಿಂದ ರೂ. 140—0—0
,,	ಕಪ್ಪು ,,	65—0—0	ರಿಂದ ರೂ. 72—8—0
,,	ಗ್ರೀನ್ ಪೀಬರಿ ,,	155—0—0	ರಿಂದ ರೂ. 162—8—0
,,	aa ,,	155—0—0	ರಿಂದ ರೂ. 162—8—0.

ಯಾಲಕ್ಕಿ:—ಕೊಡಗು ರೂ. 51ರಿಂದ ರೂ. 54—0—0 ಗ್ರೀನ್
,, ,, ರೂ. 48ರಿಂದ ರೂ. 53—0—0 ಬಿಳಿ } ಕಳೆದ ವಾರದಂತೆ ಸ್ಟೆಡಿಯಿದೆ.
,, ಸಕ್ಲೇಶಪುರ ರೂ. 52ರಿಂದ ರೂ. 56—0—0

ಕಾಫಿಯ ಮಾರ್ಕೆಟು:—ಈ ವಾರದಲ್ಲಿ ಖಂಡಿ 1ರ ರೂ. 4-5 ಜಾಸ್ತಿಯಿಂದ ಫೋರ್ವರ್ಡ್ ಸಾಟ್ಸೆಯು ಆಗಿದೆಯಾಗಿ ಹೇಳಬಹುದು. ಪರಬಂದ್ರದ ದಿನಗಂಡಿನಿಂದಲೋ ಅಥವಾ ಇಲ್ಲಿಯೇ ತೇಜಿ ಕಾಣುವುದೋ ಎಂಬೀ ವಿಚಾರ ಸರಿಯಾಗಿ ತಿಳಿಯುವುದಿಲ್ಲ. ಮುಂದಿನ ವಾರದೊಳಗಾಗಿ ಸರಿಯಾದ ಸಂಗತಿ ತಿಳಿಯಬಹುದು. ಅಂತೂ ಈ ವಾರದಲ್ಲಿ ಸ್ವಲ್ಪ ತೇಜಿಯಾಗಿಯೂ ಮುಂದಿನ ಸ್ವಭಾವ ತೇಜಿಯೆಂದೂ ಹೇಳಬೇಕಾಗುತ್ತೆ. ದರ ರೂ. 135ರಿಂದ 145ರ ತನಕ ಹೋಲ್ ಕ್ರಾಪ್ 5% ಬೇಸಿಸ್ ನಂತೆಯೂ, ದರ ರೂ. 145ರಿಂದ 155ರ ತನಕ ಚೆರಿ ಕ್ಲೀನ್ ಕಾಫಿಗೂ ದರ ರೂ. 32ರಿಂದ 33ರಂತೆ ಪ್ಲೇಂಟೇಶನ್ ಎಸೋರ್ಟುಮೆಂಟಿಗೂ, ಧಾರಣೆಯಿಂದ ವ್ಯಾಪಾರವಾಗುತ್ತಲಿದೆ. ಮುಂದಿನ Spot ಸೇಲು ದರ ತೆರಳಿ ಪ್ಲೇಂಟೇಶನಿಗೂ, ದರ 140-145ರಂತೆ ನೇಟೀವಿಗೂ ಅಂದಾಜು ನಿಲ್ಲಬಹುದಾಗಿ ಹಲವರ ಅಭಿಪ್ರಾಯವಿದೆ.

ಯಾಲಕ್ಕಿ:—ಈ ವಾರದಲ್ಲಿ ಹೆಚ್ಚಿನ ವ್ಯಾಪಾರವೇನೂ ಆಗಲಿಲ್ಲ. ಧಾರಣೆ ಸ್ಥಿರವಾಗಿ ನಿಂತಿದೆ. ಮುಂದಿಯಾಗುವ ಅಭಿಪ್ರಾಯ ಯಾರೂ ಪಡುವದಿಲ್ಲ. ಮುಂದಿನ ತೇಜಿ ಮುಂದಿ ಹಿಂದಿನಿಂದ.

ಎಲ್ಲಾ ಪ್ಲೇಂಟರುಗಳು ಮತ್ತು ಸಾಹುಕಾರರಲ್ಲಿ ವಿಜ್ಞಾಪನೆ:—ಪೂರ್ಣ ಅಭಿವಾನವಿಟ್ಟು ಮಹಲು ರವಾನಿಸಿಕೊಡಬೇಕಾಗಿಯೂ, ಬಂದ ಮಹಲಿಗೆ ಅಪೇಕ್ಷೆ ಪ್ರಕಾರ ಇತ್ತೆಟ್ಟಿನವರ ಸ್ನೇಹಾಚಾರದ ಯಾವತ್ತು ಅನುಕೂಲತೆಯನ್ನೂ ಒದಗಿಸಿಕೊಟ್ಟು ಬಜಾರುಧಾರಣೆಯಲ್ಲಿ ಆದಷ್ಟು ಚಾಕಚಿಯಿಂದ ವಿಕ್ರಿತಪಡಿಸಿ ಕೊಡುತ್ತೇನೆ, ತಿಳಿಯಿರಿ.

ಇಂತಿ ನಮಸ್ಕಾರ.

BANKER
SHA DHANJI BHAGAWAN DAS.

N. SUBBA RAO,
Mysore & Coorg Produce Agency,
MANGALORE.

ಪಂಚಮ ಜಾರ್ಜರ ಸ್ಮಾರಕನಿಧಿಗೆ ಧನಸಹಾಯಮಿತ್ತವರ ಪಟ್ಟಿ.

(ಮುಂದುವರಿದುದು)

ರೂಪ್ಯಾ ಒಂದರಂತೆ ಕೊಟ್ಟವರು.

ಮ. ರಾ. ರಾ.ಗಳಾದಿ ಕೂಡೋಲಿ ಚಿನ್ನಪ್ಪ ಗೌಡ, ಪಂಬೂರು ದೇರಣ್ಣ ಗೌಡ, ಎಲಿಯಣ್ಣ ಗೌಡ, ಪಂಬೂರು ದೇರೆ ಪೂಜಾರಿ, ಪೆರ್ಲಂಪಾಡಿ ಅಮ್ಮು ಗೌಡ, ಪೆರ್ಲಂಪಾಡಿ ದುಗ್ಗ ಗೌಡ, ಕುದುಕೋಳಿ ದೇರಪ್ಪ ಗೌಡ, ಕುದುಕೋಳಿ ಕೃಷ್ಣಪ್ಪ ಗೌಡ, ಕೊಲ್ತಿಗೆ ವೆಂಕಪ್ಪ ರೈ, ಲುವಿಸ್ ಫೆರ್ನಾಂದಿಸ್, ತೆಂಕ ಎಡಪದವು; ದೂಮ ಸಪಲ್ಯ, ಬಾಳೆಪುಣಿ; ರಾಮಪ್ಪ ಪೂಜಾರಿ ಬೈಕಂಪಾಡಿ, ಮಹಮ್ಮದ್ ಖಾನ್, ಬಾಡ; ಈಶ್ವರ ಭಟ್ಟ, ಶಿರಿವಾಗಿಲು; ಗೋಪಾಲಯ್ಯ, ಕನುಲಶಿಲೆ; ಪಠೇಲ ಷಣ್ಮುಖಯ್ಯ, ಉಲ್ಲೂರು; ಯಸ್. ಅಚ್ಚುತ ಭಟ್ಟ, ಪಡ್ರೆ; ಬಿ. ಗಣಪತಿ ಆಚಾರಿ, ಎಣ್ಮಕಜೆ; ಜಿ. ರಾಮ ಭಟ್ಟ, ಕೃಷ್ಣ ಭಟ್ಟ, ಎಣ್ಮಕಜೆ; ಶಂಕರ ಭಟ್ಟ, ಅದಿಯನಡ್ಕ ಲಕ್ಷ್ಮಣ ಪೈ, ಚನಿಯ ಪೂಜಾರಿ, ಮಮ್ಮುಂಞ್ ಬ್ಯಾರಿ, ಮುಳಿ ಮಹಾಲಿಂಗ ಭಟ್ಟ, ದೂಮ ಪೂಜಾರಿ, ಜೆ. ಯಸ್. ಮಿರಾಂದ, ನಾರಾವಿ; ಬಂಟ್ವಾಲ ನೀಲಕಂಠ ಪ್ರಭು, ದಕ್ಕಯ್ಯ ಹೆಗ್ಡೆ, ಬೆಳುವಾಯಿ; ಕಡಂದಲೆ ಸುಬ್ರಾಯ ಶ್ಯಾನುಭಾಗ, ಸೂಡ ಉಗ್ರಾಣಿ ಶೇಷು, ಸೂಡ ಇನಾಸ ಸೋಸ, ಸೂಡ ಗಾಬ್ರಿ ಸೋಸ, ತಿಮ್ಮಯ್ಯ ಶೆರಿಗಾರ, ಪಡುವಾರಿ; ಗಣಪಯ್ಯ ಶೆರಿಗಾರ, ಪಡುವಾರಿ; ಶೇಷ ಮಧ್ಯಸ್ಥ, ಮೂರ್ವಂತೆ; ವಾರಣಾಸಿ, ಅನಂತಯ್ಯ, ಹದವು; ವೆಂಕಪ್ಪ ಸೆಟ್ಟಿ, ಉಪ್ಪುಂದ; ಪಠೇಲ ಶಂಕರ ಭಟ್ಟ, ಶ್ಯಾನುಭಾಗ ಮಂಜುನಾಥಯ್ಯ, ವೆಂಕಟ್ರಮಣ ಮಯ್ಯ, ಉಪ್ಪುಂದ; ಹಸನ್ ಸಾಹೇಬ, ಉಪ್ಪುಂದ; ಪುತ್ತು ಪಡಿಯಾರ, ಉಪ್ಪುಂದ; ರಾಯ ಪಡಿಯಾರ, ಉಪ್ಪುಂದ; ತಿಮ್ಮಪ್ಪಯ್ಯ ಮಯ್ಯ, ಉಪ್ಪುಂದ; ವೆಂಕಟ್ರಮಣ ವೈದ್ಯ, ರಾಮಪ್ಪಯ್ಯ ಅಡಿಗ, ಕೆರ್ಗಾಳ; ನಾರಾಯಣ ಕಾರಂತ, ಕೆರ್ಗಾಳ; ಸುಬ್ರಾಯ ಕಾರಂತ, ಕೆರ್ಗಾಳ; ಶ್ರೀನಿವಾಸ ಭಟ್ಟ ಕೆರ್ಗಾಳ; ಯು ಸುಫ್‌ಜಿ ಮೊದಿನ್ ಸಾಹೇಬ, ಕಿರೂರು ಪಠೇಲ, ಯುಸುಫ್‌ಜಿ ಮಹಮ್ಮದ್ ವಿೂರ, ಎಡ್ತಾರೆ; ಪಡುವಾರಿ ಪಠೇಲ ವೀರಣ್ಣ ಸೆಟ್ಟಿ, ಗಂಗೊಳ್ಳಿ ಮೊದಿನ್ ಸಾಹೇಬ, ಎಡ್ತಾರೆ; ಹಿರಿಯಣ್ಣ ಸೆಟ್ಟಿ, ಅಲಂದೂರ್, ಎಡ್ತಾರೆ; ಪಂಡಿತ್ ಮಾಲ್ಯಯ್ಯ ಶೇರೆಗಾರ, ಬೈಂದೂರು; ನೆಲ್ಲಾಡಿ ಮುಂಜಯ್ಯ ಸೆಟ್ಟಿ, ಬೈಂದೂರು; ಮುವದು ಬಾಷ್ಯ ಸಾಹೇಬ ಬಹದೂರ್, ಸೂರಪ್ಪಯ್ಯ ಹೆಬ್ಬಾರ್, ಬಿಜೂರು; ಪಠೇಲ ಮಾಧವ ಹೆಬ್ಬಾರ, ಬಿಜೂರು; ಟಿ. ಸುಬ್ರಾಯ ಹೆಬ್ಬಾರ, ಉಲ್ಲೂರು; ವೆಂಕಟ್ರಾಯ ಸೆಟ್ಟಿ, ಕಭಾದ್‌ಕೋಣೆ; ಸಂಜೀವರಾವ್, ಕಭಾದ್‌ಕೋಣೆ; ಪರಮೇಶ್ವರ ಶ್ಯಾನುಭಾಗ, ಕೆರ್ಗಾಲ; ನಾಗ ಭಟ್, ಕೆರ್ಗಾಲ; ಗರ್ಡಿಮನೆ ಮಂಜಯ್ಯ ಸೆಟ್ಟಿ, ಹೇರೂರು; ವೆಂಕಟ್ರಮಣ ಐತಾಳ, ಹೆರಂಜಾಳ್; ಸುಬ್ರಾಯ ಸೆಟ್ಟಿ, ಹೆರಂಜಾಳ್; ಶೇಷ ಸೆಟ್ಟಿ, ಕಭಾದ್‌ಕೋಣೆ; ಜೋಗು ನಾಗಪ್ಪ, ಕಭಾದ್‌ಕೋಣೆ; ವಾಸುದೇವ ಪೈ, ಕಿರಿಮಂಜೇಶ್ವರ; ಸುಬ್ರಾಯ ಹೆಬ್ಬಾರ, ನಾಗೂರು; ಯಸ್. ನಾಗಪ್ಪಯ್ಯ, ನಾವುಂದ ಪಠೇಲ; ವೆಂಕಟ್ರಮಣ ಕಾರಂತ, ಹದವು; ವೆಂಕಪ್ಪ ಕಾರಂತ, ಹದವು ಪಠೇಲ; ತ್ರಾಸಿ ವೆಂಕಟ್ರಾವ್, ಹದವು ಶ್ಯಾನುಭಾಗ; ಪಡುಮನೆ ಮಂಜ, ಕಿರಿಮಂಜೇಶ್ವರ; ಬಿ. ನಾರಾಯಣ ಹೆಬ್ಬಾರ, ಕಿರಿಮಂಜೇಶ್ವರ; ಪಿ. ಕೆ. ರಾಮರಾವ್, ರೆವಿನ್ಯು ಇನ್‌ಸ್ಪೆಕ್ಟರ್; ನಡ ಪಠೇಲ ಶೇಷಗಿರಿ ಹೆಬ್ಬಾರ, ವೆಂಕಟ್ರಮಣಯ್ಯ, ಮಾರ್ವಂತೆ; ಕೃಷ್ಣ ಅವಬೃತ, ಮೂರ್ವಂತೆ; ಬಿ. ಟಿ. ಅರಿಗ ಜೈನ್ಸ್, ಕಡಬ; ಕಡಬ ಪಂಚಾಯತ ಬೋರ್ಡು, ಶಿವಪ್ಪ ಪೂಜಾರಿ, ಕೂವೆಟ್ಟು; ಲಿಂಗಪ್ಪ ಪೂಜಾರಿ, ಕೂವೆಟ್ಟು; ಕೆ. ದೇವಪ್ಪ ಸೆಟ್ಟಿ, ಕೂವೆಟ್ಟು; ಕುಟ್ಯಾಡಿ ಗುತ್ತು ಐತಪ್ಪ ಸೆಟ್ಟಿ, ಮಂಜಪ್ಪ ಹೆಂಗ್ಸು, ಕುಟ್ಯಾಡಿ ಗೋವಿಂದ ಆಸ್ರಣ್ಣ, ಇರುವೈಲ್; ಅನಂತರಾಜ ಕಂಬ್ಳಿ, ಕಾಶಿಪಟ್ಣ; ಸೇಸು ಮಾಡ, ಲಿಂಗಪ್ಪ ಹೆಗ್ಡೆ, ಕುಮಾರಯ್ಯ ಸೆಟ್ಟಿ, ಮಾರೋಡಿ; ಪಾದೆಮನೆ ರಾಮಣ್ಣ ಹೆಗ್ಡೆ, ಈದು; ಮಾಣಿ ಕೃಷ್ಣಯ್ಯ, ನಾಗೋಡಿ; ಪಠೇಲ ಜಟ್ಟಯ್ಯ, ಚಿದಂಬರಯ್ಯ, ನಾಗೋಡಿ; ಕುರಾಕುಂಡಿ ಒಳಗಿನ ಮನೆ ಸುಬ್ರಾಯ ಸೆಟ್ಟಿ; ಪಠೇಲ ಲಕ್ಷ್ಮಣ ಆಳ್ವ, ಪಠೇಲ ಚಿಕ್ಕಯ್ಯ ಸೆಟ್ಟಿ, ಗೋಳಿಹೊಳೆ; ಕೆ. ವಿ. ಜೋರ್ಜ್, ನೀಲೇಶ್ವರ; ಕೆ. ಪದ್ಮನಾಭರಾವ್, ಯಂ. ಕುಂಞಿಕಣ್ಣನ್ ನಾಯರ್, ಕೆ. ಕೃಷ್ಣ ಭಟ್ಟ, ಎ. ಕೃಷ್ಣನ್ ಎಂಬ್ರಾಂಡ್ರಿ, ಸಿ. ಕೆ. ಕುಂಞಿರಾಮನ್ ನಂಬಿಯಾರ್, ವಿ. ವಿ. ಆಚ್ಚುತ ವಾರಿಯರ್, ವಿ. ಪಿ. ನಾರಾಯಣ ನಾಯರ್, ಕೆ. ಕೆ. ಕುಂಞಿಕೃಷ್ಣ ಕುರುಪ್ಪು, ಕೆ. ಕೃಷ್ಣ ನಾಯರ್, ಎ. ಗೋಪಾಲರಾಯ ಶಾಸ್ತ್ರಿ, ವಿ. ನಾರಾಯಣ ಮಾರೂರು, ಶಿವಣ್ಣ ಕಾರಂತ, ಪುತ್ತೂರು; ನಾರಾಯಣ ಕಾರಂತ, ಶೆಕಾಲಿ ಬ್ಯಾರಿ, ಪಿ. ಅಬ್ದುಲ್ಲ ಸಾಹೇಬ, ತಿಮ್ಮಣ್ಣ ಆಳ್ವ, ತಿಮ್ಮಪ್ಪ ಸೆಟ್ಟಿ, ಕಡಂಬಾರ್; ರಾಮು ಭಟ್, ಕಾರಡ್ಕ; ವೆಂಕಟೇಶ ಭಟ್, ಪಣಿಯೆ ಸುಬ್ರಾಯ ಭಟ್, ಮಾಧವ ಭಟ್, ಬಡ್ಡೆಕೆರೆ ಅಚ್ಯುತ ಭಟ್ಟ, ಅರವನಡ್ಕ ಶಂಕರ ಭಟ್ಟ, ರಾಮಪ್ಪ ಭಟ್ಟ, ಚೆನ್ನಂಗೋಡು ಅನಂತ ಭಟ್ಟ, ಕಾರಡ್ಕ ಕೃಷ್ಣಯ್ಯ, ಪಠೇಲ ರಾಮಚಂದ್ರ ಬಲ್ಲಾಳ, ಎ. ಶಂಕರ ನಾಯಕ್, ಪಾಂಡಿ; ರಾಮಯ್ಯ ನಾಯಕ್, ಪಾಂಡಿ; ಕಲ್ಮಂಜೆ ಗಣಪತಿ ಭಟ್ಟ, ವೋಬು ಪೂಜಾರಿ, ಲೈಲ ಪಠೇಲ ಎ. ಡಿ'ಸೋಜ ಸ, ನಾರ್ಣ ಪೂಜಾರಿ, ಕುಕ್ಕ ಯಾನೆ ಸುಬ್ಬ ಮಲೆಕುಡಿ, ಮಿಂಗೆಲ್ ಮೊನಿಸ್ ಯಾನೆ ಸೈಮನ್, ನಾವೂರು ರುಸಾರಿಯೋ ಮಿನೇಜಸ್, ಅಂದ್ರು ಲೋಬೊ, ಅನ್ನ ಕುಂಞಿ ಕಾಜಿ ಗುಲಾಮ್ ದಸ್ತಗಿರಿ ಸಾಹೇಬ, ಕೊರಗ ಪೂಜಾರಿ, ಅನಂತ ಹೆಬ್ಬಾರ, ಎಲಿಯಣ್ಣ ಗೌಡ, ಬಿ. ರಂಗಪ್ಪ ಗೌಡ, ಗುಮ್ಮಣ್ಣ ಪೂಜಾರಿ, ಜೆ. ಜೆ. ವೊಂತೇರೊ, ಇ. ಮಾನುವೆಲ್ ಟೌರೊ, ನರಸಿಂಹ ನಾಯ್ಕ, ಕಾಜಿ ಖಾದರ್ ವಿೂರ ಸಾಹೇಬ; ಶಿವಪ್ಪ ಪೂಜಾರಿ, ಜಿ. ಶಂಕರ ರಾಯ, ಪಿ. ಜನಾರ್ಧನ ಪೈ, ಚಂದ್ರರಾಜ ಮೂಬ, ಗಂಗಯ್ಯ ಗೌಡ, ನಾರ್ಣ ಸೆಟ್ಟಿ, ಅಮ್ಮು ಬಂಟ, ದೇರೆ ಪೂಜಾರಿ, ನರಿಮೊಗ್ರು; ಬೈಂಕಿ ಬಂಟ, ಇದ್ದಿಕುಂಞಿ ಯಾನೆ ಅಬ್ದುಲ್ಲ, ಕೊರಗಪ್ಪ ಪೂಜಾರಿ, ಕೊರಗಪ್ಪ ಗೌಡ, ತಿಮ್ಮಣ್ಣ ಗೌಡ, ಕನಕಮಜಲು; ಮುಂಡಾಲೆ ಸುಬ್ಬಯ್ಯ ರೈ, ಅರೈ ಗೌಡ, ಎಣ್ಮೂರು ಪಠೇಲ ಸಂಕಪ್ಪ ರೈ, ಪಟಾಜೆ ಸಂಕು ಪೂಜಾರಿ, ಬೆಳ್ಳಾರೆ; ಬಿ. ನಾರಾಯಣ ಶೇಕ, ಪಂಡಿತ; ಪಠೇಲ ಸುಬ್ರಾಯ ಭಟ್ಟ, ತಂಬಿನಮಕ್ಕಿ ಕೋಚಣ್ಣ ರೈ, ಗಣೇಶ ಸುಬ್ಬಪ್ಪಯ್ಯ, ಕಾಜಿನುಳಿ ದೇವಪ್ಪ ಗೌಡ, ಪಟ್ಟೆ ಕೊರಗ ಪೂಜಾರಿ, ಬಿರ್ಮು ಪೂಜಾರಿ, ಬೆಳ್ಳಾರೆ; ಹರ್ತಾಜೆ ಚಲ್ಲ ಗೌಡ, ಬೆದ್ರುಬೆಟ್ಟು ಕೋಟಿ ಗೌಡ, ಬಂಡಸಾಲೆ ಕುವಮಾರಯ್ಯ ಪೆರ್ಗಡೆ ಇಂದಬೆಟ್ಟು, ನುಜಿಲೆ ಹನಿಯ ಪೂಜಾರಿ, ಬಂಡಸಾಲೆ ಪದ್ಮರಾಜ ಅಜ್ರಿ, ಬಡವ ಕುಂಞಿ, ಬ್ಯಾರಿ ಪಟ್ರಮೆ, ಕೆಮ್ಮುಂಜೆ ಗೋವಿಂದ ಭಟ್ಟ, ಮೂರುವ ಗಣೇಶ ಭಟ್ಟ, ಎ. ಗುಡ್ಡಪ್ಪ ಗೌಡ, ಬಿ. ಮರಿಯ ಗೌಡ, ಬಿ. ರಾಮಚಂದ್ರ ಪ್ರಭು, ವಂಜ; ಕೆ. ಸಾಂತಪ್ಪ ಗೌಡ, ಕುದ್ಮುಂಜೆ; ಕೆ. ಪದ್ಮಯ್ಯ ಗೌಡ, ಐನ ತೊಕ್ಲು; ಎ. ದೇವಣ್ಣ ಗೌಡ, ಕೆ. ನಾಗಪ್ಪ ಗೌಡ, ಕೆ, ತಿಮ್ಮಪ್ಪ ಗೌಡ, ಯಂ. ಸುಬ್ರಾಯ ಗೌಡ, ಪಿ. ಮುಲ್ಲಣ್ಣ ಗೌಡ, ಪೂವಣಿ ಗೌಡ, ವೆಲವಂತಿಗೆ; ಕೆಡಮಗುಂಡಿ ನಾರಾಯಣ ಭಟ್ಟ, ಗುತ್ಯಡ್ಕ ಸಾಂತಪ್ಪ ಗೌಡ, ಕಡೆಕಲ್ಲು ರಾಯ ಗೌಡ, ಅಲೆಟ್ಟಿ; ಶಂಕರನಾರಾಯಣ ಬೈಪಾಡಿತ್ತಾಯ, ಕೊಲ್ಚಾರ ಅಣ್ಣು ಕೂಸ ಗೌಡ, ಬೂತಕಲ್ಲು ಕೃಷ್ಣಪ್ಪ ಗೌಡ, ವಂಜಿಕಲ್ಲು ಹರಿನಾಯ್ಕ, ಕೇಪು ಪಠೇಲ ಕುಂಞಪ್ಪ ಸೆಟ್ಟಿ, ಕೊಲ್ಲಮೊಗ್ರು ಪಠೇಲ ಕೃಷ್ಣಪ್ಪ ಗೌಡ, ಕೊಲ್ಲಮೊಗ್ರು ತಮ್ಮ ಯಾನೆ ಬಟ್ಯಪ್ಪ ಗೌಡ, ರಾಮುಕುಂಜ ಪಠೇಲ ಶ್ರೀನಿವಾಸ ಪಡ್ಯಾಯ, ಸುಬ್ರಾಯ ಗೌಡ, ಎಡಮಂಗಲ; ಕೊಪ್ಪರಿಗೆ ನಾಗಯ್ಯ ಸೆಟ್ಟಿ, ಹೊಸಾಡು; ಕಡ್ಪೆ ವೆಂಕಪ್ಪ ಸೆಟ್ಟಿ, ಪಠೇಲ ರಾಮಕೃಷ್ಣ ನಾವುಡ, ಬಂಗಾಯಿಲ್ ಕೇಳು ನಾಯರ್, ಬೇಳೂರು; ಮೆಲೊತೆ ಶ್ಯಾನುಭಾಗ ಕಣ್ಣನ್ ನಂಬಿಯಾರ್.

(ಮುಂದುವರಿಯುವುದು.)

Gala opening performance — Thursday the 26th November 1936.

Enchanting Electric Display. Gorgeous Settings. Melodious Music. Marvellous Acting.

Sri Sahitya Samrajya Nataka Mandali, Mysore

will present their mythological Masterpiece

"BHU-KAILAS"

at the Raja Rajeswari Theatre newly built on the Mangalore Maidan
on Thursday the 26th November '36 at 9-30 P. M. Sharp.

PUBLIC PATRONAGE EARNESTLY SOLICITED.

Please note that our performances are on every Tuesday, Thursday and Saturday nights and matinees on Sundays.

Booklets containing 6 tickets intended for 6 consecutive dramas are issued at a concession of 25% in the first 3 classes.

ವೈಭವಪೂರ್ವಕವಾದ ಪ್ರಾರಂಭ ಸಮಾರಂಭ — ನವಂಬರ ತಾ. ೨೬ನೇ ಗುರುವಾರ.

ಅತ್ಯಂತ ನಯನಮನೋಹರವಾದ ವಿದ್ಯುದ್ದೀಪಮಾಲೆಯ ಶೃಂಗಾರ. ವಿಸ್ಮಯಕರವಾದ ವೇಷಭೂಷಣಾದಿಗಳ ಅಲಂಕಾರ. ಮಧುರ ಸುಶ್ರಾವ್ಯ ಸಂಗೀತ.
ಅತ್ಯದ್ಭುತ ಕೌಶಲಮಯ ಕಲಾಪೂರ್ಣ ಅಭಿನಯ.

'ಶ್ರೀ ರಾಜರಾಜೇಶ್ವರೀ ಪ್ರಸೀದ'

ಶ್ರೀ ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿ, ಮೈಸೂರು,

ಇವರು,

"ಭೂ ಕೈಲಾಸ"

ಎಂಬ ಪುರಾಣಪ್ರಸಿದ್ಧವಾದ ತಮ್ಮ ಅತ್ಯುತ್ಕೃಷ್ಟ ನಾಟಕವನ್ನು

ಮಂಗಳೂರು ಮೈದಾನಿನಲ್ಲಿ ನೂತನವಾಗಿ ಕಟ್ಟಿಸಿರುವ, ಭವ್ಯವಾದ ರಾಜರಾಜೇಶ್ವರೀ ನಾಟಕಮಂದಿರದಲ್ಲಿ

ಇದೇ ನವಂಬರ ತಾ. ೨೬ನೇ ಗುರುವಾರ ರಾತ್ರಿ ಘಂಟೆ ೯-೩೦ಕ್ಕೆ ಸರಿಯಾಗಿ ಅಭಿನಯಿಸುವರು.

ಮಹನೀಯರು ಪ್ರೋತ್ಸಾಹಿಸಬೇಕಾಗಿ ಸವಿನಯ ವಿನಂತಿ.

ನಮ್ಮ ನಾಟಕಗಳು ಪ್ರತಿ ಮಂಗಳವಾರ, ಗುರುವಾರ, ಶನಿವಾರ ರಾತ್ರಿಗಳಲ್ಲಿಯೂ, ಮೆಟಿನಿಗಳು ಆದಿತ್ಯವಾರಗಳಲ್ಲಿಯೂ ಇರುತ್ತವೆ.

ಒಂದಾಟವೂ ಬಿಡದೆ ನೋಡುವ 6 ನಾಟಕಗಳಿಗೆ ಉಪಯೋಗಿಸಲ್ಪಡುವ 6 ಟಿಕೇಟುಗಳನ್ನೊಳಗೊಂಡ ರಿಯಾಯತಿ ದರದ ಟಿಕೇಟು ಪುಸ್ತಕಗಳು ಮೊದಲನೆ 3 ತರಗತಿಗಳಲ್ಲಿ ಶೇಕಡಾ 25ರಂತೆ ರಿಯಾಯತಿ ಮೇಲೆ ದೊರೆಯುವುವು.

ಕರ್ಣಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರಿಗೊಂದು ಬಹಿರಂಗ ಪತ್ರ.

ಅಣ್ಣಗಳಿರಾ!

೧. ನಮ್ಮ ಜಿಲ್ಲಾದೊಳಗೆ ನಡೆಯತಕ್ಕ ಚುನಾವಣೆಗಳಲ್ಲಿ ತಾವು ಭಾಗ ವಹಿಸಬೇಕೆಂದು ನಿಶ್ಚಯಿಸಿರುವದೂ ಹಾಗೂ ತಮ್ಮ ವತಿಯಿಂದ ಹುರಿಯಾಳುಗಳನ್ನು ನಿಲ್ಲಿಸಿರುವದೂ ಫಿಜವೇ?

೨. ಕಳೆದ ಡಿ. ಬೋರ್ಡ್ ಚುನಾವಣೆಯಲ್ಲಿ ಸಿಕ್ಕಿ ಸಿಕ್ಕಿದವರನ್ನೆಲ್ಲಾ ಕೊಂಗ್ರೆಸು ಉಮೇದುವಾರರನ್ನಾಗಿ ಮಾಡಿಸುದರಿಂದಲೂ, ಕಾಂಗ್ರೆಸಿಗೆ ನಿಜವಾಗಿ ಸೇರದವರನ್ನೇ, ಅಧ್ಯಕ್ಷ ತನದ ಚುನಾವಣೆಗೆ ನಿಲ್ಲಿಸಿದುದರಿಂದಲೂ ಇಲ್ಲಿಯ ಕೊಂಗ್ರೆಸಿನವರನ್ನಿಸಿಕೊಳ್ಳುವವರು ತಮ್ಮ ಮುಖಕ್ಕೆ ಮಸಿ ಬಳಿದುಕೊಂಡುದು ತಮಗೆ ಮರೆತಿಲ್ಲವಷ್ಟೇ.

೩. ಇಂದು ಕೊಂಗ್ರೆಸು ಹುರಿಯಾಳುಗಳಾಗುವದಕ್ಕೆ ಜೈಲುವಾಸವಾಗಲಿ, ಖಾದಿ ಧಾರಣೆಯಾಗಲಿ, ಕಾಂಗ್ರೆಸ್ ಕಾರ್ಯಕ್ರಮದಲ್ಲಿ ವಿಶ್ವಾಸವಾಗಲಿ ಬೇಕಿಲ್ಲವೆನ್ನುವದು ನಿಜವೇ? ಬರೇ ನಾಕಾಣೆಯ ಚಕ್ರವೊಂದು ತೆರುವುದೇ ಯೋಗ್ಯತೆಯೇ? ಅಥವಾ ದುಡ್ಡಿನ ಬಲ, ಜಾನ್ಸ್ ಆಫ್ ಸಕ್ಸಸ್—ಇವೇ ಇಂದು ಕಾಂಗ್ರೆಸಿಗೆ ಬೇಕಾಗಿದೆಯೇ?

೪. ಅದಿರಲಿ. ತಮ್ಮ ಪುಡಾರಿಗಳು ನಮ್ಮ ಜಿಲ್ಲಾದೊಳಗೆ ಸಂಚಾರ ನಡಿಸಿರುವರಷ್ಟೇ; ಸ್ವತಂತ್ರವಾಗಿ ಏನಾದರೂ ವಿಚಾರಗಳನ್ನು ನಡಿಸಿರುವರೇ? ಜನರಿಗೆ ತಾಜಾ ಕೊಂಗ್ರೆಸಿನವರ ಮೇಲೆ ಅಭಿಮಾನವೆಷ್ಟು, ಗಿಲೀಟು ಕೊಂಗ್ರೆಸಿನವರ ಮೇಲೆ ಅಸೂಯೆ ಎಷ್ಟು ಎಂದು ತಿಳಕೊಂಡಿರುವಿರಾ?

೫. ಅನೇಕ ಭಾಗಗಳಲ್ಲಿ ಕೊಂಗ್ರೆಸ್ ಉಮೇದುವಾರರ ಪಟ್ಟಿಗಳು ಪ್ರಕಟವಾದರೂ ತಮ್ಮ ಜಿಲ್ಲಾದ ಪಟ್ಟಿ ಮಾತ್ರ ಇನ್ನೂ ಹೊರಗೆ ಬಾರದಿರಲು ಕಾರಣವೇನು? ಇದರ ಅಂತರೀಕ ಮರ್ಮವಾದರೂ ಏನು?

೬. ಭಾರತಮಾತೆಯ ಸೇವೆಗಾಗಿ ತಮ್ಮ ಸರ್ವಸ್ವವನ್ನೂ ಸಮರ್ಪಿಸಿರುವ ಹಾಗೂ ಇಂದಿಗೂ ದುಡಿಯುತ್ತಿರುವ ಶ್ರೀಮತಿ ಕನುಲಾದೇವಿ ಮತ್ತು ದೇಶಭಕ್ತ ಕಾರ್ನಾಡು ಸದಾಶಿವರಾಯರಂಥವರಿಗೆ ಇಂದಿನ ಚುನಾವಣೆಯ ಕ್ಷೇತ್ರದಲ್ಲಿ ಸ್ಥಾನಗಳನ್ನು ಪಡೆಯುವಷ್ಟು ಭಾಗ್ಯ ವಿಲ್ಲವೆಂಬುದು ನಿಜವೇ? ಅದೇನು, ಇಂಥಾ ಭಕ್ತರುಗಳಲ್ಲಿ ತಮಗೆ ವಿಶ್ವಾಸವು ಕಡಿಮೆಯಾಗಿದೆಯೇ? ಯಾ ಇಂಥವರು ಕಾಂಗ್ರೆಸು ಟಿಕೇಟಿನ ಮೇಲೆ ನಿಂತರೆ ಇವರಿಗೆ ಜನತೆಯ ಬೆಂಬಲವಿಲ್ಲವೆಂಬುದು ತಮ್ಮ ಅಪಧೈರ್ಯವೇ? ಕಾಂಗ್ರೆಸಿನಲ್ಲಿ ಅಂದಿನಿಂದಲೂ ಬೆರೆತಿರುವ ಇಂಥವರಿಗೇ ಚುನಾವಣೆಯಲ್ಲಿ ಜಯವು ದೊರಕದಿದ್ದರೆ, ಚುನಾವಣೆಗಾಗಿ ಮಾತ್ರ ಕೊಂಗ್ರೆಸದೊಳಗೆ ಸೇರುವವರಿಗೆ ಯಶಸ್ಸು ಬಂದೀತೇ? ಅಲ್ಲ, ಕಾಂಗ್ರೆಸು ಗೆದ್ದವರ ಕಡೆಯೇ?

೭. ಮಾನ್ಯ ಡಾ. ಯು. ರಾಮರಾಯರು ಕಾಂಗ್ರೆಸು ವತಿಯಿಂದ ಅಪ್ಪರ್ ಚೇಂಬರಿಗೆ ಒಬ್ಬ ಹುರಿಯಾಳುಗ್ಗಾಗಿದ್ದರೆ? ಕರ್ಣಾಟಕ ಏಕೀಕರಣಕ್ಕಾಗಿ ಇವರು ಎಷ್ಟು ಪ್ರಯತ್ನಪಡುತ್ತಿರುವರು ಎಂಬುದನ್ನು ಮರೆತಿರಾ? ಅದೇನು, ಇವರ ಕಡೆಯವರೊಬ್ಬರ ಪರ್ತನೆಗಾಗಿ ಇವರ ಉಮೇದುವಾರಿಕೆಗೆ ಕಾಂಗ್ರೆಸಿನ ಬೆಂಬಲವಿಲ್ಲವೆನ್ನುವದು ನಿಜವೇ? ಹಾಗೂ ಇವರು ಸ್ವತಂತ್ರ ಉಮೇದುವಾರರಿಗಾದರೂ ತನ್ನ ಸಹಾಯವನ್ನೀಯುಬಹುದೆಂಬದು ತಮ್ಮ ಊಹೆಯೇ?

೮. ದ. ಕ. ಜಿಲ್ಲಾ ಬೋರ್ಡಿನೊಳಗೆ ಕಾಂಗ್ರೆಸು ಪಾರ್ಟಿಯೊಂಬುದೊಂದಿದೆಯೇ? ಅದಕ್ಕೆ ಶ್ರೀ. ವೆಂ. ಶಿವರಾಯರು ಲೀಡರರೇ? ಇವರು ಕಾಂಗ್ರೆಸು ವತಿಯಿಂದ ಹುರಿಯಾಳು ಎಂದು ಹಿಂದೊಮ್ಮೆ ಪ್ರಕಟವಾಗಿತ್ತಷ್ಟೆ. ಹಾಗಾದರೆ, ಇವರು ತಮ್ಮ ಉಮೇದುವಾರಿಕೆಯನ್ನು ಹಿಂತೆಗೆದಿರುವರೇ? ಒಂದು ಪಾರ್ಟಿಯಲ್ಲಿ ಇವರಿಗೆ ಲೀಡರಾಗಲು ಯೋಗ್ಯತೆ ಇದ್ದರೆ, ಇನ್ನೊಂದೆಡೆಯಲ್ಲಿ ಇವರು ಉಮೇದುವಾರರಾಗಲು ಅಯೋಗ್ಯರೇ? ಇದೇನು ಚೋದ್ಯ? ಇದರ ಕಾರಣವೇನು?

೯. ಇಡೀ ಪಾರ್ಟಿಯ 'ವ್ಹಿಪ್'ರನ್ನು ಈ ಸ್ಥಾನಕ್ಕೆ ಆರಿಸಿರುವಿರೆಂಬದು ನಿಜವೇ? ಇವರು ಕಾಂಗ್ರೆಸಿಗಾಗಿ ಮಾಡಿರುವ ಮಹತ್ಕಾರ್ಯಗಳೇನೆಂದು ವರ್ಣಿಸುವಿರಾ?

೧೦. ಮಂಗಳೂರು ದಿವಿಜನಿನ ಉಮೇದುವಾರರಾಗಿ ತಾವು ಮಿ. ಬಿ. ವೆಂಕಟ್ರಾಯ ಬಾಳಿಗರನ್ನು ಆರಿಸಿರುವಿರೆಂಬದು ನಿಜವೇ? ಇವರು ಕಾಂಗ್ರೆಸಿಗೆ ಸೇರಿದುದು ಎಂದು? ಇವರು ಈ ವರೆಗೆ ಕಾಂಗ್ರೆಸಿಗೆ ಮಾಡಿರುವ ಸಹಾಯವೆಷ್ಟು? ಇವರು ಸ್ವಲ್ಪ ಸಮಯದ ಹಿಂದೆ ಸರಕಾರಿ ವಕೀಲರಾಗಿದ್ದರೆಂಬುದು ತಮಗೆ ತಿಳಿದಿದೆಯೇ?

೧೧. ಒಂದು ವೇಳೆ, ಕಾಂಗ್ರೆಸದ ಮೇಲೆ ಪೂರ್ಣ ಅಭಿಮಾನವುಳ್ಳ ಹಾಗೂ ಕಾಂಗ್ರೆಸ ಕಾರ್ಯಕ್ರಮವನ್ನು ಅನುಸರ್ತಿಸುವ ಆದರೆ ಕಾರಣಾಂತರಗಳಿಂದ ಬಹಿರಂಗವಾಗಿ ಕಾಂಗ್ರೆಸ ಟಿಕೇಟಿನ ಮೇಲೆ ನಿಲ್ಲಲು ಸಾಧ್ಯವಿಲ್ಲದೆ ಸ್ವತಂತ್ರರಾಗಿ ನಿಲ್ಲುವ ಉಮೇದುವಾರರಿಗೆ ಕಾಂಗ್ರೆಸಿನವರು ಎದುರಿಸುವದು ಅಷ್ಟೊಂದು ಸಮಂಜಸವೇ? ಮೊನ್ನೆ ಮೊನ್ನೆ ಬಳ್ಳಾರಿಯಲ್ಲಿ ನಡೆದ ಚುನಾವಣೆಯು ತಮ್ಮ ಸ್ಫೂರ್ತಿಪಥದಲ್ಲಿದೆಯಷ್ಟೆ?

೧೨. ಪುತ್ತೂರು ಸರ್ಕಲಿಗೆ ರಾ. ಕೋ. ರಾ. ಕಾರಂತರನ್ನು ಆರಿಸಿರುವಿರೆಂಬುದು ನಿಜವೇ? ರಾ. ಕಾರಂತರು ಅಂದಿನಿಂದಲೂ ಕಾಂಗ್ರೆಸಿಗಾಗಿ ದುಡಿಯುತ್ತಿರುವವರು ಹಾಗೂ ಹಿಂದೊಮ್ಮೆ ಕಾಂಗ್ರೆಸಿನ ಅನುಜ್ಞೆಯಂತೆ ನ್ಯಾಯವಿಧಾಯಕ ಸಭೆಯಿಂದ ಹೊರ ಬಂದವರು. ಇವರಿಗೆ ಒಂದು ಸ್ಥಾನವು ಸಿಗಬೇಕಾದುದು ಅವಶ್ಯವು. ಆದರೆ ಇವರಿಗೆ ಕುಂದಾಪುರ ಡಿವಿಜನಿಗೆ ಆರಿಸಿದರೆ ಎಷ್ಟೊಂದು ಉತ್ತಮವಿತ್ತು! ಇದನ್ನು ಮನಗಂಡಿರುವಿರಾ?

೧೩. ಶ್ರೀ. ಜೆ. ನಾಗಣ್ಣ ಹೆಗ್ಗಡೆಯವರೂ ಹಿಂದೆ ಕಾಂಗ್ರೆಸು ಅನುಜ್ಞೆಗನುಸಾರವಾಗಿ ನ್ಯಾಯವಿಧಾಯಕ ಸಭೆಯಿಂದ ಹೊರ ಬಂದಿರುವವರೆಂಬುದನ್ನು ಬಲ್ಲಿರಷ್ಟೆ. ಇವರೂ ಯಾವದಾದರೂ ಸ್ಥಾನಕ್ಕೆ ಉಮೇದುವಾರರಾಗಿದ್ದಿರೇ? ಹಾಗಾದರೆ ಇವರಿಗೆ ತಮ್ಮಿಂದ ಸಿಕ್ಕಿದ ಪುರಸ್ಕಾರವೇನು? ಇವರಿಗೊಂದು 'ಚಾನ್ಸ್'ನ್ನು ತಾವು ಕೊಡಬೇಕಾದುದು ನ್ಯಾಯಸಮ್ಮತವಲ್ಲವೇ?

೧೪. ಇನ್ನುಳಿದುದು ಕುಂದಾಪುರ ಸರ್ಕಲು. ಇದಕ್ಕೆ ತಾವು ಮೊಸ್ತಿನ ಜಿಲ್ಲಾ ಬೋರ್ಡ್ ಅಧ್ಯಕ್ಷರ ಚುನಾವಣೆಯಲ್ಲಿ ಕೊಂಗ್ರೆಸಿನ ಹೆಸರಲ್ಲಿ ಸೋತ ಶ್ರೀ. ಎ. ಬಿ. ಶೆಟ್ಟಿ, ಎಂ. ಎಲ್. ಸಿ.ಯವರನ್ನೆ ಸರ್ವಾನುಮತದಿಂದ ಆರಿಸಿರುವಿರೆಂಬುದು ಸುಳ್ಳಲ್ಲವಷ್ಟೆ? ನಿಜವಾಗಿಯೂ ತಾವು ಆರಿಸಿರುವ ಹುರಿಯಾಳುಗಳಲ್ಲಿ ಇವರಷ್ಟು ಅನುಭವಸ್ಥರು ಯಾರೂ ಇಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಕಾರಣ ಇವರು ೮-೧೦ ವರ್ಷಗಳಿಂದ ಎಂ. ಎಲ್. ಸಿ. ಗಳಾಗಿರುವರು. ಜಿ. ಬೋ. ಅಧ್ಯಕ್ಷರ ಪದವಿಯನ್ನೇ ಇವರಿಗೆ ಗುತ್ತಿಗೆಗೆ ಕೊಡಬೇಕಿತ್ತು. ಅದಾಗಲಿಲ್ಲವೆನ್ನಿ. ಈಗ ಇದನ್ನಾದರೂ ಕೊಂಗ್ರೆಸಿನವರೆ ಕೊಟ್ಟು ಬಿಡಲಿ! ಅಂದರೆ, ಕುಂದಾಪುರ ಸರ್ಕಲಿನಲ್ಲಿ ಹೊಸಬರಿಗೆ ಬರಗಾಲವೆಂದಾದ ಮೇಲೆ, ಮಂಗಳೂರಿನವರನ್ನು ತರದೇ ಕಾಂಗ್ರೆಸಿಗೆ ನಿರ್ವಾಹವುಂಟೇ? ಜಿಲ್ಲಾ ಬೋರ್ಡ್ ಅಧ್ಯಕ್ಷ ಚುನಾವಣೆಯಲ್ಲಿ ಇವರು ಸೋಲಲು ಮುಖ್ಯ ಕಾರಣವೇನೆಂದು ಕಂಡುಕೊಂಡಿರುವಿರಾ? ಮದ್ರಾಸು ನ್ಯಾಯವಿಧಾಯಕ ಸಭೆಯಲ್ಲೀಗ ಕಾಂಗ್ರೆಸು ಪಾರ್ಟಿಯೆಂಬುದೊಂದಿದೆಯಷ್ಟೆ. ಇವರು ಅದರೊಡನೆ ಸೇರಿರುವರೇ? ಸೌ. ರುಕ್ಮಿಣಿ ಲಕ್ಷ್ಮಿಪತಿಯವರ ಠರಾವು ಬರುವಂದು ಇವರು ಮಾಡಿದುದೇನೆಂದು ತಿಳಿಸುವಿರಾ? ಅದಿರಲಿ; ತಮಿಳು ನಾಡಿನವರು ಕಾಂಗ್ರೆಸು ಉಮೇದುವಾರರು ತಮಗೆ ಸಿಕ್ಕಿರುವ ಸರಕಾರದ ಬಿರುದುಬಾವಲಿಗಳನ್ನು ತ್ಯಜಿಸಬೇಕೆಂದು ನಿರ್ಧರಿಸಿರುವರಷ್ಟೆ. ಶ್ರೀಮಾನ್ ಸೆಟ್ಟರು ಕೈಸರ್-ಈ-ಹಿಂದ್ ಮೆಡಲು ಮತ್ತು ಸಿಲ್ವರ್ ಜುಬಿಲಿ ಮೆಡಲ್ ಧರಿಸಿದುದನ್ನು ಕಂಡ ನೆನಪು. ಈ ಮೆಡಲುಗಳು ಇನ್ನೂ ಇವರೊಡನೆ ಇವೆಯಷ್ಟೆ. ಇವುಗಳ ವಿಚಾರವೇನು? ಇವರಿಗೂ ದಿ. ಬ. ಹಗ್ಗಡೆಯವರಿಗೂ ಬಹಳ ಕಾಲದಿಂದ ವೈಯಕ್ತಿಕ ಭೇದಭಾವಗಳಿರುವದು ಸರಿಯಷ್ಟೆ. ಇದನ್ನು ತಿಳಿದೂ ಕಾಂಗ್ರೆಸಿನವರು 'ಮುಯ್ಯಿಗೆ ಮುಯ್ಯಿ ತೀರಿಸಲೆಂಬಂತೆ' ಇನ್ನೂ ಇದಕ್ಕೆ ಮದ್ದತಿಯನ್ನು ಕೊಡುವದು ರಾಷ್ಟ್ರಹಿತ ಘೋರಣೆಗೆ ಸರಿಯೇ? ಅಧಿಕಾರಸ್ವೀಕಾರದ ವಿಷಯದಲ್ಲಿ ಇವರ ಅಭಿಪ್ರಾಯವೇನೆಂದು ತಿಳಿಸಬಲ್ಲಿರಾ?

೧೫. ಶ್ರೀ. ಉ. ಚಾ. ಸು. ಭಟ್ಟರಿಗೇನು ತ್ರಿಶಂಕು ಮಾಡಿರುವಿರಾ? ಇವರು ಈ ವರೆಗೆ ಕೌನ್ಸಿಲಿನಲ್ಲಿ ಮಾಡಿದ ದೇಶಸೇವೆಯೆಲ್ಲ ನೀರ ಮೇಲಣ ಹೋಮವೇ? ಇವರಿಗೆ ಒಂದು ಸ್ಥಾನವನ್ನು ಕೂಡ ಕಲ್ಪಿಸಿ ಕೊಡುವಷ್ಟು ದಯಾಭಾವವು ಕೊಂಗ್ರೆಸಿನವರಿಗೆ ಇಲ್ಲವಾಯಿತಲ್ಲಾ! ಯಾಕೆ?

೧೬. ಇಂಡಿಯನ್ ಕ್ರಿಶ್ಚಿಯನರ ಫರವಾಗಿಯೂ ತಮ್ಮ ಹುರಿಯಾಳನ್ನಾರಿಸಿರುವಿರೆಂಬುದು ನಿಜವೇ?-ನಮ್ಮ ಜಿಲ್ಲೆಯ ಇಂಡಿಯನ್ ಕ್ರಿಶ್ಚಿಯನರಲ್ಲಿ ಒಂದೇ ಸವನೇ ಇಷ್ಟೊಂದು ಕಾಂಗ್ರೆಸ್ ಭಕ್ತಿಯನ್ನು ಹುಟ್ಟಿಸಿದವರು ತಾವು ನಿಜವಾಗಿಯೂ ಕಾರಣಿಕ ಪುರುಷರು.

೧೭. ಹಿಂದುಳಿದ ಸಮಾಜದ ಪ್ರತಿನಿಧಿಗಳ ವಿಚಾರವಾಗಿ ಇನ್ನೂ ಹಿಂದುಳಿದಿರುವಿರಾ? ಅದೇನು ಯಾರಾದರೂ ನಿರಕ್ಷರಕುಕ್ಷಿಗಳು ತಮಗಿನ್ನೂ ಸಿಕ್ಕಿಲ್ಲವೇ?

೧೮. ಮಹನೀಯರ ವಿಚಾರವಾಗಿ ತಾಟಸ್ಥ್ಯವೇನು? ಕಾಂಗ್ರೆಸ್ ಟಿಕೇಟಿನ ಮೇಲೆ ನಿಲ್ಲಲು ಯಾರೂ ಮುಂದೆ ಬಂದಿಲ್ಲವೇ? ಅಲ್ಲ ತಮಗೆ ಈ ಟಿಕೇಟನ್ನು ಪಡೆಯಲು ಯಾರೂ ಬೇಡವೇ?

ಅಂತೂ ಒಮ್ಮೆಗೆ ಹುರಿಯಾಳುಗಳನ್ನು ಆರಿಸಿ ತಮ್ಮ ಭಾಗದ ಕಾರ್ಯವನ್ನು ಪೂರೈಸಿದಿರೆನ್ನುವ. ನಾಳೆ ಕಾಂಗ್ರೆಸಿನವರು ಪುನಃ ಅಸಹಕಾರ ಚಳವಳವನ್ನು ಹೂಡಿದರೆಂದರೆ ಆಗ ನಾವಲ್ಲ ವೋಯ್ ಕಾಂಗ್ರೆಸು-ನಾವೆಂದೂ ರಾಜಿನಾಮೆ ಬರೆದು ಹಾಕಿದ್ದೇವೆ'—ಎಂದು ಹೇಳುವ ತಮ್ಮ ಹುರಿಯಾಳುಗಳೆಷ್ಟು ಮಂದಿ?

ಆದುದರಿಂದ ಕ. ಪ್ರಾ. ಕೊ. ಕಮಿಟಿಯವರೇ! ತಾವು ಈ ಕಾರ್ಯದಲ್ಲಿ ಕೈ ಹಾಕುವ ಮೊದಲು ಮೂರು ಮೂರು ಬಾರಿ ಆಲೋಚಿಸಿನೋಡಿ. ರಾಷ್ಟ್ರಹಿತವನ್ನೂ, ದೇಶದ ಕಲ್ಯಾಣವನ್ನೂ. ಕಾಂಗ್ರೆಸಿನ ಅಭಿಮಾನವನ್ನೂ ತಮ್ಮ ಮುಂದಿಟ್ಟುಕೊಳ್ಳಿ. ಸ್ವತಂತ್ರರಾಗಿ ವರ್ತಿಸಿರಿ. ಸುಮ್ಮನೆ ಸಿಕ್ಕ ಸಿಕ್ಕವರ ಸವಿಮಾತುಗಳಿಗೆ ಸೋತು ಕರ್ಣಾಟಕದ ಗೌರವವನ್ನು ಕಡಿಮೆ ಮಾಡಬೇಡಿರಿ!

ವೋಟರ.

ಪಿತ್ತಕೋಶವನ್ನು ಕಲೋಮಲ್ ಇಲ್ಲದೆ-ಎಚ್ಚರಿಸಿರಿ.

ಮೋಟಾರು ಗಾಡಿಯನ್ನು ನೂಕುವಷ್ಟು ಉತ್ಸಾಹ ಉಂಟಾಗುವುದು.

ಪ್ರತಿ ದಿನವೂ ಎರಡು ಪೈಂಟನಷ್ಟು ಪಿತ್ತರಸವು ಪಿತ್ತಕೋಶದಿಂದ ಜೀರ್ಣಕೋಶಕ್ಕೆ ಹರಿಯಿಬೇಕು. ಹೀಗೆ ಹರಿಯದಿದ್ದರೆ, ನಿಮ್ಮ ಆಹಾರವು ಜೀರ್ಣಿಸದೆ ಮಲಕೋಶದಲ್ಲಿ ಕೊಳೆಯುತ್ತದೆ. ಇದರಿಂದ ಹೊಟ್ಟೆಯಲ್ಲಿ ವಾಯು ಉತ್ಪತ್ತಿಯಾಗಿ ಮಲಬದ್ಧತೆಯುಂಟಾಗುತ್ತದೆ. ನಿಮ್ಮ ಶರೀರ ಯಾಂತ್ರನೆಲ್ಲಾ ವಿಷಮಯವಾಗಿ, ಪ್ರಪಂಚವೇ ಬೇಡವೆಂಬ ಮನೋ ಜಿಗುಪ್ಸೆಯುಂಟಾಗುತ್ತದೆ.

ಲವಣಗಳು, ರುಚಿಕರವಾದ ಸೌಮ್ಯ ಮತ್ತು ಕಹಿನಕರ ಜುಲಾಪುಗಳು, ಇವೆಲ್ಲಾ ತಾತ್ಕಾಲಿಕ ಕ್ಷೇಮಮಾತ್ರ ಉಪಯೋಗವಾದವೆಗಳಲ್ಲದೆ ಮೂಲ ಕಾರಣವನ್ನು ತಾಕುವುದಿಲ್ಲ. ಆರೀತಿ ಮಾಡಬೇಕಾದರೆ ಜಗತ್ಪ್ರಸಿದ್ಧವಾದ "ಕಾರ್ಟರ್ಸ್ ಲಿಟಲ್ ಲಿವರ್ ಪಿಲ್ಸ್"ಗಳು ಮೇಲೆ ಹೇಳಿದ ತೆರೆಂದು ಪಿತ್ತವನ್ನು ತಪ್ಪದೆ ಸರಿಯಾಗಿ ಉತ್ಪತ್ತಿಮಾಡುತ್ತದೆ. ನಿರುಪಾಯ, ಸೌಮ್ಯ ಮತ್ತು ಪೂರ್ಣಗುಣಕಾರಿಯಿದೆ. ಯಾವಾಗಲೂ ಕಾರ್ಟರ್ಸ್ ಲಿಟಲ್ ಲಿವರ್ ಪಿಲ್ಸ್‌ಗಳನ್ನೇ ಕೇಳಿರಿ. ಪ್ರತಿಯೊಂದು ಕೊಪ್ಪು ಪೊಟ್ಟಣದ ಮೇಲೆ ಕಾರ್ಟರರ ಹೆಸರನ್ನು ನೋಡಿರಿ ಬೆಲೆ ೧೦ ಆಣೆ.

WANTED

Canvassers on Rs. 30/- for South and North Canara and Malabar for World-Wide Assurance Ltd., to push on Daily Collection Scheme with FREE Clocks.

Persons interested in Fire, Marine and Motor Insurance may be pleased to consult.

The Pioneer General Insurance & Mercantile Agencies of West Coast,
Car Street, MANGALORE.

ಜಯಲಕ್ಷ್ಮೀ ಬೇಂಕ್, ಲಿಮಿಟೆಡ್, ಮುಂಗಳೂರು.

ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಈ ಮೇಲಿನ ಬೇಂಕಿನಿಂದ ನಗದ ಈಡಿನ ಮೇಲೆ ಸಾಲಪಡಕೊಂಡ ನಂತ್ರ ಸದ್ರಿ ಸಾಲದ ಬಡ್ಡಿಯನ್ನು ವ ಅಸ್ಸು ಹಣವನ್ನು ವ್ಯಾದೆ ಪ್ರಕಾರ ಕೊಡದೇ ಇದ್ದದ್ದರಿಂದ ಅವರಿಗೆ ಬಿಟ್ಟ ರಿಜಿಸ್ತ್ರಿ ನೋಟೀಸುಗಳು ಅವರಿಗೆ ಜ್ಯಾರಿಯಾಗದೇ ನಮಗೆ ವಾಪಾಸು ಬಂದಿರುತ್ತವೆ. ಆದುದರಿಂದ ಸದ್ರಿಯವರು ಈಡಿಟ್ಟ ನಗಗಳು ತಾ. 5-12-'36ರಲ್ಲು ಶನಿವಾರ ಮಧ್ಯಾಹ್ನ 2 ಘಂಟೆಗೆ ಯಾ ಅನಂತರ ನಮಗೆ ಯುಕ್ತ ಕಂಡ ತಾರೀಕಿನಲ್ಲಿ, ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡೋಣಾಗುವುದು ಎಂಬುದನ್ನು ಈ ಮೂಲಕ ತಿಳಿಸಿರುತ್ತದೆ.

ಸಾಲದ ನಂಬ್ರ.	ಸಾಲಗಾರರ ಹೆಸರು.	ಮೊಬಲಗು ರೂ.
2257/32.	ಅಮ್ಮುಂಜೆ ಕೊರಗ ಸೆಟ್ಟಿ, ಕುಂಞ ಸೆಟ್ಟಿಯ ಮಗ, ಅಮ್ಮುಂಜೆ ಗ್ರಾಮ, ಗುರುಪುರ ಪೋಸ್ಟು.	50/—
2650/32.	ಕಿಂಞಂಣ ಭಂಡಾರಿ, ಸಂಕಪ್ಪ ಭಂಡಾರಿಯ ಸಹೋದರ, ಕಯಾರ ಗ್ರಾಮ, ಕಾಸರಗೋಡು ಪೋಸ್ಟು.	110/—
234/33.	ಲಕ್ಷ್ಮೀ ಹೆಂಗ್ಸು, ಖಾವರ್ತಿ ಮಗಳು, ಖಾಂಡೇಶ್ವರ, ಮುಂಗಳೂರು.	15/—
1337/33.	ಕಿರಾಲಿ ಕಾಂತಪ್ಪ ಸೆಟ್ಟಿ, ಉಗ್ಗಪ್ಪ ಸೆಟ್ಟಿ ಮಗ, ಬೇಸಾಯಗಾರ, ಬೆಳ್ಳೂರ ಗ್ರಾಮ, ಬಂಟ್ವಾಳ ಪೋಸ್ಟು.	100/—
2700/33.	ಕುಡ್ಲಿ ಶೇಷಗಿರಿ ಶೆಣೈ, ಜಿರ್ದಷ್ಟ್ ಶ್ಯಾನುಭಾಗರ ಮಗ, ಸಾಹುಕಾರ, ಬಸವನಗುಡಿ ರಸ್ತೆ, ಪಾಸಸ್ಥಳ ಗದ್ದೆಕೇರಿ, ಮಂಗಳೂರು.	125/—
489/34.	ಅಳ್ಳಾಳ ವೆಂಕಿದಿನೆ ಬ್ಯಾರಿ, ಇಮಾಲಿ ಬ್ಯಾರಿ ಮಗ, ಬೇಸಾಯಗಾರ, ಅಳ್ಳಾಳ ಗ್ರಾಮ, ಫರೇಂಗಿಪೇಟೆ ಪೋಸ್ಟು.	30/—
560/34.	ಕುತ್ತಾರ ಗುತ್ತು ಸಂಕಪ್ಪ ಬಲ್ಲಾಳ, ಬಡ್ಡು ರೈ ಅಳಿಯ, ಬೇಸಾಯಗಾರ, ಮುನ್ನೂರು ಗ್ರಾಮ, ಉಳ್ಳಾಲ ಪೋಸ್ಟು.	20/—
1724/34.	ಎಸ್. ರಾಮಂಣ ಕಂಬ್ಳಿ, ನಾರಾಯಣ ಸೆಟ್ಟಿ ಅಳಿಯ, ಬೇಸಾಯಗಾರ, ಕುರಿಯಾಲ್ ಗ್ರಾಮ, ಬಂಟ್ವಾಳ ಪೋಸ್ಟು.	8/—

ಜಯಲಕ್ಷ್ಮೀ ಬೇಂಕ್, ಲಿಮಿಟೆಡ್,
ಮುಂಗಳೂರು, 19-11-'36.

(*Sd.*) **M. Ganesa Rau,**
ಸೆಕ್ರೆಟರಿ.

WANTED AGENTS

WORLD-WIDE ASSURANCE LTD

109 PARSI BAZAR STREET FORT BOMBAY.

(Established on Sound Foundation)



CHILDREN'S OPTION POLICY
FEMALE INSURANCE
(Without Extra)
DAILY PREMIUM PLAN
(Clock Scheme)

Get FREE WORLD WIDE SAVING CLOCK

Wanted Agents & Canvassers for
South & North Kanara, Malabar, Mysore State & Coorg, on lucrative terms.

For Particulars Please Apply to the Chief Agents:—

The Pioneer General Insurance & Mercantile Agencies of West Coast,
CAR STREET, MANGALORE, S. K.
OR
The Managers,
The World-Wide Assurance Ltd., Fort, Bombay.

ವಿಶ್ವವಿಚಾರ

(ವಿಮರ್ಶನ ಪತ್ರ)

ವಾರ್ಸೆಲದ ಒಪ್ಪಂದ ಹರಿದುದು:— ವಾರ್ಸೆಲದ ಒಪ್ಪಂದದ ಶರ್ತಗಳನ್ನು ಒಂದೊಂದಾಗಿ ಜರ್ಮನಿ ಮುರಿಯುತ್ತಲೆ ಇತ್ತು. ಈಗ ಅಳಿದುಳಿದ ಇನ್ನೊಂದು ಶರ್ತವನ್ನು ಅದು ಮುರಿದಿದೆ. ಜರ್ಮನ ರಾಜ್ಯವನ್ನು ಹಾದು ಹೋಗುವ ನದಿಗಳಲ್ಲಿ ಸುತ್ತಮುತ್ತಲಿನ ಇತರ ರಾಜ್ಯಗಳ ಹಡಗುಗಳ ಚಲಾವಣೆಗೆ ಜರ್ಮನಿಯು ಆಕ್ಷೇಪಿಸ ಕೂಡದು ಎಂದು ಶರ್ತವಿತ್ತು. ಅದನ್ನು ಉಲ್ಲಂಘಿಸಿ ಜರ್ಮನಿಗೆ ಎದುರಾಳಿಗಳಾಗಿ ನಿಲ್ಲುವ ಹಡಗುಗಳ ಚಲಾವಣೆಗೆ ತಡೆಹಾಕುವ ಅಧಿಕಾರ ತಮಗೆ ಇದೆ ಎಂದು ಜರ್ಮನರು ಪ್ರಕಟಿಸಿದ್ದಾರೆ. ಇದರಿಂದ ವಾರ್ಸೆಲದ ಒಪ್ಪಂದವನ್ನು ತೀರಾ ಹರಿದು ಬಿಟ್ಟಂತೆಯೇ ಸರಿ. ಸ್ಪೇನ; ಇಲ್ಲಿಯ ದಂಗೆ ಇನ್ನೂ ನಿಲ್ಲಲಿಲ್ಲ. ಸ್ಪೇನದ ರಾಜಧಾನಿಯಾದ ಮೆಡ್ರಿಡದ ಸುತ್ತಲೂ ಈಗ ಯುದ್ಧ ನಡೆಯುತ್ತಿದೆ. ದಂಗೆಗಾರರಿಗೆ ಆಗಲಿ ಸ್ಪೇನದ ಸರಕಾರಕ್ಕಾಗಲಿ ಸಹಾಯ ಮಾಡಬಾರದು, ಮಾಡಿದ ರುಜುವಾತು ಸಿಕ್ಕಿದರೆ ಅಂಥ ರಾಜ್ಯಕ್ಕೆ ತಕ್ಕ ಶಾಸ್ತಿ ಮಾಡಬೇಕು ಎಂದು ಹಲವು ತಟಸ್ಥರಾಜ್ಯಗಳ ಪ್ರತಿನಿಧಿಗಳ ಒಂದು ಕಮ್ಮಿಟಿಯು ಲಂಡನಿನಲ್ಲಿ ಕುಳಿತುಕೊಂಡು ರುಜುವಾತು ಸಂಗ್ರಹಿಸಲು ಏರ್ಪಡಿಸಿ ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ಕಾಯುತ್ತಿದೆ. ಈ ಕಮ್ಮಿಟಿಯ ಮುಂದೆ ಒಂದು ಕಡೆ ರುಶ್ಯದ ಪ್ರತಿನಿಧಿಗಳು, ಇನ್ನೊಂದು ಕಡೆ ಜರ್ಮನಿ, ಇಟಲಿಯ ಪ್ರತಿನಿಧಿಗಳು ಪರಸ್ಪರ ಆರೋಪಗಳನ್ನು ತಂದು ಒಬ್ಬರನ್ನೊಬ್ಬರು ಜರೆದಾಡುತಿದ್ದಾರೆ. ಆದರೆ ಈ ಆರೋಪಗಳನ್ನು ರುಜುಪಡಿಸುವ ಸಾಕ್ಷಿ ಸರಿಯಾಗಿ ಸಿಗುವುದಿಲ್ಲ. ಕಣ್ಣಿನಲ್ಲಿ ಹಾಕಿಕೊಂಡ ಎಣ್ಣೆಯಿಂದ ಕಣ್ಣಲ್ಲಿ ನೀರು ತುಂಬಿ ಅದನ್ನು ಒರಸಿಕೊಳ್ಳಲು ಕಣ್ಣು ಮುಚ್ಚಿದಾಗ ಇಂಗ್ಲೆಂಡ, ಫ್ರಾನ್ಸ್, ಮತ್ತು ಹೊಲ್ಲೆಂಡದ ಖಾಸಗಿ ಕಂಪೆನಿಗಳು ಪೊರ್ತುಗಲ್ಲಿನ ಮೂಲಕ ವಿಮಾನ, ಸಿಡಿಮದ್ದು, ಆಹಾರಸಾಮಗ್ರಿಗಳು ಇತ್ಯಾದಿಗಳನ್ನು ದಂಗೆಗಾರರಿಗೆ ಒಡಗಿಸುತ್ತಲೆ ಇದ್ದಾವೆಂದು ಕಂಡವರೆ ಲಂಡನ್ನಿನ ಪತ್ರಿಕೆಗೆ ಬರೆಯುತ್ತಾರೆ. ಈ ಕಣ್ಣುಮುಚ್ಚಾಲೆ ಆಟವು ಮೆಡ್ರಿಡ್ ದಂಗೆಗಾರರ ಕೈಸೇರಿದೊಡನೆ ನಿಂತು ಹೋಗಿ ಹೊಸ ಸರಕಾರವನ್ನೆ ಎಲ್ಲ ರಾಜ್ಯಗಳು ಒಪ್ಪಿಕೊಳ್ಳಲೂ ಬಹುದು.

ಫೆಸ್ಸಿರುಥ್ಮೆ ಮತ್ತು ನಾಶ್ನಿರುಥ್ಮೆ:—ಇವುಗಳ ಮೇಲಾಟವು ನಡೆಯುತ್ತಲೆ ಇದೆ. ಜರ್ಮನರೂ ಕೆಲವರು ರುಶ್ಯದ ಭದ್ರವಾದ ಸ್ಥಳಗಳ ಮಾಹಿತಿಯನ್ನು ಕಂಡುಹಿಡಿಯುವ ಗುಪ್ತ ಚಾರರೆಂದು ರುಜುವಾತು ಸಿಕ್ಕಿ ರುಶ್ಯ ಸರಕಾರವು ಅವರನ್ನು ನಿರ್ಬಂಧದಲ್ಲಿಟ್ಟು ವಿಚಾರ ನಡೆಸುತ್ತಲಿದೆ. ಜರ್ಮನರೊಂದಿಗೆ ಬೇರೆ ಕೆಲವು ರಾಜ್ಯಗಳ ಗುಪ್ತಚಾರರೂ ಹೀಗೆ ನಿರ್ಬಂಧಿಸಲ್ಪಟ್ಟಿದ್ದಾರೆ. ಆ ವಿಷಯವಾಗಿ ಆ ರಾಜ್ಯಗಳ ಆಕ್ಷೇಪ ಬಂದಂತೆ ಕಾಣುವುದಿಲ್ಲ. ಜರ್ಮನ ಸರಕಾರವು ಮಾತ್ರ ಆಕ್ಷೇಪಿಸಿ ತಮ್ಮ ಪ್ರಜೆಗಳನ್ನು ನಿರ್ಬಂಧದಿಂದ ಬಿಡುಗಡೆಮಾಡಬೇಕೆಂದು ರುಶ್ಯಕ್ಕೆ ತಿಳಿಸಿದೆ. ಪ್ರತ್ಯುತ್ತರವಿನ್ನೂ ಬರಲಿಲ್ಲ.

